ಸಂಪುಟ: 13 Volume | ಸಂಚಿಕೆ: 303 Issue | ಪುಟಗಳು 08 Pages | ಬುಧವಾರ 21 ಜನವರಿ 2026 | ₹6 | PRGINO.120927 (RNINO: KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಮಾನವನೆದೆಯಲಿಆರದೆಉರಿಯಲಿ ದೇವರು ಹಚ್ಚಿದದೀಪ, ರೇಗುವ ದನಿಗೂ ರಾಗವು ಒಲಿಯಲಿ ಮೂಡಲ ಮಧುರಾಲಾಪ.

–ಲಕ್ಷ್ಮೀನಾರಾಯಣ ಭಟ್

ರೊದ್ದಂ ಜ್ಯುವೆಲ್ಸ್ ಮೇಲೆ ಇಡಿ ದಾಳಿ 6

ಲಯನ್ಸ್ ವಿರುದ್ಧ ರೌಜಾ ಸ್ಟಾರ್ಸ್ ಜಯ 7

ನಿಸ್ವಾರ್ಥ ಸೇವೆಯ ದೃಢ ನಿಶ್ಚಯದ ಜನನಾಯಕ 8

## ಚೈತನ್ಯ ಶಾಲೆಯಲ್ಲಿ ಪ್ರವೇಶ ಆರಂಭ




**ವಿಜಯನಗರ (ಹೊಸಪೇಟೆ):** ನಗರದ ಶ್ರೀ ಚೈತನ್ಯ ಟೆಕ್ನೋ ಶಾಲೆ ಅವರಿಂದ ವಸಂತ ಪಂಚಮಿಯ ಶುಭಾಶಯಗಳು ಹಾಗೂ ಆರಂಭಿಕ ಪ್ರವೇಶದ ಮೇಲೆ ವಿಶೇಷ ರಿಯಾಯಿತಿಯನ್ನು ಪಡೆಯಿರಿ ಜನವರಿ 23 ರಂದು 2026–27ನೇ ಸಾಲಿನ ಪ್ರವೇಶಾತಿ ಆರಂಭ ಸಂಪರ್ಕ ಸಂಖ್ಯೆ: 7022977452,7022640624

ವಿಳಾಸ: ಶ್ರೀ ಚೈತನ್ಯ ಶಾಲೆ, ಹೋಟೆಲ್ ಹಂಪಿ ಇಂಟರ್ನ್ಯಾಷನಲ್ ಪಕ್ಕದಲ್ಲಿ, ರೈಲ್ವೆ ಸ್ಟೇಷನ್ ರಸ್ತೆ, ಹೊಸಪೇಟೆ –583201.

## ಪವಿತ್ರಾಗೌಡಗೆ ಹೈಕೋರ್ಟ್ ಶಾಕ್

**ಬೆಂಗಳೂರು:** ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ವಿಚಾರಣಾಧೀನ ಕೈದಿಯಾಗಿರುವ ಪವಿತ್ರಾಗೌಡಗೆ ಕರ್ನಾಟಕ ಹೈಕೋರ್ಟ್ ಶಾಕ್ ನೀಡಿದ್ದು, ಅವರಿಗೆ ನೀಡಿದ್ದ ಮನೆ ಊಟ ಸವಲತ್ತನ್ನು ದಿಢೀರ್ ರದ್ದು ಮಾಡಿದೆ. ಕೊಲೆ ಪ್ರಕರಣದಲ್ಲಿ ಜೈಲುಪಾಲಾಗಿರುವ ಪವಿತ್ರಾ ಗೌಡ ಪರವಾಗಿ ವಕೀಲರು ಇತ್ತೀಚೆಗೆ ಮನೆಯೂಟ ಬೇಕೆಂದು ಅರ್ಜಿ ಸಲ್ಲಿಸಿದ್ದರು. ಇದರ ಜತೆ ನಾಗರಾಜು ಮತ್ತು ಲಕ್ಷ್ಮಣ್ ಕೂಡ ಮನೆಯೂಟ ಬೇಕೆಂದು ಅರ್ಜಿ ಸಲ್ಲಿಸಿದ್ದರು. ಕೋರ್ಟ್ ಪವಿತ್ರಾ ಗೌಡ ಹಾಗೂ ಇತರೆ ಇಬ್ಬರಿಗೆ ಮನೆಯೂಟ ನೀಡಬೇಕೆಂದು ಆದೇಶ ನೀಡಿತ್ತು. ಮೊದಲು ದಿನಕ್ಕೊಮ್ಮೆ ಮನೆಯೂಟ ನೀಡುವ ಆದೇಶ ನೀಡಲಾಗಿತ್ತು. ಆ ಬಳಿಕ ಆದೇಶವನ್ನು ಮಾರ್ಪಾಟು ಮಾಡಿ ವಾರಕೊಮ್ಮೆ ಮಾತ್ರ ಮನೆಯೂಟ ನೀಡಬೇಕೆಂದು 57ನೇ ಸಿಸಿಎಚ್ ನ್ಯಾಯಾಲಯ ಹೇಳಿತ್ತು.

## ಸಚಿವ ಈಶ್ವರ್ ಖಂಡ್ರೆ ಅವಿರೋಧ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಅವಿರೋಧವಾಗಿ ಆಯ್ಕೆಮಾಡಲಾಗಿದೆ ಎಂದು ಸಭಾದ ರಾಜ್ಯಾಧ್ಯಕ್ಷ ಶಂಕರ ಮಹಾದೇವ ಬಿದರಿ ತಿಳಿಸಿದ್ದಾರೆ. ಬೆಂಗಳೂರಿನಲ್ಲಿಂದು ನಡೆದ ಸಭಾದ ಕಾರ್ಯಕಾರಿಣಿ ಸಭೆಯಲ್ಲಿ ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ಸಭಾದ ಮಹಾ ಪ್ರಧಾನ ಕಾರ್ಯದರ್ಶಿಯಾಗಿರುವ ಈಶ್ವರ ಬಿ ಖಂಡ್ರೆ ಅವರನ್ನು ಆಯ್ಕೆ ಮಾಡಲು ನಿರ್ಣಯ ಕೈಗೊಳ್ಳಲಾಯಿತು ಎಂದಿದ್ದಾರೆ.

ಇಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಈಶ್ವರ ಬಿ ಖಂಡ್ರೆ ಅವರನ್ನು



ಆಯ್ಕೆಮಾಡಲು ಎಲ್ಲ ಸದಸ್ಯರೂ ಒಮ್ಮತ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಅವಿರೋಧವಾಗಿ ಆಯ್ಕೆ ನಡೆಯಿತು.

## ಮುಳುಗುವವನಿಗೆ ಹೆಸರೇ ಆಸರೆ..!

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಮುಳುಗುವವನಿಗೆ ಹುಲ್ಲು ಕಡ್ಡಿಯ ಆಸರೆ ಎನ್ನುವಂತೆ, ಬಿಜೆಪಿಯಲ್ಲಿ ಅಸ್ತಿತ್ವ ಕಳೆದುಕೊಳ್ಳುತ್ತಿರುವವರಿಗೆ ನನ್ನ ಹೆಸರೇ ಆಸರೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ "ಪ್ರಿಯಾಂಕ್ ಖರ್ಗೆ ತೀವ್ರ ವಾಗ್ದಾಳಿ ನಡೆಸಿದ್ದಾರೆ.



ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಸುಧೀರ್ಘ ಪೋಸ್ಟ್ ಮಾಡಿರುವ ಪ್ರಿಯಾಂಕ್ ಖರ್ಗೆ, ಬಿಜೆಪಿಯ ಮಾಜಿ ಶಾಸಕರೊಬ್ಬರು ಅಪ್ರಸ್ತುತಗೊಳ್ಳುತ್ತಿದ್ದೇವೆ ಎನಿಸಿದಾಗ ನನ್ನ ಹೆಸರು ಹಿಡಿದುಕೊಂಡು ಚಾಲ್ತಿಗೆ ಬರುವ ಪ್ರಯತ್ನ ನಡೆಸಿದ್ದಾರೆ. ಪ್ರಜ್ಞೆ ಇಲ್ಲದವರ ತರ್ಕವಿಲ್ಲದ ಮಾತುಗಳಿಗೆ ಉತ್ತರ ನೀಡುವುದು ಸಮಯ ವ್ಯರ್ಥವೇ ಸರಿ, ಆದರೆ ಸಚಿವನಾಗಿ ಕುತರ್ಕಗಳಿಗೂ ಉತ್ತರಿಸುವುದು ನನ್ನ ಜವಾಬ್ದಾರಿಯಾಗಿದೆ ಎಂದು ತಿಳಿಸಿದ್ದಾರೆ.

ಬಿಜೆಪಿ ಕಚೇರಿಯ ಮೂಲೆಯಲ್ಲಿ ಗುಜರಿಯ ತೂಕಕ್ಕೆ ಹಾಕಲು ಇಟ್ಟಿದ್ದ ಯಾವುದೋ ಪೇಪರ್ ಬಂಡಲ್ ನ್ನು ಮುಂದೆ ಇಟ್ಟು–ಕೊಂಡು ತರ್ಕವಿಲ್ಲದ, ಹುರುಳಿಲ್ಲದ, ಮತ್ತು ಸತ್ಯಾಂಶವಿಲ್ಲದ ಆರೋಪಗಳನ್ನು ಮಾಡಿದ್ದಾರೆ. ಗುಡ್ಡ ಅಗೆಯುವವರಿಗೆ ಇಲಿಯನ್ನಾದರೂ ಹಿಡಿಯುವ ಗುರಿ ಇರಬೇಕು, ಇವರಿಗೆ ಜಿರಳೆ ಹಿಡಿಯಲೂ ಸಾಧ್ಯವಾಗಲಿಲ್ಲ ಎಂದು ಟಾಂಗ್ ಕೊಟ್ಟಿದ್ದಾರೆ.

# ಬಿಜೆಪಿ ಬಜೆಟ್ ಕೌಂಟ್‌ಡೌನ್

### ಸಚಿವೆ ನಿರ್ಮಲಾ 2026–27ರ ಸಾಲಿನ ಆಯ ವ್ಯಯದ ಲೆಕ್ಕಾಚಾರ | ಹೊಸ ಕ್ಷೇತ್ರ ಘೋಷಣೆಯ ನಿರೀಕ್ಷೆ

• ಮಲ್ಲಮ್ಮ ನುಡಿ ವಾರ್ತೆ ದಿಲ್ಲಿ

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಲಿರುವ ಕೇಂದ್ರ ಬಜೆಟ್ ದೇಶದ ಜನತೆಗೆ ಹಲವು ನಿರೀಕ್ಷೆಗಳನ್ನು ಹುಟ್ಟುಹಾಕಿದೆ. 2026–27ರ ಸಾಲಿನ ಆಯ ವ್ಯಯಗಳ ಕೇಂದ್ರ ಬಜೆಟ್ ಮಂಡನೆಗೆ ಕೌಂಟ್‌ಡೌನ್ ಆರಂಭವಾಗಿದೆ. ಈಗಾಗಲೇ ಹಲವು ಕ್ಷೇತ್ರಗಳು ಹೊಸ ಘೋಷಣೆಯ ನಿರೀಕ್ಷೆಯಲ್ಲಿದೆ.

**ತೆರಿಗೆ ಇಳಿಕೆ:** ವಿಶೇಷವಾಗಿ ತೆರಿಗೆ ವಿನಾಯಿತಿ, ಆರೋಗ್ಯ, ಔಷಧಿಗಳ ಮೇಲಿನ ತೆರಿಗೆ ಇಳಿಕೆ, ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರಗಳು ಹೊಸ ಯೋಜನೆಗಳ ನಿರೀಕ್ಷೆಯಲ್ಲಿದೆ. ಇದರ ನಡುವೆ ಹಣಕಾಸು ಸಚಿವೆ ನಿರ್ಮಲಾ ಸೀತರಾಮನ್ ಗಂಡ ಹೆಂಡತಿಗೆ ಭರ್ಜರಿ ಗಿಫ್ಟ್ ನೀಡಲು ಮುಂದಾಗಿದ್ದಾರೆ.

**ಮಹತ್ವದ ಸಲಹೆ:** ಮದುವೆಯಾದ ಜೋಡಿಗಳಿಗೆ ಈ ಬಾರಿಯ ಬಜೆಟ್ಲ್ಲಿ ಬಿಗ್ ರಿಲೀಫ್ ಸಿಗುವ ಸಾಧ್ಯತೆ ಇದೆ. ಹೌದು ಗಂಡ ಹೆಂಡತಿ ಜೊತೆಯಾಗಿ ತೆರಿಗೆ ಸಲ್ಲಿಕೆ ಮಾಡುವ ಅವಕಾಶ ನೀಡುವ ಸಾಧ್ಯತೆ ಇದೆ. ಇದರಿಂದ ಗಂಡ ಹೆಂಡತಿ ತೆರಿಗೆ ಉಳಿತಾಯ ಮಾಡಲು ಸಾಧ್ಯವಾಗಲಿದೆ. ಈ ಕುರಿತು ಇಂಡಿಯನ್ ಚಾರ್ಟೆಡ್ ಅಕೌಂಟೆಂಟ್ ಮಹತ್ವದ ಸಲಹೆ ಕೊಟ್ಟಿದೆ.



### ಟ್ಯಾಕ್ಸ್ ಸಲ್ಲಿಕೆಗೆ ಅವಕಾಶ

ಹಲ ದೇಶಗಳಲ್ಲಿರುವಂತೆ ಪತಿ ಹಾಗೂ ಪತ್ನಿ ಇಬ್ಬರು ಜೊತೆಯಾಗಿ ಟ್ಯಾಕ್ಸ್ ಸಲ್ಲಿಕೆಗೆ ಅವಕಾಶ ನೀಡಬೇಕು ಎಂದು ಐಸಿಎಐ ಸಲಹೆ ನೀಡಿದೆ. ಈ ಸಲಹೆ ಬಜೆಟ್ ಸಭೆಯಲ್ಲಿ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಐಸಿಎಐ ಗಂಡ ಹೆಂಡತಿ ಟ್ಯಾಕ್ಸ್ ಸಲ್ಲಿಕೆಗೆ ಹಲವು ಸೂಚನೆ ಹಾಗೂ ಸಲಹೆಗಳನ್ನು ನೀಡಿದೆ. ಇದರಿಂದ ದಂಪತಿಗಳ ಟ್ಯಾಕ್ಸ್ ಉಳಿತಾಯ ಮಾಡಲು ನೆರವಾಗಲಿದೆ.

### ಗಂಡ ಹೆಂಡತಿ ಟ್ಯಾಕ್ಸ್ ಸಲ್ಲಿಕೆ, ವಿನಾಯಿತಿ ಮೊತ್ತ ಸಡಿಲಿಕೆ

ಗಂಡ ಹೆಂಡತಿ ಟ್ಯಾಕ್ಸ್ ಬೇರೆ ಬೇರೆ ಅಂದರೆ ಇಬ್ಬರು ಬೇರೆ ಬೇರೆ ಪ್ಯಾನ್ ಕಾರ್ಡ್ ಮೂಲಕ ಸಲ್ಲಿಕೆ ಮಾಡಲಾಗುತ್ತದೆ. ಒಂದು ವೇಳೆ ಹೆಂಡತಿ ಆದಾಯಗಳಿಸುತ್ತಿಲ್ಲದಿದ್ದರೆ ಅವರ ಟ್ಯಾಕ್ಸ್ ವಿನಾಯಿತಿಗಳು ಉಪಯೋಗ ಮಾಡಲು ಸಾಧ್ಯವಾಗುದಿಲ್ಲ. ಇತ್ತ ಗಂಡನಿಗೆ ಟ್ಯಾಕ್ಸ್ ಹೊರೆಯಾಗಲಿದೆ. ಆದರೆ ಇಬ್ಬರು ಜೊತೆಯಾಗಿ ಸಲ್ಲಿಕೆ ಮಾಡುವ ಅವಕಾಶ ನೀಡಿದರೆ ವಿನಾಯಿತಿ ಮೊತ್ತ ಸಡಿಲಿಕೆ ಸಾಧ್ಯತೆ ಇದೆ.

### ಒಟ್ಟು ಆದಾಯದ ಮೇಲೆ ವಿನಾಯಿತಿ..?

ಒಂದು ವೇಳೆ ಪತಿ ಹಾಗೂ ಪತ್ನಿ ಇಬ್ಬರು ಆದಾಯಗಳಿಸುತ್ತಾರೆ. ಇಬ್ಬರು ಜೊತೆಯಾಗಿ ತೆರಿಗೆ ಸಲ್ಲಿಕೆ ಮಾಡುವಾಗ ಒಟ್ಟು ಆದಾಯದ ಮೇಲೆ ವಿನಾಯಿತಿ ವಂಚಿತರಾಗುವಂತಿದ್ದರೆ, ಇಂತಹ ಸಂದರ್ಭಗಳಲ್ಲಿ ಸದ್ಯ ಇರುವಂತೆ ಬೇರೆ ಬೇರೆಯಾಗಿ ತೆರಿಗೆ ಪಾವತಿಗೆ ಅವಕಾಶ ಮಾಡಿಕೊಡಬೇಕು ಎಂದು ICAI ಸಲಹೆ ನೀಡಿರುವುದು ಇಲ್ಲಿ ಗಮನಾರ್ಹವಾಗಿದೆ.




### ಈ ಬಜೆಟ್ನಲ್ಲಿ ಘೋಷಣೆ ಸಾಧ್ಯತೆ

ಗಂಡ ಹೆಂಡತಿ ಜೊತೆಯಾಗಿ ಟ್ಯಾಕ್ಸ್ ಸಲ್ಲಿಕೆ ಘೋಷಣೆ ಈ ಬಜೆಟ್ನಲ್ಲಿ ಮಾಡುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ. ಈ ಘೋಷಣೆ ಭಾರತದಲ್ಲಿ ಹಲವು ಕುಟುಂಬಗಳ ತೆರಿಗೆ ಹಣ ಉಳಿತಾಯ ಮಾಡಲಿದೆ. ಇಷ್ಟೇ ಅಲ್ಲ ಹಲವು ತೆರಿಗೆ ವಿನಾಯಿತಿ ಹಾಗೂ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗಲಿದೆ.




## ಎಲ್ಲಾ ಇಲಾಖೆಗಳಲ್ಲೂ ಪ್ರಾಮಾಣಿಕತೆ ಹಾಗೂ ಭ್ರಷ್ಟಾಚಾರ ರಹಿತ ವಾತಾವರಣ ಕಲ್ಪಿಸಿ: ಸಿಎಂ ಸಿದ್ದರಾಮಯ್ಯ



ಬೀದರ್ ಗ್ರಾಮೀಣ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕರಾದ ಮಹೇಶಗೌಡ ಪಾಟೀಲ ಅವರಿಗೆ 2026ನೇ ಸಾಲಿನ ಮಲ್ಲಮ್ಮ ನುಡಿ ಕ್ಯಾಲೆಂಡರ್ ವಿತರಿಸಲಾಯಿತು, ಇದೆ ಸಂದರ್ಭದಲ್ಲಿ ಮಲ್ಲಮ್ಮ ನುಡಿ ಪ್ರಾದೇಶಿಕ ಪತ್ರಿಕೆಯ ಜಿಲ್ಲಾ ವರದಿಗಾರರಾದ ಸತೀಷಕುಮಾರ ತುಪ್ಪದ , ಚಿಟಗುಪ್ಪಾ ವರದಿಗಾರರಾದ ರಾಜಕುಮಾರ ಆರ್ ಹಡಪದ, ಮಂಜುನಾಥ, ಆರಿಫ್ ಸರ್ ಉಪಸ್ಥಿತಿ ಇದ್ದರು,

# ಡಾ.ಭೀಮಣ್ಣ ಖಂಡ್ರೆ ಅವರ ಭಾವಚಿತ್ರಕ್ಕೆ ಪುಷ್ಪ ನಮನ

ಮಲ್ಲಮ್ಮ ನುಡಿ ವಾರ್ತೆ

ಬೀದರ್ ಜ 20:–ಗಡಿ ಜಿಲ್ಲೆ ಬೀದರ್ ನ ಅಭಿವೃದ್ಧಿಯಲ್ಲಿ ಶತಾಯಷಿ ಡಾ.ಭೀಮಣ್ಣ ಖಂಡ್ರೆ ಕೊಡುಗೆ ಅನನ್ಯವಾಗಿದೆ ಎಂದು ಡಾ.ರಾಜಶೇಖರ ಶಿವಾಚಾರ್ಯರು ಹೇಳಿದರು.

ನಗರದ ನೌಬಾದ್ ಸಮೀಪದ ಜ್ಞಾನ ಶಿವಯೋಗಾಶ್ರಮದಲ್ಲಿ ಆಯೋಜಿಸಿದ್ದ ಡಾ.ಭೀಮಣ್ಣ ಖಂಡ್ರೆ ಅವರ ಶ್ರದ್ಧಾಂಜಲಿ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ನಾಲ್ಕು ಬಾರಿ ಶಾಸಕರಾಗಿ, ಎರಡು ಅವಧಿಗೆ ವಿಧಾನ ಪರಿಷತ್ ಸದಸ್ಯರಾಗಿ ಮತ್ತು ಒಂದು ಸಲ ಸಾರಿಗೆ ಇಲಾಖೆ ಸಚಿವರಾಗಿ ಡಾ.ಭೀಮಣ್ಣ ಖಂಡ್ರೆ ಅವರು ಜಿಲ್ಲೆಯಲ್ಲಿ ಕನ್ನಡ, ಶಿಕ್ಷಣ, ಆರೋಗ್ಯ, ಕೃಷಿ, ನೀರಾವರಿ, ಸಹಕಾರ, ಸಾರಿಗೆ ಸೇರಿ ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ್ದಾರೆ ಎಂದು ಬಣ್ಣಿಸಿದರು.

ಸ್ವಾರ್ಥ ರಾಜಕಾರಣಕ್ಕಾಗಿ ಅವರು ಎಂದಿಗೂ ತತ್ವ ಸಿದ್ಧಾಂತ ಬಿಟ್ಟು ಕೊಡಲಿಲ್ಲ. ಸರ್ವ ಸಮುದಾಯದ ಹಿತ ಅವರು ಬಯಸಿದ್ದರು.

ದೀನ ದುರ್ಬಲ, ಹಿಂದುಳಿದ ವರ್ಗಗಳ ಕಲ್ಯಾಣ ಅವರ ಗುರಿಯಾಗಿತ್ತು. ಸಮುದಾಯದ ಸಂಘಟನೆಗೆ ಅವರು ಅಪೂರ್ವ ಕೊಡುಗೆ ನೀಡಿದ್ದಾರೆ. ಅಖಿಲ ಭಾರತ ವೀರಶೈವ ಮಹಾಸಭೆಗೆ ಹೊಸ ದಿಕ್ಕು ನೀಡಿ ಮಾದರಿಯಾಗಿದ್ದಾರೆ.

ಡಾ.ಚನ್ನಬಸವಪಟ್ಟದ್ದೇವರೊಂದಿಗೆ ಕುಡಿಕೊಂಡು ಅನುಭವ ಮಂಟಪ ಪೂರ್ನನಿರ್ಮಿಸಿದ್ದರು. ಇಂತಹ ಅನೇಕ ವಿಧಾಯಕ ಕಾರ್ಯಗಳ ಮೂಲಕ ವಿಶಿಷ್ಟವಾಗಿ ಸೇವೆ ಸಲ್ಲಿಸಿರುವ ಡಾ.ಭೀಮಣ್ಣ ಖಂಡ್ರೆ ಆದರ್ಶಗಳನ್ನು ಇಂದಿನ ಯುವ ಜನಾಂಗ ಅನುಸರಿಸಿ ಸನ್ಮಾರ್ಗದಲ್ಲಿ ನಡೆಯಬೇಕು ಎಂದು ತಿಳಿಸಿದರು.



ಈ ಸಂದರ್ಭದಲ್ಲಿ ಭಾಲ್ಕಿ ತಾಲೂಕು ಸರಕಾರಿ ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರ ಬನ್ನಾಳೆ, ಪ್ರಮುಖರಾದ ಶಿವಕುಮಾರ ಪಾಟೀಲ್ ತೇಗಂಪುರ, ಕುಶಾಲ ಯಾಬಾ, ರವೀಂದ್ರ ಯರನಳ್ಳೆ, ಜ್ಯೋತಿಷ ಹಲಬರ್ಗೆ, ರಾಜಕುಮಾರ ನಾಯಕೋಡೆ, ಪವನಕುಮಾರ ಬಿರಾದಾರ್, ದತ್ತಾತ್ರಿ ಹಂಪಾ, ಶಿವರಾಜ ಕಲ್ಲೂರೆ ಸೇರಿದಂತೆ ಹಲವರು ಇದ್ದರು.

## ಈಶ್ವರ ಬಿ. ಖಂಡ್ರೆ ಅವಿರೋಧ ಆಯ್ಕೆ ಬಸವರಾಜ್ ಜಾಬಶೆಟ್ಟಿ ಹರ್ಷ

• ಮಲ್ಲಮ್ಮ ನುಡಿ ವಾರ್ತೆ ಬೀದರ್ :

ಬೀದರ್ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರಾದ ಈಶ್ವರ ಬಿ. ಖಂಡ್ರೆ ಅವರು ಅಖಿಲ ಭಾರತ ವೀರಶೈವ ಮಹಾಸಭೆಯ 24ನೇ ರಾಷ್ಟ್ರೀಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವುದಕ್ಕೆ ಬೀದರ್ ನಗರ ಅಭಿವೃದ್ಧಿ ಪ್ರಾಧಿಕಾರದ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿಯ ಬೀದರ್ ಅಧ್ಯಕ್ಷರಾದ ಬಸವರಾಜ್ ಜಾಬಶೆಟ್ಟಿ ಅವರು ಹರ್ಷ ವ್ಯಕ್ತಪಡಿಸಿದ್ದಾರೆ.



ಸಾಮಾಜಿಕ ನ್ಯಾಯ, ಸೇವೆ ಹಾಗೂ ಬಸವತತ್ವಾಧಾರಿತ ಚಿಂತನೆಗಳಿಗೆ ನಿಷ್ಠರಾಗಿರುವ ಈಶ್ವರ ಬಿ. ಖಂಡ್ರೆ ಅವರ ನಾಯಕತ್ವಕ್ಕೆ ದೊರೆತ ಈ ಏಕಮತದ ಆಯ್ಕೆ, ವೀರಶೈವ–ಲಿಂಗಾಯತ ಸಮುದಾಯದ ವಿಶ್ವಾಸ ಹಾಗೂ ಏಕತೆಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ ಎಂದು ಅವರು ಹೇಳಿದ್ದಾರೆ, ಈಶ್ವರ ಬಿ.ಖಂಡ್ರೆ ಅವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆ ಇನ್ನಷ್ಟು ಬಲಿಷ್ಠವಾಗಿ ರೂಪುಗೊಂಡು, ಸಮುದಾಯದ ಹಿತ ಹಾಗೂ ಸರ್ವಾಂಗೀಣ ಅಭಿವೃದ್ಧಿಗಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂಬ ವಿಶ್ವಾಸವನ್ನೂ ಬಸವರಾಜ್ ಜಾಬಶೆಟ್ಟಿ ಅವರು ವ್ಯಕ್ತಪಡಿಸಿದ್ದಾರೆ.

## ಸ್ಟೇಷನ್ ಈಗೆಲ್ಸ್ ಗೆ ಜಯ



• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

ಸ್ಟೇಷನ್ ಈಗಲ್ಸ್ ಏಃಓ ಪ್ರೀಮಿಯರ್ ಲೀಗ್ 2026 ರಲ್ಲಿ ಮೊದಲ ವಿಜಯವನ್ನು ನೋಂದಾಯಿಸಿದೆ. ಸೋಮವಾರ ಸಂಗತ್ರಾಸವಾಡಿಯ ಗ್ರೌಂಡ್‌ನ ಕೆಬಿಎನ್ ಟರ್ಫ್ ಗ್ರೌಂಡ್‌ನಲ್ಲಿ ಬಹು ನಿರೀಕ್ಷಿತ ಕೆಬಿಎನ ಪ್ರೀಮಿಯರ್ ಲೀಗ್ (ಏಃಓಕಐ) 2026 ರ ಆರಂಭ ದಿನದಂದು ಮಾರ್ಕೆಟ್ ಸೂಪರ್ ಕಿಂಗ್ಸ್ ಅನ್ನು 23 ರನ್‌ಗಳಿಂದ ಸೋಲಿಸುವ ಮೂಲಕ ಸ್ಟೇಷನ್ ಈಗಲ್ಸ್ ತಮ್ಮ ಗೆಲುವಿನ ಆರಂಭವನ್ನು ಗುರುತಿಸಿತು.

ಕೆಬಿಎನ ಕ್ಯಾಂಪಸ್ ನಿರ್ದೇಶಕ ಡಾ. ಸೈಯದ್ ಮುಸ್ತಫಾ ಅಲ್ ಹುಸೇನಿ ಅವರು ಟಾಸ ನಡೆಸಿದರು.ಪಂದ್ಯಾವಳಿಯ ನಿರ್ದೇಶಕ ಶ್ರೀ ವಿಶ್ವನಾಥ್ ಮತ್ತು ಶ್ರೀ ಸುಹೇಲ್ ಮುನ್ಷಿ ಉಪಸ್ಥಿತರಿದ್ದರು. ಟಾಸ್ ಗೆದ್ದ ಸ್ಟೇಷನ್ ಈಗಲ್ಸ್ ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು.

ತುಷಾರ್ ಸಿಂಗ್ ಮತ್ತು ಕೇದಾರನಾಥ್ ಅವರೊಂದಿಗೆ ಸ್ಟೇಷನ್ ಈಗಲ್ಸ್ ತಮ್ಮ ಇನ್ನಿಂಗ್ಸ್ ಆರಂಭಿಸಿದರು, ಆದರೆ ಮೂರನೇ ಎಸೆತದಲ್ಲಿ ತುಷಾರ್ ಔಟಾದ ಕಾರಣ ಆರಂಭಿಕ ಹಿನ್ನಡೆ ಅನುಭವಿಸಿತು. ಮಾರ್ಕೆಟ್ ಸೂಪರ್ ಕಿಂಗ್ಸ್ ತಂಡದ ಕ್ಲೆಮೆಂಟ್ ರಾಜಮೋಹನ್ ಟೂರ್ನಿಯ ಮೊದಲ ವಿಕೆಟ್ ಪಡೆದರು. ಅಮಯ್ ಕೇದಾರನಾಥ ಜೊತೆ ಯಾದರು. ಕೇದಾರನಾಥ್ 16 ಎಸೆತಗಳಲ್ಲಿ ನಾಲ್ಕು ಬೌಂಡರಿ ಸೇರಿದಂತೆ 18 ರನ್ ಗಳಿಸಿದರು. ನಾಯಕ ಮೋಹಿತ್ ಬಿ. ಎ ಜೊತೆ ಅಮೇಯ್ ಜೋಡಿಯಾಗಿ, ಆಕ್ರಮಣಕಾರಿ ಮತ್ತು ಸೊಗಸಾದ ಬ್ಯಾಟಿಂಗ್ ಪ್ರದರ್ಶನದೊಂದಿಗೆ ಸ್ಕೋರಿಂಗ್ ದರವನ್ನು ವೇಗಗೊಳಿಸಿದರು ಅದು ಪ್ರೇಕ್ಷಕರನ್ನು ರೋಮಾಂಚನಗೊಳಿಸಿತು. ಮೋಹಿತ್ ಕೆಬಿಎನ್‌ಪಿಎಲ್ 2026ರಲ್ಲಿ ಅರ್ಧಶತಕ ಗಳಿಸಿದ ಮೊದಲ ಬ್ಯಾಟ್ಸ್‌ಮನ್ ಎನಿಸಿಕೊಂಡರು. 13ನೇ ಓವರ್‌ನಲ್ಲಿ ಮಾಧವ್ ಬಜಾಜ್ ಸಿದ್ದಾಂತ್ ನವಲೆ ಔಟಾದರು, ಮೋಹಿತ್ ಜೊತೆಗೂಡಿದ ಈ ಜೋಡಿ ಮುಂದಿನ ವಿಕೆಟ್‌ಗೆ 43 ರನ್ ಸೇರಿಸಿತು. ಸಿದ್ದಾಂತ್ 19 ರನ್ ಗಳಿಸಿದರೆ, ಶರಣ ಬಸವ ನಾಲ್ಕು ಬೌಂಡರಿ ಸಹಿತ 21 ರನ್ ಸೇರಿಸಿದರು. ನಾಯಕ ಮೋಹಿತ್ ಬಿ.ಎ ಔಟಾಗದೆ 69 ರನ್ ಗಳಿಸಿ ಸ್ಟೇಷನ್ ಈಗಲ್ಸ್ ತಂಡವನ್ನು 20 ಓವರ್ ಗಳಲ್ಲಿ 5 ವಿಕೆಟ್ ನಷ್ಟಕ್ಕೆ 173 ರನ್ ಗಳ ಪ್ರಬಲ ಮೊತ್ತಕ್ಕೆ ಮುನ್ನಡೆಸಿದರು.

ಮಾರ್ಕೆಟ್ ಸೂಪರ್ ಕಿಂಗ್ಸ್ ವಿಜಯರಾಜ್ ಮತ್ತು ಶರಣು ಅವರ ಚೇಸ್ ಅನ್ನು ಪ್ರಾರಂಭಿಸಿತು, ಆದರೆ ದೃಢವಾದ ಆರಂಭವನ್ನು ಪಡೆಯಲು ವಿಫಲವಾಯಿತು. 2ನೇ ಓವರ್ ನಲ್ಲಿ ಶಿವನಗೌಡ ಪಾಟೀಲ್ ಆರಂಭಿಕರನ್ನು ಔಟ್ ಮಾಡಿದರು. ಅನುರಾಗ್ ಮತ್ತು ಸೌರಬ್ ಮುತ್ತೂರ್ ಅವರು ಇನ್ನಿಂಗ್ಸ್ ಅನ್ನು ಮರುನಿರ್ಮಾಣ ಮಾಡಲು ಪ್ರಯತ್ನಿಸಿದರು, ಸ್ಕೋರ್ ಅನ್ನು 65 ರನ್‌ಗಳಿಗೆ ಕೊಂಡೊಯ್ದರು. ಅನುರಾಗ್ ಆಕ್ರಮಣಕಾರಿ ಆಟವಾಡಿದರು, 19 ಎಸೆತಗಳಲ್ಲಿ ನಾಲ್ಕು ಬೌಂಡರಿ ಮತ್ತು ಎರಡು ಸಿಕ್ಸರ್‌ಗಳನ್ನು ಒಳಗೊಂಡಂತೆ ತ್ವರಿತ 34 ರನ್ ಗಳಿಸಿದರು, ಸೌರಬ್ ಮುತ್ತೂರ್ 27 ರನ್ ಕೊಡುಗೆ ನೀಡಿದರು. ಮಾಧವ್ ಬಜಾಜ್ 33 ರನ್‌ಗಳೊಂದಿಗೆ ಸ್ಥಿರವಾಗಿ ನಿಂತರು, ಆದರೆ ಸೂಪರ್ ಕಿಂಗ್ಸ್ ನಂತರ ನಿಯಮಿತ ಮಧ್ಯಂತರದಲ್ಲಿ ವಿಕೆಟ್‌ಗಳನ್ನು ಕಳೆದುಕೊಂಡಿತು.ಆವೇಗವನ್ನು ಕಾಯ್ದುಕೊಳ್ಳಲು ಸಾಧ್ಯವಾಗದೆ, ಅವರು ಗುರಿಗಿಂತ ಕಡಿಮೆಯಾದರು. ಈಗಲ್ಸ್ ನ ಮೋಹಿತ್ ಬಿ ಎ ಪಂದ್ಯ ಪುರುಷ ರಾದರು.

## 'ಚೆಕ್‌ಮೇಟ್ ಚಾಲೇಂಜ್' ಅಂತರರಾಜ್ಯ ಮುಕ್ತ ಚೆಸ್ ಪಂದ್ಯಾವಳಿ



ಬೀದರ್: ಇಲ್ಲಿಯ ಶ್ರೀ ರಾಮ ಸಮರ್ಥ ಫಂಕ್ಷನ್ ಹಾಲ್‌ನಲ್ಲಿ ಬೀದರ್ ಚೆಸ್ ಅಸೋಸಿಯೇಷನ್ ಹಾಗೂ ರೋಟರಿ ಕ್ಲಬ್ ಆಫ್ ಬೀದರ್ ನ್ಯೂ ಸೆಂಚುರಿ ವತಿಯಿಂದ ಹಮ್ಮಿಕೊಂಡಿದ್ದ 'ಚೆಕ್‌ಮೇಟ್ ಚಾಲೇಂಜ್' ಅಂತರರಾಜ್ಯ ಮುಕ್ತ ಚೆಸ್ ಪಂದ್ಯಾವಳಿಯಲ್ಲಿ ತಮಿಳುನಾಡಿನ ಅಹೆಮ್ಮದ್ ಮದೀನ್ ಎಸ್.ಅರಂತಗಿ ಸಮಗ್ರ ಚಾಂಪಿಯನ್ ಆಗಿ ಹೊರ ಹೊಮ್ಮಿದರು.ಅವರು ಪ್ರಥಮ ಸ್ಥಾನದೊಂದಿಗೆ ರೂ. 5 ಸಾವಿರ ನಗದು ಬಹುಮಾನಕ್ಕೆ ಭಾಜನರಾದರು. ಹೈದರಾಬಾದನ ರಾಜಪಾಲ್‌ಸಿಂಗ್ ದ್ವಿತೀಯ ಹಾಗೂ ಸಂತೋಷಕುಮಾರ ತೃತೀಯ ಸ್ಥಾನ ಗಳಿಸಿ, ಕ್ರಮವಾಗಿ ರೂ. 3 ಸಾವಿರ ಹಾಗೂ ರೂ. 2 ಸಾವಿರ ನಗದು ಬಹುಮಾನಕ್ಕೆ ಪಾತ್ರರಾದರು.

60 ವರ್ಷ ಮೇಲ್ಪಟ್ಟವರ ವಿಭಾಗದಲ್ಲಿ ಬೀದರ್‌ನ ಅವಿನಾಶಕುಮಾರ ಪ್ರಥಮ ಸ್ಥಾನ ಗಳಿಸಿ, ರೂ. 3 ಸಾವಿರ ನಗದು ಬಹುಮಾನ ಪಡೆದರು. ಕಲಬುರಗಿಯ ಶಂಕರ ಒಂಟೆ ದ್ವಿತೀಯ ಸ್ಥಾನ ಪಡೆದು, ರೂ. 1 ಸಾವಿರ ನಗದು ಬಹುಮಾನ ಗಳಿಸಿದರು. 'ಬೀದರ್ ಬೆಸ್ಟ್ ಮೇಲ್ ವಿಭಾಗದಲ್ಲಿ ನಾಗರಾಜ ರಾಜೋಳೆ ಪ್ರಥಮ ಸ್ಥಾನದೊಂದಿಗೆ ರೂ. 5 ಸಾವಿರ ನಗದು ಬಹುಮಾನ ಮತ್ತು ಸುಶೀಲ್ ಮಂದನಾ ದ್ವಿತೀಯ ಸ್ಥಾನದ ಜತೆಗೆ ರೂ. 3 ಸಾವಿರ ರೂಪಾಯಿ ಬಹುಮಾನ ತಮ್ಮದಾಗಿಸಿಕೊಂಡರು.

ಬೀದರ್ ಬೆಸ್ಟ್ ಫಿಮೇಲ್ ವಿಭಾಗದಲ್ಲಿ ಆರತಿ ರಾಠೋಡ್ ಪ್ರಥಮ ಸ್ಥಾನದೊಂದಿಗೆ ರೂ. 5 ಸಾವಿರ ನಗದು ಬಹುಮಾನ ಮತ್ತು ಅನುಷ್ಕಾ ಮಡಕಿ ದ್ವಿತೀಯ ಸ್ಥಾನದ ಜತೆಗೆ ರೂ. 3 ಸಾವಿರ ನಗದು ಬಹುಮಾನಕ್ಕೆ ಭಾಜನರಾದರು. ಪಂದ್ಯಾವಳಿಯಲ್ಲಿ ಇತರ ವಿವಿಧ ವಿಭಾಗಗಳಲ್ಲೂ ಸ್ಪರ್ಧೆಗಳು ನಡೆದವು.

ಬೀದರ್‌ನ ನ್ಯಾಷನಲ್ ಆಂಗ್ಲ ಮಾಧ್ಯಮ ಪಬ್ಲಿಕ್ ಶಾಲೆ ಉತ್ತಮ ಶಾಲೆ ಹಾಗೂ ಬೀದರ್‌ನ ಸ್ವಾಮಿ ವಿವೇಕಾನಂದ ಚೆಸ್ ಅಕಾಡೆಮಿ ಉತ್ತಮ ಅಕಾಡೆಮಿ ಪ್ರಶಸ್ತಿಗೆ ಪಾತ್ರವಾಯಿತು.ಸಮಾರೋಪ ಸಮಾರಂಭದಲ್ಲಿ ಕೆ.ಆರ್.ಇ.ಸಂಸ್ಥೆಯ ನ್ಯಾಸ್ ಅಧ್ಯಕ್ಷ ಡಾ. ಬಸವರಾಜ ಜಿ. ಪಾಟೀಲ ಅಷ್ಟೂರು ಚೆಸ್ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಿದರು.ಕರ್ನಾಟಕ ಪಶು ವೈದ್ಯಕೀಯ ವಿಶ್ವವಿದ್ಯಾಲಯದ ಪರೀಕ್ಷಾ ನಿಯಂತ್ರಕ ಶ್ರೀಕಾಂತ ಕುಲಕರ್ಣಿ, ಚೆಕ್‌ಮೇಟ್ ಚಾಲೇಂಜ್ ಅಧ್ಯಕ್ಷ ಡಾ. ಚಂದ್ರಕಾಂತ ಕುಲಕರ್ಣಿ, ರೋಟರಿ ಕ್ಲಬ್ ಆಫ್ ಬೀದರ್ ನ್ಯೂ ಸೆಂಚುರಿಯ ಅಧ್ಯಕ್ಷ ನಾಗೇಶ ಪಾಟೀಲ, ಬೀದರ್ ಚೆಸ್ ಅಸೋಸಿಯೇಷನ್ ಅಧ್ಯಕ್ಷ ನಿತಿನ್ ಕರ್ಪೂರ, ರಾಹುಲ್ ಅಟ್ಟಲ್, ರಾಜಕುಮಾರ ಅಳ್ಳೆ, ಸತೀಶಕುಮಾರ ಸ್ವಾಮಿ, ಹಾವಶೆಟ್ಟಿ ಪಾಟೀಲ, ವಿಕ್ರಮ ತಗಾರೆ, ಡಾ. ಮಲ್ಲಿಕಾರ್ಜುನ ಚಟ್ನಳ್ಳಿ, ಡಾ. ರಘು ಕೃಷ್ಣಮೂರ್ತಿ, ಡಾ. ಆರತಿ ರಘು, ಸಚ್ಚಿದಾನಂದ ಚಿದ್ರೆ, ನಿತಿನ್ ಗೋಯಲ್, ಶಂಕರರಾವ್ ಕೊಟರಕಿ, ಗಜಾನನ ಡಿ. ಪೋಕಲವಾರ್, ವಿಜಯಕುಮಾರ ಬಿರಾದಾರ, ಪ್ರಭು ತಟಪಟ್ಟಿ, ಕಪಿಲ್ ಪಾಟೀಲ, ನಿತೇಶಕುಮಾರ ಬಿರಾದಾರ, ಬಸವಾಂಜಲಿ ಎಂ. ಚಟ್ನಳ್ಳಿ, ರೂಪಾಲಿ ಎನ್. ಕರ್ಪೂರ, ಅನ್ನಪೂರ್ಣ ಎಸ್. ಸ್ವಾಮಿ ಮತ್ತಿತರರು ಇದ್ದರು.ಪಂದ್ಯಾವಳಿಯಲ್ಲಿ ಬೀದರ್, ಕೊಪ್ಪಳ, ಬೆಂಗಳೂರು, ಹೈದರಾಬಾದ್, ಲಾತೂರ, ತಮಿಳುನಾಡು ಸೇರಿದಂತೆ ವಿವಿಧೆಡೆಯ 328 ಚೆಸ್ ಪಟುಗಳು ಭಾಗವಹಿಸಿದ್ದರು. ಇದರಲ್ಲಿ ಮೂವರು ಅಂಧರು ಹಾಗೂ ಒಬ್ಬರು ಅಂಗವಿಕಲರು ಪಾಲ್ಗೊಂಡಿದ್ದು ವಿಶೇಷವಾಗಿತ್ತು.

## ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ: ಆರ್.ಟಿ ಓ

ಮಲ್ಲಮ್ಮ ನುಡಿ ವಾರ್ತೆ

ಬೀದರ್ ಜ 20:–ವಿಧ್ಯಾರ್ಥಿಗಳು ವಾಹನ ಚಲಾಸುವಾಗ ಬಹಳ ಎಚ್ಚರಿಕ್ಕೆಯಿಂದ ವಾಹಾನ ಚಲಾಯಿಸಬೇಕೆಂದು ಬೀದರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಾದ ಜಿ.ಕೆ ಬಿರಾದರ ಅವರು ನುಡಿದರು,

ಸೋಮುವಾರ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಚೇರಿ ಜಿಲ್ಲಾ ಪೊಲೀಸ್ ಇಲಾಖೆ ,ಶ್ರೀ ಸ್ವಾಮಿ ನರೇಂದ್ರ ಪಿ.ಯು.ಕಾಲೇಜ ಹಾಗು ಬೀದರ ಮೋಟಾರ ವಾಹಾನ ತರಬೇತಿ ಶಾಲೆಯ ಸಹಯೋಗದಲಿ 37ನೇ ರಾಷ್ಟ್ರಿಯ ರಸ್ತೆ ಸುರಕ್ಷತಾ ಮಾಸಾಚರಣೆ ಕಾರ್ಯಕ್ರಮವನು ಸಸಿಗೆ ನೀರು ಎರೆಯುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ರಸ್ತೆ ಅಪಘಾತಕ್ಕೆ ಒಳಗಾದರೆ ಮೊದಲು ಪೆಟ್ಟು ಬಿಳುವುದು ತ್ತೆಲೆಗೆ ಹಾಗಾಗಿ ಎಲ್ಲರು ಕಡ್ಡಾಯವಾಗಿ ಹೆಲ್ಮೇಟ ಧರಿಸಿ ವಾಹನ ಚಲಾಯಿಸಬೇಕು. ಅಪಘಾತದಲ್ಲಿ ಒಳಗಾದ ವ್ಯಕ್ತಿಯ ಕೈ ಕಾಲು ಹಾಗು ಇನ್ನಿತರ ಗಾಯಗಳಾದರೆ ಬದುಕಬಹುದು. ತಲೆಗೆ ಪೆಟ್ಟಾದರೆ ಬದುಕಲ್ಲು ಸಾಧ್ಯವಿಲ ಎಂದರು. ಹೆಚ್ಚಿನ ಸಂಖ್ಯೆಯಲ್ಲಿ ಯುವಕರೆ ಅಪಘಾತಕ್ಕೆ ಒಳಗಾಗುತ್ತಿದ್ದಾರೆ. ಹಾಗಾಗಿ ಎಲ್ಲರು ಕಡ್ಡಾಯವಾಗಿ ಸಂಚಾರಿ ನಿಯಮ ಪಾಲನೆ ಮಾಡುವುದರಿಂದ ಅಪಘಾತ ಕಡಿಮೆ ಮಾಡಲು ಸಾಧ್ಯ ಎಂದು ನುಡಿದ್ದರು.



ಸಂಚಾರಿ ಪೋಲಿಸ ಠಾಣೆಯ ಪಿ.ಐ.ರಮೇಶ ಮೈಲೂರಕರ ಅವರು ಮಾತನಾಡಿ ವಾಹನದ ಮೇಲೆ ಇಬ್ಬರಿಗಿಂತ ಹೆಚ್ಚು ಜನರು ಪ್ರಯಾಣ ಮಾಡಬಾರದು.ವಾಹಾನ ಚಲಾಯಿಸುವಾಗ ಮೋಬೈಲ.ಹೇಡ್ ಫೋನ ಉಪಯೋಗಿಸಬಾರದು. ಮಧ್ಯ ಪಾನ ಮಾಡಿ ವಾಹಾನ ಚಲಾಯಿಸಬಾರದು.ಕಾರ ಚಾಲಕರು ಸೀಟ ಬೆಲ್ಟ ಕಡ್ಡಾಯವಾಗಿ ಧರಿಸಬೇಕು.ವಿಧ್ಯಾರ್ಥಿಗಳು ಅಟೋದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಯಾಣ ಮಾಡಬಾರದು. ವಿಧ್ಯಾರ್ಥಿಗಳು ಸಣ್ಣ ಪುಟ ಕೇಲಸಕ್ಕೆ ವಾಹಾನ ಉಪಯೋಗಿಸಬಾರದು ಎಂದು ನುಡಿದ್ದರು.

ಎನಎಚ65 ಅಧಿಕಾರಿ ರೇವಣ್ಣಸಿದ್ದಪ್ಪಾ ವಾಲಿ ಅವರು ಮಾತನಾಡಿ ದ್ವಿಚಕ್ರ ವಾಹನ ಸವಾರರು ಹೆಲ್ಮೇಟ ಧರಸಿದ ನಂತರ ಹೆಲ್ಮೆಟ್ ಒಳಗಡ ಫೋನ ಇಟ್ಟು ಮಾತನಾಡುತ್ತಾ ವಾಹಾನ ಚಲಾಯಿಸಬಾರದು ಒಂದು ವೇಳೆ ಚಾಲಾಯಿಸಿದ್ದರೆ ಅಪಘಾತಕ್ಕೆ ಒಳಗಾದರೆ ನಿಮ್ಮ ತ್ತೆಲೆಗೆ ತಿವ್ರ ಪೇಟಾಗುತ್ತದೆ ನಿಮ್ಮ ಜೀವಕ್ಕೆ ಅಪಾಯವಾಗಲು ಖಚಿತ ಎಂದು ನುಡಿದ್ದರು .

ಈ ಕಾರ್ಯಕ್ರಮದ ವೇದಿಕೆಯ ಮೇಲೆ ಮೋಟಾರ ವಾಹನ ನಿರಿಕ್ಷಕರಾದ ಹುಸೇನಸಾಬ ಲದಾಪ, ನಿರ್ದೇಶಕರು ಶಾಂತಿ ಕಿರಣ ಚಾರಿಟೇಬಲ ಟ್ರಸ್ಟನ, ಶ್ರೀಮತಿ ಕಲ್ಪನಾ ಪಿ ಮಟಪತಿ,ಶ್ರೀ ಸ್ವಾಮಿ ನರೇಂದ್ರ ಪಿ.ಯು.ಕಾಲೇಜನ ಪ್ರಾಚಾರ್ಯರಾದ ಕು.ಮಂಗಲಾ ಎನ್, ವಾಹಾನ ತರಬೇತಿ ಶಾಲೆಯ ಸಂಘಟನೆ ಕಾರ್ಯದರ್ಶಿ ಶಿವರಾಜ ಜಮಾದರ ಖಾಜಾಪುರ. ಬೀದರ ಮೋಟಾನ ವಾಹಾನ ತರಬೇತಿ ಶಾಲೆಯ ಸಂಘದ ಅಧ್ಯಕ್ಷರಾದ ಪ್ರಾಕಾಶ ಗುಮ್ಮೆ ಹಾಗು ಕಾಲೆಜಿನ ವಿಧ್ಯಾರ್ಥಿ ವಿಧ್ಯೆರ್ಥಿನಿಯರು ಉಪಸ್ಥಿತರಿದ್ದರು.

ಈ ಕಾರ್ಯಕ್ರಮದಲ್ಲಿ ಸಾರಿಗೆ ಇಲಾಖೆಯಿಂದ ವಿಧ್ಯಾರ್ಥಿಗಳಿಗೆ ಉಚಿತ ಹೆಲ್ಮೇಟ ನಿಡಲಾಯಿತು

ಕಾರ್ಯಕ್ರಮವನ್ನು ಕಾಲೇಜಿನ ಉಪನಾಸಕಿ ಶ್ರೀ ಮತಿ ಹೇಮಾ ಅವರು ನಿರುಪಿಸಿದ್ದರು. ಮಹೇಶ ಅವರು ವಂದಿಸಿದ್ದರು

## ಮೃತ ಸಂಜುಕುಮಾರ್ ಮನೆಗೆ ಸಚಿವ ಬಂಡೆಪ್ಪ ಖಾಶೆಂಪುರ್ ಭೇಟಿ

ಮಲ್ಲಮ್ಮ ನುಡಿ ವಾರ್ತೆ

ಬೀದರ್ ಜ.20 :– ಇತ್ತೀಚೆಗೆ ಬೈಕ್ ಮೇಲೆ ತೆರಳುತ್ತಿದ್ದ ವೇಳೆ ತಾಳಮಡಗಿ ಬಳಿ ಗಾಳಿಪಟದ ದಾರಕ್ಕೆ ಸಿಲುಕಿ ಮೃತಪಟ್ಟಿದ್ದ ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಂಬಳಗಿ ಗ್ರಾಮದ ಸಂಜುಕುಮಾರ್ ಗುಂಡಪ್ಪ ಹೊಸಮನಿರವರ ಮನೆಗೆ ಮಾಜಿ ಸಚಿವರು, ಜೆಡಿಎಸ್ ಪಕ್ಷದ ಹಿರಿಯ ನಾಯಕರಾಗಿರುವ ಬಂಡೆಪ್ಪ ಖಾಶೆಂಪುರ್ ರವರು ಮಂಗಳವಾರ ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿ,



ವೈಯಕ್ತಿಕ ಧನ ಸಹಾಯ ಮಾಡಿ, ಧೈರ್ಯ ತುಂಬಿದರು.

ಈ ವೇಳೆ ಮಾತನಾಡಿದ ಅವರು, ಘಟನೆ ಬಗ್ಗೆ ನನಗೆ ತಡವಾಗಿ ಮಾಹಿತಿ ಬಂದಿದೆ. ಮೃತ ಸಂಜುಕುಮಾರ್ ಕುಟುಂಬಕ್ಕೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಪರಿಹಾರ ಒದಗಿಸಿಕೊಡುವ ನಿಟ್ಟಿನಲ್ಲಿ ಸಚಿವರೊಂದಿಗೆ ಮಾತನಾಡುತ್ತೇನೆ ಎಂದರು.

ಘಟನೆಯ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರೊಂದಿಗೆ ಮಾತನಾಡಿ, ಸಮಾಜ ಕಲ್ಯಾಣ ಇಲಾಖೆಯಿಂದ ಪರಿಹಾರ ಒದಗಿಸಿಕೊಡುವ ನಿಟ್ಟಿನಲ್ಲಿ ಪ್ರಯತ್ನಿಸುತ್ತೇನೆ. ಕೇಂದ್ರ ಸಚಿವರಾಗಿರುವ ಕುಮಾರಸ್ವಾಮಿರವರೊಂದಿಗೆ ಮಾತನಾಡಿ, ಕೇಂದ್ರ ಸರ್ಕಾರದಿಂದ ನೆರವು ಒದಗಿಸಿಕೊಡುವ ಪ್ರಯತ್ನ ಮಾಡುತ್ತೇನೆ.

ದುಡಿಯುವ ವ್ಯಕ್ತಿಯನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿರುವ ಸಂಜುಕುಮಾರ್ ರವರ ಕುಟುಂಬಕ್ಕೆ ಸಾಧ್ಯವಾದಷ್ಟು ಸಹಾಯ, ಸಹಕಾರ ಒದಗಿಸಿಕೊಡುವ ಪ್ರಯತ್ನ ಮಾಡುತ್ತೇನೆ. ಕುಟುಂಬಸ್ಥರು ಧೈರ್ಯದಿಂದ ಇರುವಂತೆ ತಿಳಿಸಿದ್ದೇನೆ ಎಂದು ಮಾಜಿ ಸಚಿವ ಬಂಡೆಪ್ಪ ಖಾಶೆಂಪುರ್ ರವರು ಹೇಳಿದರು.

ಈ ಸಂದರ್ಭದಲ್ಲಿ ಮೃತನ ಸಹೋದರ ಅನಿಲ್ ಕುಮಾರ್ ಗುಂಡಪ್ಪ ಹೊಸಮನಿ, ರೇಕುಳಗಿ ಪಿಕೆಪಿಎಸ್ ಅಧ್ಯಕ್ಷ ಶಿವಕುಮಾರ್ ಪಾಟೀಲ್, ಪ್ರಮುಖರಾದ ಸಜ್ಜದ್ ಸಾಹೇಬ್, ರೇವಣಸಿದ್ದಪ್ಪ ಸಿರಕಟ್ಟನಹಳ್ಳಿ, ಶಿವರಾಜ ಆವಂಟಿ, ಬಸವರಾಜ ನಾರಾ, ಮಲ್ಲಪ್ಪ ಮನ್ನಾಎಖೇಳ್ಳಿ, ಪ್ರಲ್ಹಾದ್ ಮಾಲೀಕರ್, ಪುಟ್ಟರಾಜ ರೇಕುಳಗಿ, ಕ್ರಿಸ್ಟೋಫರ್ ರೇಕುಳಗಿ, ಗಣಪತಿ ಪೋಲಕಪಳ್ಳಿ, ಈರಪ್ಪ ಕಾರಲಾರವರು ಸೇರಿದಂತೆ ಅನೇಕರಿದ್ದರು.

## ಪ್ರಥಮ ಚಿಕಿತ್ಸೆ ಕಾರ್ಯಾಗಾರ 27ಕ್ಕೆ



• ಮಲ್ಲಮ್ಮ ನುಡಿ ವಾರ್ತೆ ಬೀದರ್:

ಫಿಸಿಯೊ ಸ್ಕಿಲ್ ಹಬ್ ವತಿಯಿಂದ ನಗರದ ಕೆ.ಇ.ಬಿ. ರಸ್ತೆಯಲ್ಲಿ ಇರುವ ಐಎಂಎ ಹಾಲ್‌ನಲ್ಲಿ ಜ. 27 ರಂದು ಮೂಲ ಜೀವನ ಬೆಂಬಲ ಹಾಗೂ ಪ್ರಥಮ ಚಿಕಿತ್ಸೆ ಕುರಿತು ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

ಬೆಂಗಳೂರಿನ ಮೆಡಿಕ್ಯೂರ್ ಹೆಲ್ತ್ ಕೇರ್ ತಂಡದವರು ಕಾರ್ಯಾಗಾರ ನಡೆಸಿಕೊಡಲಿದ್ದಾರೆ. ಶಿಬಿರದಲ್ಲಿ ವಯಸ್ಕ ಸಿ.ಪಿ.ಆರ್., ಶಿಶು ಸಿ.ಪಿ.ಆರ್., ಎಇಡಿ ಆಘಾತ, ಎಂಡ್ರೋಟ್ರಾಶಿಯಲ್ ಇಂಟ್ಯೂಬೇಶನ್, ವಯಸ್ಕ ಮತ್ತು ಶಿಶು ಉಸಿರುಗಟ್ಟುವಿಕೆಯ ನಿರ್ವಹಣೆ, ವಿದೇಶಿ ದೇಹ ತೆಗೆಯುವಿಕೆ, ಬ್ಯಾಂಡೇಜಿಂಗ್ ತಂತ್ರಗಳು, ಸಾಮಾನ್ಯ ಪ್ರಥಮ ಚಿಕಿತ್ಸಾ ಸಂದರ್ಭಗಳ ಕುರಿತು ಮಾಹಿತಿ ನೀಡಲಿದ್ದಾರೆ. ವೈದ್ಯಕೀಯ ಮತ್ತು ಅರೆ ವೈದ್ಯಕೀಯ ವಿದ್ಯಾರ್ಥಿಗಳು, ಭೌತ ಚಿಕಿತ್ಸಾ ವಿದ್ಯಾರ್ಥಿಗಳು, ನರ್ಸಿಂಗ್ ವಿದ್ಯಾರ್ಥಿಗಳು, ಆರೋಗ್ಯ ವೃತ್ತಿಪರರು ಹಾಗೂ ಜೀವ ಉಳಿಸುವ ಕೌಶಲಗಳಲ್ಲಿ ಆಸಕ್ತಿ ಹೊಂದಿರುವವರು ಕಾರ್ಯಾಗಾರದಲ್ಲಿ ಪಾಲ್ಗೊಳ್ಳಬಹುದು ಎಂದು ಕಾರ್ಯಾಗಾರದ ಸಂಘಟಕಿ ಡಾ. ಅಂಜಲಿ ಕುಟ್ಮಾಳಗೆ ತಿಳಿಸಿದ್ದಾರೆ. ಕಾರ್ಯಾಗಾರದಲ್ಲಿ ಪಾಲ್ಗೊಳ್ಳಲು ಹೆಸರು ನೋಂದಣಿಗೆ ಮೊಬೈಲ್ ಸಂಖ್ಯೆ 7618715821ಗೆ ಸಂಪರ್ಕಿಸಬಹುದು ಎಂದು ಹೇಳಿದ್ದಾರೆ.

## ಸರ್ಕಾರಿ ನೌಕರರು ಒತ್ತಡ ಮುಕ್ತ ಜೀವನ ನಡೆಸಿ: ಮಲ್ಲೇಶಪ್ಪ ಹೊಸಮನಿ.

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಸರ್ಕಾರಿ ನೌಕರರು ಒಗ್ಗಟ್ಟನಿಂದ ಇದ್ದಾಗ ಮಾತ್ರ ನಮ್ಮ ಪ್ರಮುಖ ಬೇಡಿಕೆಗಳು ಈಡೇರಲು ಸಾಧ್ಯ ಎಂದು ಸರ್ಕಾರಿ ನೌಕರರ ಸಂಘದ ವಡಗೇರಾ ತಾಲೂಕು ಅಧ್ಯಕ್ಷ ಮಲ್ಲೇಶಪ್ಪ ಹೊಸಮನಿ ಹೇಳಿದರು.ಪಟ್ಟಣದ ತಾಲೂಕು ಪಂಚಾಯಿತಿ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಸರ್ಕಾರಿ ನೌಕರರ ಸಂಘದ ತಾಲೂಕು ನಾಮನಿರ್ದೇಶಕ ಸದಸ್ಯರ ಆಯ್ಕೆ ಹಾಗೂ ಕ್ಯಾಲೆಂಡರ್ ಬಿಡುಗಡೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.ಸಮಾಜಕ್ಕೆ ಸರ್ಕಾರಿ ನೌಕರರ ಕೊಡುಗೆ ಅಪಾರವಾಗಿದೆ ಜನವರಿ 30 ಮತ್ತು 31ರಂದು ಆರಂಭವಾಗುವ



ಜಿಲ್ಲಾಮಟ್ಟದ ಕ್ರೀಡಾಕೂಟದಲ್ಲಿ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದರು. ಸರಕಾರಿ ನೌಕರರು ಒತ್ತಡ ಮುಕ್ತ ಜೀವನ ನಡೆಸಿ ಆರೋಗ್ಯದ ಕಡೆ ಹೆಚ್ಚು ಗಮನ ಹರಿಸಬೇಕಿದೆ ಏನಾದರೂ ಸಮಸ್ಯೆಗಳಿದ್ದಲ್ಲಿ ಸರಕಾರಿ ನೌಕರರ ಸಂಘದ ತಾಲೂಕು ಘಟಕದ ಗಮನಕ್ಕೆ ತರುವಂತೆ ಹೇಳಿದರು.ಈ ಸಂದರ್ಭದಲ್ಲಿ ಸರ್ಕಾರಿ ನೌಕರರ ರಾಜ್ಯ ಪರಿಷತ್ತು ಸದಸ್ಯ ಮಹದೇವಪ್ಪಗೌಡ ಗೋನಾಲ, ಹಾಗೂ ತಾಲೂಕು ಸಂಘದ ಸರ್ವ ಸದಸ್ಯರು, ಇನ್ನಿತರರು ಭಾಗವಹಿಸಿದ್ದರು.

ಇದೆ ಸಮಯದಲ್ಲಿ ನೂತನ ಸದಸ್ಯರಿಗೆ ಸನ್ಮಾನಿಸಲಾಯಿತು.ನೌಕರರ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ಎಚ್. ಬಿ. ಬಂಡಿ,ಸ್ವಾಗತಿಸಿದರು.ನೌಕರರ ಸಂಘದ ತಾಲೂಕು ಉಪಾಧ್ಯಕ್ಷ ಮಲ್ಲೇಶ ಕುರಿಹಾಳ ನಿರೂಪಿಸಿದರು. ಮುಖ್ಯ ಶಿಕ್ಷಕರ ಅಯ್ಯಪ್ಪ ಬಡಿಗೇರ್ ವಂದಿಸಿದರು.

# ಸರ್ಕಾರಿ ಕಚೇರಿ. ಖಾಸಗಿ ಸಂಸ್ಥೆಗಳಿಗೆ ಅಂತರಿಕ ದೂರು ನಿವಾರಣಾ ಸಮಿತಿ ರಚನೆ ಕಡ್ಡಾಯ

## ನ್ಯಾಯಾದೀಶರಾದ-ಶ್ರೀನಿವಾಸ ನವಲೆ



**ಮಲ್ಲಮ್ಮ ನುಡಿ ವಾರ್ತೆ ,ಕಲಬುರಗಿ:**

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನಲೈಂಗಿಕಕಿರುಕುಳತಡೆಗಟ್ಟುವಿಕೆ ನಿಷೇಧಿಸುವಿಕೆ, ನಿವಾರಣೆ 2013 ರ ಕಾಯ್ದೆ ಅನ್ವಯ 10 ಕ್ಕಿಂತ ಹೆಚ್ಚು ಸಿಬ್ಬಂದಿಗಳು ಕೆಲಸ ಮಾಡುವ ಸರ್ಕಾರಿ ಕಚೇರಿಗಳಾಗಲಿ ಖಾಸಗಿ ಸಂಸ್ಥೆಗಳಿಗೆ ಆಂತರಿಕ ದೂರು ನಿವಾರಣಾ ಸಮಿತಿಯ ರಚನೆ ಕಡ್ಡಾಯವಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ಸದಸ್ಯಕಾರ್ಯದರ್ಶಿಗಳು ಶ್ರೀನಿವಾಸ ನವಲೆ ಅವರು ಹೇಳಿದರು.

ಮಂಗಳವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೋಲಿಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಮಹಿಳಾ ಸಬಲೀಕರಣ ಘಟಕ ಕಲಬುರಗಿ ಇವರ ಸಂಯುಕ್ತಾಶ್ರಯದಲ್ಲಿ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆಗಟ್ಟುವಿಕೆ, ನಿಷೇಧಿಸುವಿಕೆ ನಿವಾರಿಸುವಿಕೆ 2013ರ ಕಾಯ್ದೆ ಅನುಷ್ಠಾನ, ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಅರಿವು ಕಾರ್ಯಕ್ರಮ ಹಾಗೂ ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005" ನಿಯಮ 2006 ಅನುಷ್ಠಾನ ಕುರಿತು ಸಂರಕ್ಷಣಾಧಿಕಾರಿಗಳು ಮತ್ತು ಭಾಗೀದಾರ ಇಲಾಖೆಗಳ ಅಧಿಕಾರಿಗಳಿಗೆ ಎರಡು ದಿನದ ಓರಿಯೆಂಟೇಷನ್ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಮಹಿಳೆಯರಿಗೆ ಕಾನೂನು ಅರಿವಿನ ಬಗ್ಗೆ ಅಧಿಕಾರಿಗಳು ಹೆಚ್ಚಿನ ಜಾಗೃತಿ ಮೂಡಿಸುವಂತಹ ಕೆಲಸಗಳನ್ನು ಮಾಡಬೇಕು. ಮಹಿಳೆಯರ ಮೇಲಿನ ಲೈಂಗಿಕ ಪರಿಸ್ಥಿತಿ ಸಾಕಷ್ಟು ಚಿಂತಾಜನಕವಾಗಿತ್ತು. ಇತ್ತೀಚಿನ ದಿನಗಳಲ್ಲಿ ಸಂವಿಧಾನ ನಮಗೆ ಸಮಾನತೆ ಹಕ್ಕನ್ನು ಕೊಟ್ಟಿದೆ ಒಂದು ಸಮಾನ ರೀತಿಯಾದ ಹಕ್ಕನ್ನು ನಿರ್ಮಾಣ ಮಾಡಬೇಕು ಎಂದರು.

ಸರ್ಕಾರಲೈಂಗಿಕಕಿರುಕುಳಕ್ಕೆಒಳಗಾದ ಮಹಿಳೆಯರಿಗೆನ್ಯಾಯಾದೊರಕಿಸಿಕೊಟ್ಟಿದೆ ಮಹಿಳೆಯರು ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರು ಸಂರಕ್ಷಣಾ ಕಾಯೆಯ (2005) ಅಡಿಯದಲ್ಲಿ ಅನ್ಯಾಯಕ್ಕೆ ಒಳಗಾದ ಮಹಿಳೆಗೆ ನ್ಯಾಯ ಒದಗಿಸಬಹುದು. ಪೋಲಿಸ್ ಇಲಾಖೆಯ ಹೆಣ್ಣು ಮಕ್ಕಳಿಗೆ ಧೈರ್ಯ ತುಂಬಬೇಕು ಎಂದರು.

ಜಿಲ್ಲಾಧಿಕಾರಿ ಬಿ ಫೌಜಿಯಾ ತರನ್ನುಮ್ ಅವರು ಮಾತನಾಡಿ. ಕಾನೂನುಗಳು ಬಹಳಷ್ಟಿದೆ, ಪ್ರಚಾರಗಳು ಬಹಳಷ್ಟು ಆದರೂ ಕೂಡ ಕಾನೂನಿನ ಉಲ್ಲಂಘನೆ ಆಗುತ್ತಿದೆ ಎಂದರೆ ಸಮಾಜಕ್ಕೆ ಒಂದು ಸವಾಲಾಗಿ ಪರಿಣಮಿಸಿದೆ ಎಂದರು.

ಕೌಟುಂಬಿಕ ಹಿಂಸಾಚಾರದಿಂದ ಮಹಿಳೆಯರ ರಕ್ಷಣೆ ಕಾಯ್ದೆ, 2005 ಅಡಿಯಲ್ಲಿ ಸಲ್ಲಿಸಲಾದ ಅರ್ಜಿಗಳನ್ನು ನಿಗದಿತ ಸಮಯದೊಳಗೆ ವಿಲೇವಾರಿ ಮಾಡಲು ಸಂಬಂಧಪಟ್ಟ ನ್ಯಾಯಾಲಯಕ್ಕೆ ನಿರ್ದೇಶನ ನೀಡಬೇಕು. ಸೆಕ್ಷನ್ 12 ಮತ್ತು ಸೆಕ್ಷನ್ 18 , 19 ಅಥವಾ 20 ರ ಅಡಿಯಲ್ಲಿ ಬಾಧಿತ ವ್ಯಕ್ತಿಗಳು ಸಲ್ಲಿಸಿದ ಅರ್ಜಿಗಳನ್ನು 60 ದಿನಗಳ ಒಳಗೆ ನ್ಯಾಯಾಧೀಶರು ನಿರ್ಧರಿಸುತ್ತಾರೆ ಎಂದರು.

ಯಾವುದೆ ಒಂದು ( ಸರ್ಕಾರಿ ಅಥವಾ ಖಾಸಗಿ) ಕೆಲಸದ ಸ್ಥಳದಲ್ಲಿ 10 ಕ್ಕಿಂತ ಹೆಚ್ಚು ಜನರಿದ್ದರೆ ಒಂದು ಎಲ್.ಸಿ.ಸಿ(ಲೋಕಲ್ ಕಂಪ್ಲೇಂಟ್ ಕಮಿಟ) ಸ್ಥಾಪನೆ ಮಾಡಲಾಗಿದೆ. ಎಲ್ಲಾ ಮಹಿಳೆಯರಿಗೆ ಕಾನೂನು ಬಗ್ಗೆ ಅರಿವಿರಲ್ಲಿ ಕಾನೂನು ಇರುವುದೇ ನ್ಯಾಯದ ಪರವಾಗಿ ಯಾರು ಹೆದರುವ ಅವಶ್ಯಕತೆ ಇಲ್ಲ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ನಗರ ಪೋಲಿಸ್ ಆಯುಕ್ತ ಡಾ. ಶರಣಪ್ಪ ಎಸ್. ಡಿ ಅವರು ಮಾತನಾಡಿ, ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳಕ್ಕೆ ಒಳಗಾದ ಮಹಿಳೆ ಯಾವುದೇ ಮುಲಾಜಿಲ್ಲದೆ ದೂರು ನೀಡಿ. ಜಿಲ್ಲೆಯ ಯಾವುದೇ ಸ್ಥಳದಲ್ಲಿ ತೊಂದರೆಗೆ ಒಳಗಾದರೆ 112 ಗೆ ಕರೆ ಮಾಡಿ 10 ನಿಮಿಷದಲ್ಲಿ ನಿಮ್ಮ ಸ್ಥಳಕ್ಕೆದಾವಿಸುತ್ತೇವೆ. ಮಹಿಳೆಯರೂ ಲೈಂಗಿಕ ಕಿರುಕುಳ ಮೌನವಾಗಿ ಸಹಿಸುವ ಅಗತ್ಯವಿಲ್ಲ ಆನ್ ಲೈನ್ ಪೋರ್ಟಲ್ ಮೂಲಕ ದೂರು ದಾಖಲಿಸಬಹುದು ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಂವರ್ ಸಿಂಗ್ ಮೀನಾ ಅಧ್ಯಕ್ಷತೆ ವಹಿಸಿ ಮಾತನಾಡಿ, ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ಆಗದಂತೆ ನೋಡಿಕೊಳ್ಳುವುದರ ಜೊತೆಗೆ ಕಚೇರಿಗಳಲ್ಲಿ ಮಹಿಳಾ ವಿಶ್ರಾಂತಿ ಕೋಣೆ ಸ್ಥಾಪನೆ ಮಾಡಿ ಸುರಕ್ಷತೆ ನೀಡುವುದು ನಮ್ಮ ಕೆಲಸ. ಮಹಿಳೆಯರೂ ಅಭಿವೃದ್ಧಿ ಹೊಂದುವ ಸಲುವಾಗಿ ಜಿಲ್ಲಾ, ತಾಲ್ಲೂಕು, ಗ್ರಾಮಮಟ್ಟದಲ್ಲಿ ಕೂಸಿನ ಮನೆ ಮಾಡಲಾಗಿದ್ದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕರ ಪತ್ರಗಳನ್ನು ಬಿಡುಗಡೆ ಮಾಡಿದರು.

ಕಲಬುರಗಿ ಜಿಲ್ಲಾ ನ್ಯಾಯಾಲಯದ ಹಿರಿಯ ನ್ಯಾಯವಾದಿಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ವಿನೋದ್ ಕುಮಾರ್ ಮಾತನಾಡಿ, ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆಗಟ್ಟುವ 2013 ಕಾಯ್ದೆ ಅನುಷ್ಠಾನ ಕುರಿತು ಪಿ.ಪಿ.ಟಿ. ಮೂಲಕ ಮಾಹಿತಿ ನೀಡಿದರು.

ವೇದಿಕೆ ಮೇಲೆ ಮಹಾನಗರ ಪಾಲಿಕೆ ಆಯುಕ್ತರು ಅವಿನಾಶ ಶಿಂಧೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು ಇದ್ದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಕುಮಾರ ರಾಥೋಡ್, ಸ್ವಾಗತಿಸಿದರು. ತಾಲೂಕಾ ಶಿಶುಅಭಿವೃದ್ಧಿ ಯೋಜನಾಧಿಕಾರಿ ಶಿವಲೀಲಾ ಡಂಗಿ, ಕಾರ್ಯಕ್ರಮ ನಿರೂಪಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕನಿರ್ದೇಶಕ ಶಿವಶರಣಪ್ಪ, ವಂದಿಸಿದರು ಜಿಲ್ಲಾಮಟ್ಟದ ಅಧಿಕಾರಿಗಳು ಮತ್ತು ವಿವಿಧ ಸಂಘ ಸಂಸ್ಥೆಗಳು ಹಾಜರಿದ್ದರು.

## ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ,ಕಲಬುರಗಿ:**

2026-27ನೇ ಸಾಲಿಗೆ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಾತಿ ಪಡೆಯಲು ಅಲ್ಪಸಂಖ್ಯಾತ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ್, ಸಿಖ್ ಮತ್ತು ಪಾರ್ಸಿ ಜನಾಂಗಕ್ಕೆ ಸೇರಿದ ಅರ್ಹ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ.

ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು. 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರಬೇಕು/ಉತ್ತೀರ್ಣರಾಗಿರಬೇಕು. ದಾಖಲೆಗಳ ಪರಿಶೀಲನೆಯ ಸಂದರ್ಭದಲ್ಲಿ ಅಂಕಪಟ್ಟಿಯನ್ನು ಹೊಂದಿರಬೇಕು. ಅರ್ಜಿ ಸಲ್ಲಿಸುವ ಅರ್ಹ ವಿದ್ಯಾರ್ಥಿಗಳು https://dom.karnataka.gov.in ಹಾಗೂ *https://sevasindhuservices.karnataka.gov.in* ವೆಬ್‌ಸೈಟ್‌ದಲ್ಲಿ ಆನ್‌ಲೈನ್ ಮೂಲಕ ಅವಶ್ಯಕ ದಾಖಲೆಗಳೊಂದಿಗೆ 2026ರ ಫೆಬ್ರವರಿ 10 ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಕಲಬುರಗಿ, ಆಳಂದ ಮತ್ತು ಅಫಜಲಪುರ ತಾಲೂಕುಗಳಿಗೆ ಸಂಬಂಧಿಸಿದಂತೆ ಕಲಬುರಗಿ ತಾಲ್ಲೂಕಾ ವಿಸ್ತರ್ಣಾಧಿಕಾರಿಗಳ ಸಚೀನಕುಮಾರ ಮೊಬೈಲ್ ಸಂಖ್ಯೆ-9742305668, ಚಿತ್ತಾಪೂರ-ತಾಲ್ಲೂಕಾ ವಿಸ್ತರ್ಣಾಧಿಕಾರಿ ಶೇಖ ಫಹೀಮ-9972554852, ಜೇವರ್ಗಿ-ತಾಲ್ಲೂಕಾ ವಿಸ್ತರ್ಣಾಧಿಕಾರಿ ಹುಲಿಕಂತರಾಯ-9845036156 ಹಾಗೂ ಸೇಡಂ-ತಾಲೂಕು ವಿಸ್ತರಣಾಧಿಕಾರಿ ಹಸನ್ ಚಾವೂಸ್-8618788905 ಮತ್ತು ಚಿಂಚೋಳಿ ತಾಲೂಕು ವಿಸ್ತರಣಾಧಿಕಾರಿ-8971524009 ಗಳಿಗೆ ಹಾಗೂ ರಾಜ್ಯ ಅಲ್ಪಸಂಖ್ಯಾತರ ಸಹಾಯವಾಣಿ-8277799990 (24x7) ಗಳಿಗೆ ಸಂಪರ್ಕಿಸಲು ಕೋರಿದೆ.

## ಸರಳ ವಿವಾಹ ಯೋಜನೆಯಡಿ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ,ಕಲಬುರಗಿ:**

2025-26ನೇ ಸಾಲಿಗೆ ಆರ್ಥಿಕವಾಗಿ ಹಿಂದುಳಿದಿರುವ ಅಲ್ಪಸಂಖ್ಯಾತರ ಸಮುದಾಯದವರ ಸರಳ ವಿವಾಹಕ್ಕೆ ಪ್ರೋತ್ಸಾಹಧನ ನೀಡಲು ಸ್ವ-ಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುವ ಸಮೂಹ ವಿವಾಹಗಳ ವೆಚ್ಚಗಳಿಗಾಗಿ ಪ್ರತಿ ಜೋಡಿಗೆ 50,000 ರೂ. ಮತ್ತು ಸಮೂಹ ವಿವಾಹಗಳ ಆಯೋಜಕರಿಗೆ ಪ್ರತಿ ಜೋಡಿಗೆ 5,000 ರೂ. ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಿದ್ದು, ಇದಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಕಲಬುರಗಿ, ಆಳಂದ, ಅಫಜಲಪೂರ ತಾಲೂಕುಗಳಿಗೆ ಸಂಬಂಧಿಸಿದಂತೆ ಕಲಬುರಗಿ ತಾಲ್ಲೂಕಾ ವಿಸ್ತರ್ಣಾಧಿಕಾರಿ ಸಚೀನ ಕುಮಾರ-9742305668, ಚಿತ್ತಾಪೂರ ತಾಲ್ಲೂಕಾ ವಿಸ್ತರ್ಣಾಧಿಕಾರಿ ಶೇಖ ಫಹೀಮ-9972554852, ಜೇವರ್ಗಿ-ತಾಲ್ಲೂಕಾ ವಿಸ್ತರ್ಣಾಧಿಕಾರಿ ಹುಲಿಕಂತರಾಯ-9845036156, ಸೇಡಂ-ತಾಲೂಕು ವಿಸ್ತರಣಾಧಿಕಾರಿ ಹಸನ್ ಚಾವೂಸ್-8618788905 ಹಾಗೂ ಚಿಂಚೋಳಿ-ತಾಲ್ಲೂಕಾ ವಿಸ್ತರ್ಣಾಧಿಕಾರಿ ಹಸನ್ ಚಾವೂಸ್-8971524009 ಗಳಿಗೆ ಸಂಪರ್ಕಿಸಲು ಕೋರಲಾಗಿದೆ.

## ಜನವರಿ 22 ರಂದು ನೇರ ಸಂದರ್ಶನ

• **ಮಲ್ಲಮ್ಮ ನುಡಿ ವಾರ್ತೆ ,ಕಲಬುರಗಿ:**

ಕಲಬುರಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಇದೇ ಜನವರಿ 22ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಕಲಬುರಗಿ ಸರ್ಕಾರಿ ಐ.ಟಿ.ಐ. ಕಾಲೇಜು ಹಿಂದುಗಡೆಯಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೇರ ಸಂದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಕಲಬುರಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಎ1 ಟ್ಯೂಟೋರಿಯಲ್ಸ್ ಆಂಡ್ ಕೋಚಿಂಗ್ ಸೇಂಟರ್‌ದಲ್ಲಿ (ಕೆಜಿ ಯಿಂದ ಪ್ರೌಢಶಾಲೆ) ಶಿಕ್ಷಕರ ಹುದ್ದೆಗೆ ಪದವಿ ಜೊತೆಗೆ ಬಿ.ಎಡ್. ವಿದ್ಯಾರ್ಹತೆ ಹೊಂದಿರಬೇಕು. ಪದವಿ ಪೂರ್ವ ಉಪನ್ಯಾಸಕರ ಹುದ್ದೆಗೆ ಸ್ನಾತಕೋತ್ತರ ಪದವಿ ಜೊತೆಗೆ ಬಿ.ಇಡ್. ವಿದ್ಯಾರ್ಹತೆ ಹೊಂದಿರಬೇಕು.

ನಾನ್ ಟೀಚಿಂಗ್ ಸ್ಟಾಫ್‌ಗಳಾದ ಅಡ್ಮಿಷನ್ ಕೌನ್ಸಲರ್, ಡ್ರೈವರ್, ಹೆಲ್ಪರ್, ಆಯಮ್ಮ ಹುದ್ದೆಗಳಿಗೆ ಹಾಗೂ ಹಾಸ್ಟಿಟಲ್ ಸ್ಟಾಫ್‌ಗಳಾದ ನರ್ಸಿಂಗ್, ವಾರ್ಡ್ ಬಾಯ್ಸ, ಸಪೋರ್ಟ್ ಸ್ಟಾಫ್ ಹುದ್ದೆಗಳಿಗೆ ಸಂದರ್ಶನ ನಡೆಯಲಿದ್ದು, ವಯೋಮಿತಿ 18 ರಿಂದ 40 ವರ್ಷದೊಳಗಿರಬೇಕು. ಸ್ಟ್ರೈಡ್ಸ್ ಫಾರ್ಮಾದಲ್ಲಿ ಆಪರೇಟರ್ (ಲರ್ನ್ ಆಂಡ್ ಅರ್ನ್) ಹುದ್ದೆಗೆ ಪಿ.ಯು.ಸಿ., ಐಟಿಐ, ಡಿಪ್ಲೋಮಾ ವಿದ್ಯಾರ್ಹತೆ ಹೊಂದಿರಬೇಕು. ವಯೋಮಿತಿ 18 ರಿಂದ 22 ವರ್ಷದೊಳಗಿರಬೇಕು. ಆಸಕ್ತಿಯುಳ್ಳ ಅಭ್ಯರ್ಥಿಗಳು ತಮ್ಮ ಎಲ್ಲಾ ಅಂಕಪಟ್ಟಿಗಳ ಝೆರಾಕ್ಸ್, ರೆಸ್ಯೂಮ್ (ಬಯೋಡಟಾ) ಭಾವಚಿತ್ರಗಳು ಹಾಗೂ ಆಧಾರ್‌ಕಾರ್ಡದೊಂದಿಗೆ ಮೇಲ್ಕಂಡ ದಿನದಂದು ನಡೆಯುವ ನೇರ ಸಂದರ್ಶನದಲ್ಲಿ ಭಾಗವಹಿಸಬೇಕು. ನೇರ ಸಂದರ್ಶನದಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಯಾವುದೇ ತರಹದ ಭತ್ಯೆಯನ್ನು ನೀಡಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಲಬುರಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯನ್ನು ಹಾಗೂ ಕಚೇರಿ ದೂರವಾಣಿ ಸಂಖ್ಯೆ 08472-274846ಗೆ ಸಂಪರ್ಕಿಸಲು ಕೋರಲಾಗಿದೆ.

## ಕಾಲೇಜಿನಲ್ಲಿ ನಿಗದಿತ ದಿನಾಂಕದೊಳಗಾಗಿ ಪ್ರವೇಶಾತಿ ಪಡೆಯಲು ಸೂಚನೆ

**ಮಲ್ಲಮ್ಮ ನುಡಿ ವಾರ್ತೆ ,ಕಲಬುರಗಿ:**

2025-26ನೇ ಸಾಲಿಗೆ ಎರಡು ವರ್ಷದ ಬಿ.ಇಡ್. ಕೋರ್ಸಿನ್ ವ್ಯಾಸಂಗಕ್ಕಾಗಿ ರಾಜ್ಯದ ಸರ್ಕಾರಿ, ಮಾನ್ಯತೆ ಪಡೆದ ಅನುದಾನಿತ ಹಾಗೂ ಅನುದಾನರಹಿತ ಬಿ.ಇಡ್. ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳ ದಾಖಲಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿ, ಈಗಾಗಲೇ ಅರ್ಜಿ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳ ಆಯ್ಕೆಪಟ್ಟಿಯನ್ನು ಮೂರು ಬಾರಿ ಪ್ರಕಟಿಸಲಾಗಿದೆ.ಆಯ್ಕೆಯಾಗಿ ದಾಖಲಾತಿಯನ್ನು ಪಡೆಯದೇ ಉಳಿದಿರುವ ಸೀಟುಗಳನ್ನು ನಾಲ್ಕನೇ ಸುತ್ತಿನಲ್ಲಿ ಅಭ್ಯರ್ಥಿಗಳಿಗೆ ಹಂಚಿಕೆ ಮಾಡಿ 2026ರ ಜನವರಿ 20ರಂದು ಇಲಾಖೆಯ ವೈಬ್‌ಸೈಟ್‌ನಲ್ಲಿ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿದೆ. ಆಯ್ಕೆಯಾದ ಎಸ್.ಸಿ. / ಎಸ್.ಟಿ. ಅಭ್ಯರ್ಥಿಗಳು ನೇರವಾಗಿ ಹಾಗೂ ಇತರೆ ಅಭ್ಯರ್ಥಿಗಳು ನಿಗದಿತ ಶುಲ್ಕವನ್ನು ಚಲನ್ ಮೂಲಕ ಎಸ್.ಬಿ.ಐ. ಬ್ಯಾಂಕಿನಲ್ಲಿ ಪಾವತಿ ಮಾಡಿ ಜಿಲ್ಲಾ ನೋಡಲ್ ಕೇಂದ್ರ ಡಯಟ್ ಗುಲ್ಬರ್ಗಾ ಎನ್-19ಕ್ಕೆ ಬಂದು 2026ರ ಜನವರಿ 23ರೊಳಗಾಗಿ ದಾಖಲಾತಿ ಪತ್ರ ಪಡೆದು ಆಯ್ಕೆಯಾದ ಕಾಲೇಜಿನಲ್ಲಿ ನಿಗದಿತ ದಿನಾಂಕದೊಳಗಾಗಿ ಪ್ರವೇಶಾತಿ ಪಡೆಯಬೇಕು. ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಶಿಕ್ಷಣ ಹಾಗೂ ತರಬೇತಿ ಸಂಸ್ಥೆ (ಡಯಟ್) ಕಲಬುರಗಿ-02 ಕಚೇರಿಯನ್ನು ಹಾಗೂ ಮೊಬೈಲ್ ಸಂಖ್ಯೆ 9448552283, 7259192442 ಗಳಿಗೆ ಸಂಪರ್ಕಿಸಲು ಕೋರಲಾಗಿದೆ.

## ಶಿಕ್ಷಣದಿಂದ ಯಾರೂ ವಂಚಿತರಾಗಬಾರದು : ಮಂಕಾಳ ವೈದ್ಯ

• **ಮಲ್ಲಮ್ಮ ನುಡಿ ವಾರ್ತೆ,ಕಾರವಾರ:**

ಶಿಕ್ಷಣಕ್ಕೆ ಕೊರತೆಯಾದರೆ ದೇಶ ಬಡವಾಗುತ್ತದೆ, ಸರಕಾರವು ಶಿಕ್ಷಣ-ಕ್ಕೆ ಪ್ರಥಮಾದ್ಯತೆಯನ್ನು ನೀಡುತ್ತಿದ್ದು, ಯಾರೂ ಕೂಡಾ ಶಿಕ್ಷಣದಿಂದ ವಂಚಿತರಾಗಿ ತಮ್ಮ ಭವಿಷ್ಯವನ್ನು ಹಾಳುಮಾಡಿಕೊಳ್ಳಬಾರದು ಎಂದು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್ ವೈದ್ಯ ಹೇಳಿದರು.

ಅವರು ಮಂಗಳವಾರ ಕುಮಟಾದಲ್ಲಿ, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ ಕಾರವಾರ, ಶಾಲಾ ಶಿಕ್ಷಣ ಇಲಾಖೆ ಹಾಗೂ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉತ್ತರ ಕನ್ನಡ ಜಿಲ್ಲೆ ಇವರ ಸಂಯುಕ್ತ ಆಶ್ರಯದಲ್ಲಿ, ಕುಮಟಾ ತಾಲೂಕಿನ ಕೆ.ಪಿ.ಎಸ್ ನೆಲ್ಲಿಕೇರಿಯಲ್ಲಿ 15 ಕೊಠಡಿ ನಿರ್ಮಾಣ ಹಾಗೂ ವಿವೇಕ ಯೋಜನೆಯ ಸರಕಾರಿ ಪದವಿ ಪೂರ್ವ ಕಾಲೇಜು ಕೊಠಡಿ ನಿರ್ಮಾಣ ಅನುದಾನದಡಿ ಸರಕಾರಿ ಹನುಮಂತ ಬೆಣ್ಣೆ ಪದವಿ ಪೂರ್ವ ಕಾಲೇಜು ನೆಲ್ಲಿಕೇರಿಯಲ್ಲಿ 5 ಕೊಠಡಿಗಳ ನಿರ್ಮಾಣ ಕಾಮಗಾರಿಗಳನ್ನು ಉದ್ಘಾಟಿಸಿ ಮಾತನಾಡಿದರು.

## ದಿ. ಶಿವಲಿಂಗಪ್ಪ ಗೌಡ ಪಾಟೀಲ ನರಿಬೋಳ್ ಅವರ 21ನೇ ಪುಣ್ಯ ಸ್ಮರಣೆ

### ಮರೆಯಲಾಗದ ಮಾಣಿಕ್ಯ ಜನನಾಯಕ ಶಿವಲಿಂಗಪ್ಪಗೌಡ ಪಾಟೀಲ ನರಿಬೋಳ



• **ಮಲ್ಲಮ್ಮ ನುಡಿ ವಾರ್ತೆ,ಜೇವರ್ಗಿ**

ತಾಲ್ಲೂಕಿನ ಪುಟ್ಟ ಊರು ನರಿಬೋಳ್ ದಲ್ಲಿ ಜನಿಸಿದ ದಿ. ಶಿವಲಿಂಗಪ್ಪಗೌಡ ಪಾಟೀಲ್ ನರಿಬೋಳ ಅವರು ಹೆಸರಾಗುವುದರ ಜೊತೆಗೆ ಜನರ ಉಸಿರಾದರು. ಶಿವಲಿಂಗಪ್ಪಗೌಡ ಅವರ ಕನಸು ನನಸಾಗಲಿಲ್ಲ ಆದರೆ ನಿಷ್ಠಾವಂತರಾಗಿ ಉಳಿದರು. ದಿ. ಶಿವಲಿಂಗಪ್ಪಗೌಡ ಪಾಟೀಲ್ ಅವರು ರಾಜಕೀಯದಲ್ಲಿ ಅನೇಕ ಏಳು ಬೀಳುಗಳನ್ನು ಕಂಡವರು. ಅವರ ಅನುಯಾಯಿಗಳು ಮತ್ತವರ ಆಸೆಗಳು ಒಂದಾಗಿದ್ದರೂ ಅವರ ಕನಸು ನನಸಾಗಲಿಲ್ಲ. ಅಪರೂಪದ ನಾಯಕರು ಪಾಟೀಲರು ಕೊನೆಯತನಕ ಸ್ಪೂರ್ತಿಯಾಗಿ ತಮ್ಮದೇ ಆದ ಛಾಪು ಮೂಡಿಸಿದರು. ಸತತ ಎಂಟು ಬಾರಿ ಗೆದ್ದು ಇತಿಹಾಸ ದಾಖಲಿಸಿರುವ ಮಾಜಿ ಮುಖ್ಯಮಂತ್ರಿ ದಿ. ಧರಂಸಿಂಗ್ ಅವರ ಪ್ರಬಲ ಎದುರಾಳಿಯಾಗಿ ಸಿಂಹಸ್ವಪ್ನವಾಗಿ ಕೂದಲೆಳೆಯ ಅಂತರದಲ್ಲಿ ಸೋಲು ಅನುಭವಿಸಿದರು. ಮರೆಯಲಾಗದ ಮಾಣಿಕ್ಯವಾಗಿ ಜನನಾಯಕರಾಗಿ ಗುರುತಿಸಿಕೊಂಡವರು ಎಂದರೆ ಅತಿಶಯೋಕ್ತಿಯಾಗಲಾರದು. ಸರಳತೆ ಮತ್ತು ಪ್ರಾಮಾಣಿಕತೆಗೆ ಹೆಸರಾದ ಗೌಡರು ನರಿಬೋಳ ಗ್ರಾಮದಲ್ಲಿ ನೆಹರು ನವ ತರುಣ ಸಂಘ ಸ್ಥಾಪಿಸುವ ಮೂಲಕ ಸಾಮಾಜಿಕ ಕ್ಷೇತ್ರದಲ್ಲಿ ಕಾಲಿಟ್ಟವರು. ರಾಜಕೀಯ ಕಹಿ ಅನುಭವಗಳನ್ನು ಉಂಡರೂ ಸಾಮಾಜಿಕ ಸೇವೆಯಲ್ಲಿ ಹಿಂತಿರುಗಿ ನೋಡಲೇ ಇಲ್ಲ. 1982 ರಲ್ಲಿ ಎಪಿಎಂಸಿಗೆ ಆಯ್ಕೆಯಾಗುವ ಮೂಲಕ ಪೂರ್ಣ ಪ್ರಮಾಣದ ರಾಜಕೀಯ ಜೀವನಕ್ಕೆ ತಮ್ಮನ್ನು ತೊಡಗಿಸಿಕೊಂಡರು. 1985 ರಲ್ಲಿ ಜನತಾ ಪಕ್ಷಕ್ಕೆ ಸೇರಿ ಇವರು ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಜಯಭೇರಿ ಬಾರಿಸಿದರು.

ಮುಂದೆ ಜನತಾ ಪಕ್ಷ ಕಟ್ಟಿಬೆಳೆಸಿದರು. ಪಾಟೀಲರು ಜನತಾ ಪರಿವಾರದಲ್ಲಿ ದಂಡನಾಯಕನಾಗಿ ಗುರುತಿಸಿಕೊಂಡರು. ರಾಜಕೀಯಮುತ್ಸದ್ದಿಗಳಾದ ರಾಮಕೃಷ್ಣಹೆಗಡೆ.ಎಸ್ ಆರ್ ಬೊಮ್ಮಾಯಿ, ದೇವೇಗೌಡ,ಜೆ.ಎಚ್. ಪಟೇಲ್, ಬಾಪುಗೌಡ ದ ರ್ಶ ನಾ ಪು ರ ಮುಂತಾದವರೊಂದಿಗೆ ದಶಕದಲ್ಲಿ ನಿಕಟ ಸಂಬಂಧ ಹೊಂದಿದ ಪಾಟೀಲರು ಮುಂದೆ ರಾಜಕೀಯದಲ್ಲಿ ಏಳುಬೀಳು ಕಂಡರು.

1985ರಲ್ಲಿ ನಡೆದ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಪರ ಪ್ರಚಾರ ಮಾಡಿ ಚುನಾವಣೆಯಲ್ಲಿ ಧರಂಸಿಂಗ್ ಅವರಿಗೆ ಸಿಂಹಸ್ವಪ್ನವಾಗಿ ಕಾಡಿದರು. ನಂತರ ರಾಜಕೀಯ ಧ್ರುವೀಕರಣದಲ್ಲಿ ಬಂಗಾರಪ್ಪ ಸ್ಥಾಪಿಸಿದ ಕೆಸಿಪಿ ಪಕ್ಷಕ್ಕೆ ಕೂದಲೆಳೆಯ ಅಂತರದಲ್ಲಿ ಸೋಲುಂಡರು.

## ಅವಿರೋಧವಾಗಿ ಅಧ್ಯಕ್ಷರಾಗಿ ಖಂಡ್ರೆ ಆಯ್ಕೆ



**ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ:**

**ಕಳೆದ 13 ವರ್ಷಗಳಿಂದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿರುವ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಇದೀಗ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.**

## ತಹಶೀಲ್ದಾರರ ವಿರುದ್ಧ ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ ಸಂತೋಷ್ ನಾಟೇಕರ್.



• **ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ:**

ಸರ್ಕಾರವು ಘೋಷಿಸಿರುವ ನಿಜಶರಣ ಮಹಾತ್ಮ ಅಂಬಿಗರ ಚೌಡಯ್ಯ ಅವರ ಜಯಂತಿಯನ್ನು ಪ್ರತಿ ವರ್ಷ ತಾಲೂಕ ಮಟ್ಟದಲ್ಲಿ ಗೌರವಪೂರ್ವಕವಾಗಿ ಆಚರಿಸುವಂತೆ ಸ್ಪಷ್ಟ ಸೂಚಿಗಳನ್ನು ಹೊರಡಿಸಿದೆ. ಇದರ ಜೊತೆಯಲ್ಲಿ ಪೂರ್ವ ಸಿದ್ಧತಾ ಸಭೆ ಕರೆಯುವುದು ಕೂಡ ಕಡ್ಡಾಯ. ಆದರೆ ದಿನಾಂಕ 21 ರಂದು ನಡೆಯಲಿರುವ ಅಂಬಿಗರ ಚೌಡಯ್ಯ ಅವರ ಜಯಂತಿಗೆ ಸಂಬಂಧಿಸಿದಂತೆ ತಾಲೂಕ ಆಡಳಿತದಿಂದ ಇದುವರೆಗೆ ಯಾವುದೇ ಪೂರ್ವ ಸಿದ್ಧತಾ ಸಭೆ ಕರೆಯದೆ ನಿಷ್ಕಾಳಜಿತನ ತೋರಿರುವುದು ಸಮಾಜಕ್ಕೆ ಮಾಡಿರುವ ಅಪಮಾನವಾಗಿದೆ. ತಾಲೂಕಿನ ಈ ರೀತಿ ನಡೆ ಸಂವಿಧಾನದ ಸಮಾನತೆ ತತ್ವಕ್ಕೂ ಹಾಗೂ ಸರ್ಕಾರ ಘೋಷಿತ ನೀತಿಗಳಿಗೆ ಸಂಪೂರ್ಣ ವಿರುದ್ಧವಾಗಿದ್ದು, ಸಮಾಜದಲ್ಲಿ ಪಕ್ಷಪಾತ, ಭೇದ ಭಾವವನ್ನು ಉಂಟು ಮಾಡುತ್ತಿದೆ. ಆದ್ದರಿಂದ ಮಾನ್ಯ ಜಿಲ್ಲಾಧಿಕಾರಿಗಳು ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಮನವಿ ಪತ್ರದಲ್ಲಿ ಸಂತೋಷ್ ನಾಟೇಕರ್ ಆಗ್ರಹಿಸಿದ್ದಾರೆ.

## ಜನವರಿ 22 ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

• **ಮಲ್ಲಮ್ಮ ನುಡಿ ವಾರ್ತೆ,ಕಲಬುರಗಿ:**

ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗ-1ರ ವ್ಯಾಪ್ತಿಯಲ್ಲಿ ಬರುವ 110/33/11ಕೆವಿ ಆಳಂದ ಮತ್ತು 33/11 ಕೆ.ವಿ ಸರಸಂಬಾ ವಿದ್ಯುತ ವಿತರಣಾ ಕೇಂದ್ರದ 10ಎಮ್.ವಿ.ಎ ಪವರ್ ಟ್ರಾನ್ಸ್‌ಫಾರ್ಮರ್-1 ಮೇಲೆ 4ನೆ ತ್ರೈಮಾಸಿಕ ನಿರ್ವಾಹಣಾ ಕಾರ್ಯಕೈಗೊಂಡಿರುವ ಪ್ರಯುಕ್ತ ಇದೇ ಜನವರಿ 22 ರಂದು ಬೆಳಿಗ್ಗೆ 11 ರಿಂದ ಸಂಜೆ 4 ಗಂಟೆಯವರೆಗೆ ಉಪ ವಿತರಣಾ ಕೇಂದ್ರದ ಎಲ್ಲಾ ಹೊರಹೋಗುವ ಫೀಡರಗಳ ವ್ಯಾಪ್ತಿಯ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಎಲ್ಲಾ ಗ್ರಾಹಕರು ಇದಕ್ಕೆ ಸಹಕರಿಸಬೇಕೆಂದು ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗ-1ರ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

33/11 ಕೆ.ವಿ ಸರಸಂಬಾ ವಿದ್ಯುತ್ ವಿತರಣಾ ಕೇಂದ್ರ: ಎಫ್-1 ಸಾವಳೇಶ್ವರ ಐಪಿ, ಎಫ್-2 ಅಂಬೇವಾಡ ಎನ್‌ಜೆವೈ, ಎಫ್-3 ಹಿರೋಳ್ಳಿ ಐಪಿ., ಎಫ್-4 ಕಾಮನಳ್ಳಿ ಎನ್‌ಜೆವೈ, ಎಫ್-5 ಸರಸಂಬಾ ಐಪಿ, ಎಫ್-6 ಚಿಂಚೋಳಿ ಐಪಿ, ಎಫ್-7 ನಿರಗುಡಿ ಎನ್‌ಜೆವೈ ಸರಸಂಬಾ, ಹಿರೋಳ್ಳಿ, ಭೀಮಪೂರ, ಕಾಮನಳ್ಳಿ, ಸಕ್ಕರಗಾ, ಅಂಬೆವಾಡ, ನಗಲೆಗಾಂವ, ಸಾವಳೇಶ್ವರ, ಪಡಸಾವಳಗಿ, ಚಿಂಚೊ(ಕೆ) ಮತ್ತು (ಬಿ), ನೀರಗೂಡಿ.


ಕರ್ನಾಟಕ ಸರ್ಕಾರ

**ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ**

**ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.**

ಸಂಖ್ಯೆ: ಸನಿಅಅವಿ/ಬೀದರ/ತಾಶಾ-1/2025-26/ 80 ದಿನಾಂಕ: 19-01-2026

**ಅಲ್ಪಾವಧಿ ಕೊಟೇಷನ್ ಟೆಂಡರ ಪ್ರಕಟಣೆ**

**ವಿಷಯ:** 4702-ಏತ ನೀರಾವರಿ ಯೋಜನೆಗಳ ದುರುಸ್ಥಿ ಕಾರ್ಯ ಕೈಗೊಂಡ ನಂತರ ಉಪಯೋಗಕ್ಕೆ ಬಾರದ ಹಳೆಯ RCC Np2 pipe ಗಳ ಸ್ಕ್ರ್ಯಾಪ್ ಮೌಲ್ಯ ನಿಗಧಿ ಮಾಡಿ ಅಂದಾಜು ಪತ್ರಿಕೆ ತಯ್ಯಾರಿಸುವ ಉದ್ದೇಶಕ್ಕಾಗಿ ಸ್ಕ್ರ್ಯಾಪ್ ದರಗಳನ್ನು ಒದಗಿಸುವ ಮುಚ್ಚಿದ ಲಕೋಟೆಯಲ್ಲಿ ಕೋಟೆಷನ್ ಟೆಂಡರ ಕರೆಯುವ ಕುರಿತು.

**ಉಲ್ಲೇಖ:** 1) ಸರ್ಕಾರದ ಆದೇಶ ಸಂಖ್ಯೆ: ಸನೀಇ 746 ಎಂ.ಐ.ಎಸ್.ಯು2025(ತಾಂತ್ರಿಕ) ದಿನಾಂಕ:12-11-2025.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖ ಸರ್ಕಾರದ ಆದೇಶದನ್ವಯ 2025-26ನೇ ಸಾಲಿನಲ್ಲಿ ಬೀದರ ಜಿಲ್ಲೆ ಬೀದರ ತಾಲ್ಲೂಕಿನ ಜಾಂಪಾಡ ಏತ ನೀರಾವರಿ ಯೋಜನೆಯ ರೈಸಿಂಗ್ ಮೇನ್,ಪೈಪ್‌ಲೈನ್ ಪುನರುಜ್ಜೀವನ ಕಾಮಗಾರಿಗೆ ಅನುಮೋದನೆ ನೀಡಿ,ಮಾನ್ಯ ಸರಕಾರದ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,ವಿಕಾಸ ಸೌಧ, ಬೆಂಗಳೂರು ರವರು ಆದೇಶಿಸಿರುತ್ತಾರೆ. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2025-26ನೇ ಸಾಲಿನಲ್ಲಿ ಬೀದರ ಜಿಲ್ಲೆ ಬೀದರ ತಾಲ್ಲೂಕಿನ ಜಾಂಪಾಡ ಏತ ನೀರಾವರಿ ಯೋಜನೆಯ ರೈಸಿಂಗ್ ಮೇನ್,ಪೈಪ್‌ಲೈನ್ ಪುನರುಜ್ಜೀವನ ಕಾಮಗಾರಿಗಳನ್ನು ಲೆಕ್ಕ ಶೀರ್ಷಿಕ: 4702-00-101-3-01-139 ಏತ ನೀರಾವರಿ ಯೋಜನೆ-ಪ್ರಧಾನ ಕಾಮಗಾರಿಗಳು ಅಡಿಯಲ್ಲಿ ಕೆಲವು ಷರತ್ತುಗಳಿಗೊಳಪಟ್ಟು ಅನುದಾನವನ್ನು ನೀಡಲಾಗಿರುತ್ತದೆ. ಏತ ನೀರಾವರಿ ಯೋಜನೆಗಳಿಗೆ ದುರಸ್ತಿ ನಂತರ ಉಪಯೋಗಕ್ಕೆ ಬಾರದ ಹಳೆಯ RCC Np2 pipe ಗಳ ಸ್ಕ್ರ್ಯಾಪ್ ದರ ನಿಗಧಿ ಮಾಡಿ, ಗುತ್ತಿಗೆ ನೀಡಲಾದ ಗುತ್ತಿಗೆದಾರರಿಂದ Buy back ಪ್ರಾವಧಾನವನ್ನು ಅಂದಾಜು ಪತ್ರಿಕೆಯಲ್ಲಿ ಅಳವಡಿಸಿಕೊಳ್ಳುವುದು. ಆದರಿಂದ ಗುತ್ತಿಗೆದಾರರು ಒಂದು ಮುಚ್ಚಿದ ಲಕೋಟೆಯಲ್ಲಿ ಈ ಕೆಳಗೆ ಗೊತ್ತು ಪಡಿಸಿದ ಏತ ನೀರಾವರಿ ಯೋಜನೆಯ ಹಳೆಯ RCC Np2 pipe ಗಳ ಸ್ಕ್ರ್ಯಾಪ್ ದರ ನಮೂದಿಸಿ ಈ ಕಚೇರಿಗೆ ಸಲ್ಲಿಸಬೇಕಾಗಿದೆ, ಕಲಬುರಗಿ ವೃತ್ತದ ಪಿ.ಡಬ್ಲ್ಯೂ.ಡಿ ವೋಲ್ಯೂಮ್-1,2,3,4,5 2023-24ನೇ ಸಾಲಿನ ದರ ಪಟ್ಟಿಯ ಪ್ರಕಾರ ನಿಗದಿ ಪಡಿಸಿದ ದರದಂತೆ ಗುತ್ತಿಗೆದಾರರು ದರವನ್ನು ನೀಡಬೇಕು,ಗುತ್ತಿಗೆದಾರರು ಸ್ಥಳ ಪರಿವೀಕ್ಷಣೆ ಮಾಡಿ ಸದರಿ ದರವನ್ನು ಮಿಕ್ಕದಂತೆ ಸ್ಪರ್ಧಾತ್ಮಕವಾಗಿ ದರವನ್ನು ನೀಡಬೇಕು. ಅರ್ಹತೆ ಹೊಂದಿರುವ ಗುತ್ತಿಗೆದಾರರು ದಾಖಲೆಗಳೊಂದಿಗೆ ಟೆಂಡರನ್ನು ಮುಚ್ಚಿದ ಲಕೋಟೆಯಲ್ಲಿ ಕಚೇರಿಗೆ ಕೊನೆಯ ದಿನಾಂಕ: 27-01-2026 ರಂದು ಸಮಯ 16.00 ಗಂಟೆವರೆಗೆ ಸಲ್ಲಿಸಬಹುದಾಗಿದೆ, ಟೆಂಡರನ್ನು ತೆರೆಯುವ ದಿನಾಂಕ: 28-01-2026ರಂದು ಸಮಯ 17.00 ಗಂಟೆವರೆಗೆ.

**ಗುತ್ತಿಗೆದಾರರು ಈ ಕೆಳಗಿನ ನಮೂನೆಯಲ್ಲಿ ಹೆಚ್ಚುವರಿ ಮಾಹಿತಿಯನ್ನು ಸಲ್ಲಿಸುವ ವಿವರ**

| ಕ್ರ. ಸಂ | ಐಟಂ ವಿವರ | ಇಲಾಖೆ ನಿಗಧಿ ಪಡಿಸಿದ ದರ | ಗುತ್ತಿಗೆದಾರರು ನಮೂದಿಸುವ ದರ |
|---|---|---|---|
| 1 | 2025-26ನೇ ಸಾಲಿನಲ್ಲಿ ಬೀದರ ಜಿಲ್ಲೆ ಬೀದರ ತಾಲ್ಲೂಕಿನ ಜಾಂಪಾಡ ಏತ ನೀರಾವರಿ ಯೋಜನೆಯ ರೈಸಿಂಗ್ ಮೇನ್,ಪೈಪ್‌ಲೈನ್ ಪುನರುಜ್ಜೀವನ ಕಾಮಗಾರಿಗಳನ್ನು ಕೈಗೊಂಡ ನಂತರ ಉಪಯೋಗಕ್ಕೆ ಬಾರದ ಹಳೆಯ RCC Np2 pipe ಗಳ ಸ್ಕ್ರ್ಯಾಪ್ ದರ ನಿಗಧಿ ಮಾಡಲು ಕೋಟೆಷನ್ ಟೆಂಡರ ಮಾಡುವುದು. | ಕಲಬುರಗಿ ವೃತ್ತ 2023-24ನೇ ಸಾಲಿನ ಪಿ.ಡಬ್ಲ್ಯೂಡಿ ವೋಲ್ಯೂಮ್-1,2,3,4,5 ದರ ಪಟ್ಟಿಯ ಪ್ರಕಾರ ನಿಗದಿ ಪಡಿಸಿದ RCC Np2 pipe ದರದಂತೆ. | ಗುತ್ತಿಗೆದಾರರು ಉಪಯೋಗಕ್ಕೆ ಬಾರದ ಹಳೆಯ RCC Np2 pipe ಗಳ ಸ್ಕ್ರ್ಯಾಪ್ ದರ ನಮೂದಿಸುವ ದರ ಪ್ರತಿ ಮೀಟರ್ ನಲ್ಲಿ ಒದಗಿಸುವುದು. |

| ಕ್ರ. ಸಂ | ಐಟಂ ವಿವರ | ಗುತ್ತಿಗೆದಾರರು ನಮೂದಿಸುವ ದರ(ಪ್ರತಿ ಮೀಟರ್ ನಲ್ಲಿ) |
|---|---|---|
| 1 | 2025-26ನೇ ಸಾಲಿನಲ್ಲಿ ಬೀದರ ಜಿಲ್ಲೆ ಬೀದರ ತಾಲ್ಲೂಕಿನ ಜಾಂಪಾಡ ಏತ ನೀರಾವರಿ ಯೋಜನೆಯ ರೈಸಿಂಗ್ ಮೇನ್,ಪೈಪ್‌ಲೈನ್ ಪುನರುಜ್ಜೀವನ ಕಾಮಗಾರಿಗಳನ್ನು ಕೈಗೊಂಡ ನಂತರ ಉಪಯೋಗಕ್ಕೆ ಬಾರದ ಹಳೆಯ RCC Np2 pipe ಗಳ ಸ್ಕ್ರ್ಯಾಪ್ ದರ. | |

ರುಜು ಅರ್ಜಿದಾರರ ಹೆಸರು

ಟೆಂಡರ ಸ್ವಿಕರಿಸುವ ಕೊನೆಯ **ದಿನಾಂಕ 27-01-2026 : ಸಮಯ 16.00 ಗಂಟೆಯ ವರೆಗೆ**

ಟೆಂಡರ ತೆರೆಯುವ ದಿನಾಂಕ: **28-01-2026 : ಸಮಯ 17.00 ಗಂಟೆಗೆ ಸಾಧ್ಯವಾದಲ್ಲಿ.**

**ಸಹಿ/- ಕಾರ್ಯ ನಿರ್ವಾಹಕ ಅಭಿಯಂತರರು,**
**ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.**

ವಾ.ಸಾ.ಸಂ.ಇ/ಬೀದರ/300/ಕೆ.ಎಸ್.ಎಂ.ಸಿ.&ಎ/2025-26

### ಅಂಬಿಗರ ಚೌಡಯ್ಯ ಜಯಂತೋತ್ಸವ

## ಸಮಾಜದವರು ಪಾಲ್ಗೊಳ್ಳಲು ಕರೆ: ನಿಂಗಪ್ಪ ಜಾಲಗಾರ್.

- **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**



ನಾಳೆ ನಿಜಶರಣ ಅಂಬಿಗರ ಚೌಡಯ್ಯನವರ ಜಯಂತೋತ್ಸವ ಬಹಳ ಅದ್ದೂರಿಯಾಗಿ ಜಿಲ್ಲಾ ಆಡಳಿತ ಮತ್ತು ಸಮಾಜದ ವತಿಯಿಂದ ನಗರದ ವಿದ್ಯಾಮಂಗಲ ಕಾರ್ಯಾಲಯದಲ್ಲಿ ವಿಜ್ರಮಣೆಯಿಂದ ನಡೆಯುತ್ತದೆ ಸರ್ವರಿಗೂ ಭಾಗಿಯಾಗಲು ಗಂಗಾಮತ ಕೋಲಿ ಸಮಾಜದ ತಾಲೂಕ ಅಧ್ಯಕ್ಷ ನಿಂಗಪ್ಪ ಜಾಲಗಾರ್ ಮಾಧ್ಯಮದ ಮೂಲಕ ಮನವಿ ಮಾಡಿದ್ದಾರೆ.

ನಿಜ ಶರಣ ಅಂಬಿಗರ ಚೌಡಯ್ಯನವರ ಜಯಂತೋತ್ಸವ ಅಂಗವಾಗಿ ಬೆಳಗ್ಗೆ 8 ಗಂಟೆಗೆ ಶ್ರೀ ಗಂಗಾಪರಮೇಶ್ವರಿ ಕಲ್ಯಾಣ ಮಂಟಪ ಕೊಲಿವಾಡದಲ್ಲಿ ಪೂಜೆ ಹಾಗೂ ಧ್ವಜಾರೋಹಣ ನೆರವೇರಿಸಿ ನಂತರ ಬೆಳಗ್ಗೆ 10 ಗಂಟೆಗೆ ನಿಜ ಶರಣ ಅಂಬಿಗರ ಚೌಡಯ್ಯನವರ ಚೌಕನಲ್ಲಿ ಭಾವಚಿತ್ರಕ್ಕೆ ಪೂಜೆ ಹಾಗೂ ಧ್ವಜಾರೋಹಣ ನೆರವೇರಿಸಿ 12:30 ಗಂಟೆಗೆ ಕಲಾ ತಂಡಗಳೊಡಣೆ ವಿದ್ಯಾಮಂಗಲ ಕಲ್ಯಾಣ ಮಂಟಪದಲ್ಲಿ ಅದ್ದೂರಿಯಾಗಿ ವಿಜೃಂಭಣೆಯಿಂದ ನಿಜ ಶರಣ ಅಂಬಿಗರ ಚೌಡಯ್ಯನವರ ಜಯಂತಿಯನ್ನು ಆಚರಿಸಿ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಭಾಗಿಯಾಗಿ ಯಶಸ್ವಿಗೊಳಿಸಬೇಕಾಗಿ ತಮ್ಮಲ್ಲಿ ಮನವಿಯನ್ನು ಮಾಡಲಾಗುತ್ತದೆ ಎಂದು ಹೇಳಿದರು.

## ಮಲ್ಲಿಕಾರ್ಜುನ ಶಿರಗೋಳ ಜನ್ಮದಿನ ಪ್ರಯುಕ್ತ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ.



- **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**

ಪರಿಸರ ಪ್ರೇಮಿ, ಸಮಾಜಸೇವಕ ಹಾಗೂ ಯುವ ಉದ್ಯಮಿ ಮಲ್ಲಿಕಾರ್ಜುನ ಶಿರಗೋಳ ಅವರ ಜನ್ಮದಿನದ ನಿಮಿತ್ತ ಜ.22ರಂದು ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರ ಸೇರಿ ಇತರ ಸಾಮಾಜಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ಲಯನ್ಸ್ ಕ್ಲಬ್ ಅಧ್ಯಕ್ಷ ಭೀಮನಗೌಡ ಖ್ಯಾತನಾಳ ಹೇಳಿದರು. ನಗರದಲ್ಲಿ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿ, ಲಯನ್ಸ್ ಕ್ಲಬ್, ಶಶಿ ಚಾರಿಟಬಲ್ ಟ್ರಸ್ಟ್, ವೇದ ಕಣ್ಣಿನ ಆಸ್ಪತ್ರೆ, ಆವಿಜ್ಞಾ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಪಾಟೀಲ್ ದಂತ ಚಿಕಿತ್ಸಾಲಯ ಮತ್ತು ಯಾದಗಿರಿ ರಕ್ತನಿಧಿ ಕೇಂದ್ರ (ಯಿಮ್ಸ್) ಸಂಯುಕ್ತಾಶ್ರಯದಲ್ಲಿ ಆರೋಗ್ಯ ಉಚಿತ ತಪಾಸಣೆ, ನೇತ್ರ ಶಸ್ತ್ರ ಚಿಕಿತ್ಸೆ ರಕ್ತದಾನ ಶಿಬಿರ ಮತ್ತು ಇನ್ನೂ ಹಲವು ಸಾಮಾಜಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದರು. ಅಂದು ಬೆಳಗ್ಗೆ 9ಗಂಟೆಗೆ ನಗರದ ಸಪ್ನಾ ಗೌಂಡ್ ಹತ್ತಿರದ ಶ್ರೀ ಹರಿ ಪ್ಯಾರಾ ಮೆಡಿಕಲ್ ಕಾಲೇಜಿನಿಂದ ಬಸವೇಶ್ವರ ಕಲ್ಯಾಣ ಮಂಟಪದವರೆಗೆ ರಕ್ತದಾನದ ಬಗ್ಗೆ ಜಾಗೃತಿ ಜಾಥಾ ನಡೆಸಲಾಗುತ್ತಿದೆ. ನಂತರ 9.45ಕ್ಕೆ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ನಾನಾ ಕಾರ್ಯಕ್ರಮಗಳ ಜತೆಗೆ ಹಲವಾರು ಕ್ಷೇತ್ರಗಳಲ್ಲಿ ಸಾಧನೆಗೈದ ವೈದ್ಯರನ್ನು ಮತ್ತು ಸುಮಾರು 40 ಜನ ಆಶಾ ಕಾರ್ಯಕರ್ತೆಯರನ್ನು ಸನ್ಮಾನಿಸಲಾಗುತ್ತದೆ. ಆಶಾಕಾರ್ಯಕರ್ತೆಯರಿಗೆ ಇಮ್ಯೂನಿಟಿ ಬೂಸ್ಟರ್ ಕಿಟ್, ಟ್ರಾವೆಲ್ ಬ್ಯಾಗ್ ಹಾಗೂ ಸೀರೆಗಳನ್ನು ನೀಡಿ ಗೌರವಿಸಲಾಗುತ್ತದೆ ಎಂದರು. ಪರಿಸರ ಪ್ರೇಮಿ, ಸಮಾಜಸೇವಕ ಹಾಗೂ ಯುವ ಉದ್ಯಮಿ ಮಲ್ಲಿಕಾರ್ಜುನ ಶಿರಗೋಳ ಅವರ ಜನ್ಮದಿನವನ್ನು ಕೇಕ್ ಕತ್ತರಿಸಿ ಆಚರಣೆ ಮಾಡದೆ ಸಾಮಾಜಿಕ ಕಾರ್ಯಗಳ ಮೂಲಕ ಆಚರಿಸಲು ಉದ್ದೇಶಿಸಲಾಗಿದೆ ಎಂದು ವಿಠಲ ಸೇವಾ ಸಂಸ್ಥೆಯ ಅಧ್ಯಕ್ಷ ವಿಠಲ ಕುಲಕರ್ಣಿ ಹೇಳಿದರು. ಕಾರ್ಯಕ್ರಮದಲ್ಲಿ ಗುರುಮಠಕಲ್ ಖಾಸಮಠದ ಶ್ರೀ ಶಾಂತವೀರ ಗುರುಮುರುಘಾರಾಜೇಂದ್ರ ಮಹಾಸ್ವಾಮೀಜಿ, ಅಬ್ಬೆತುಮಕೂರಿನ ವಿಶ್ವಾರಾಧ್ಯ ಮಠದ ಕಿರಿಯ ಸ್ವಾಮೀಜಿ ಶಿವಶೇಖರಸ್ವಾಮಿ, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಮಲ್ಲಪ್ಪ ಸಂಕೀನ್, ಶ್ರೀ ಹರಿ ಪ್ಯಾರಾ ಮೆಡಿಕಲ್ ಕಾಲೇಜಿನ ಅಧ್ಯಕ್ಷ ಸುಭಾಶ್ಚಂದ್ರ ಮಾನೆಗಾರ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ವೈದ್ಯರಾದ ನೇತ್ರ ತಜ್ಞೆ ಡಾ.ನವನೀತಾ ರೆಡ್ಡಿ, ದಂತ ತಜ್ಞೆ ಡಾ.ಪೂಜಾ ಪಾಟೀಲ, ಶಸ್ತ್ರಚಿಕಿತ್ಸಕ ಡಾ. ಸುನೀಲಕುಮಾರ ಪಾಟೀಲ, ರೆಡಿಯೋಲಾಜಿಸ್ಟ್ ಡಾ.ಸುಷ್ಮಾರೆಡ್ಡಿ ಪಾಟೀಲ, ಮೂಳೆ ತಜ್ಞ ಡಾ.ವಿನೋಜ ಸಜ್ಜನ್, ವೈದ್ಯಾಧಿಕಾರಿಗಳಾದ ಡಾ.ವಿನಿತಾ, ಡಾ. ಸಿದ್ದಲಿಂಗರೆಡ್ಡಿ ಚಿಕಿತ್ಸೆ ನೀಡಲಿದ್ದಾರೆ ಎಂದರು. ಮುಖಂಡರಾದ ರಾಚನಗೌಡ ಮುದ್ನಾಳ್, ಲಯನ್ಸ್ ಕ್ಲಬ್ ಕಾರ್ಯದರ್ಶಿ ಡಾ.ಶಿವಪುತ್ರರೆಡ್ಡಿ ಪಾಟೀಲ್, ಅವಿಘ್ನಾ ಆಸ್ಪತ್ರೆಯ ಡಾ.ಸುನೀಲ್ ಕುಮಾರ್ ಪಾಟೀಲ್, ವೇದ ಕಣ್ಣಿನ ಆಸ್ಪತ್ರೆಯ ಮುಖ್ಯಸ್ಥನಾಗೇಂದ್ರ ರೆಡ್ಡಿ, ಶ್ರೀ ಹರಿ ಪ್ಯಾರಾ ಮೆಡಿಕಲ್ ಕಾಲೇಜಿನ ಅಧ್ಯಕ್ಷ ಸುಭಾಶ್ಚಂದ್ರ ಮಾನೆಗಾರ, ಶಶಿ ಗೆಳೆಯರ ಬಳಗದ ದೊಡ್ಡಪ್ಪ ವಿಶ್ವಕರ್ಮ ಉಪಸ್ಥಿತರಿದ್ದರು.

# ಬಾಯಿ ಸ್ತನ ಮತ್ತು ಗರ್ಭಕಂಠ ಕ್ಯಾನ್ಸರ್ ಜಾಗೃತಿ ತಡೆಯುವಿಕೆ ಕೈಪಿಡಿ ಬಿಡುಗಡೆ ತಪಾಸಣೆ ಶಿಬಿರ

- **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ :**




ಸಾಮಾನ್ಯ ಜನರು ಕ್ಯಾನ್ಸರ್ ತಪಾಸಣೆಯನ್ನು ಮುಂಜಾಗೃತ ಕ್ರಮವಾಗಿ ಮಾಡಿಸಿಕೊಳ್ಳಬೇಕು ಎಂದು ಯಾದಗಿರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ.ಮಹೇಶ್ ಬಿರಾದಾರ್ ಅವರು ಹೇಳಿದರು.

ಯಾದಗಿರಿ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಎನ್.ಸಿ.ಡಿ. ವಿಭಾಗ, ಕಲಬುರಗಿ ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಒರಾಕಲ್ ಸಂಸ್ಥೆ, ಸಂಯುಕ್ತಾಶ್ರಯದಲ್ಲಿ ಬಾಯಿಸ್ತನ ಮತ್ತು ಗರ್ಭಕಂಠ ಕ್ಯಾನ್ಸರ್ ಜಾಗೃತಿ ತಡೆಯುವಿಕೆ ಕೈಪಿಡಿ ಬಿಡುಗಡೆ ತಪಾಸಣೆಗೊಳಿಸಿ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಈಗಾಗಲೇ ಆರೋಗ್ಯ ಇಲಾಖೆ ಮತ್ತು ಕಲಬುರಗಿ ಇಂಡಿಯನ್ ಕ್ಯಾನ್ಸರ್ ಸೊಸೈಟಿ ಕರ್ನಾಟಕ ಅಧ್ಯಾಯ ಸಹಯೋಗದಲ್ಲಿ ಯಾದಗಿರಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ನಡೆಸುತ್ತಿದ್ದು, ಗ್ರಾಮಸ್ಥರು ಇದರ ಸದುಪಯೋಗ ಪಡೆದಿರುತ್ತಾರೆ, ಎಲ್ಲಾ ಸಾಮಾನ್ಯ ಜನರು ಕ್ಯಾನ್ಸರ್ ತಪಾಸಣೆಯನ್ನು ಮುಂಜಾಗೃತ ಕ್ರಮವಾಗಿ ಮಾಡಿಸಿಕೊಳ್ಳಬೇಕು ಎಂದರು.

ಜಿಲ್ಲಾ ಎನ್.ಸಿ.ಡಿ ಅಧಿಕಾರಿ ಡಾ.ಪದ್ಮಾನಂದ ಗಾಯಕ್ವಾಡ ಅವರು ಕ್ಯಾನ್ಸರ್ ನಿಂದ ದೂರವಿರಲು ನಮ್ಮ ಜೀವನ ಪದ್ದತಿ ಮತ್ತು ಆಹಾರ ಪದ್ದತಿಯನ್ನ ಸರಿಪಡಿಸಿಕೊಳ್ಳಬೇಕು ಮತ್ತು ಲಕ್ಷಣಗಳೆನಾದರು ಕಂಡುಬಂದಲ್ಲಿ ವೈದ್ಯರಿಗೆ ಸಂಪರ್ಕಿಸಬೇಕು ಎಂದು ಹೇಳಿದರು.

ಜಿಲ್ಲಾ ಸರ್ವೆಕ್ಷಣಾಧಿಕಾರಿ ಡಾ.ಮಲ್ಲನಗೌಡ ಪಾಟೀಲ್ ಅವರು ಮಾತನಾಡಿ, ಕ್ಯಾನ್ಸರ್ ಕುರಿತು ನಮ್ಮ ದೇಶದಲ್ಲಿ ಮಹಿಳೆಯರಿಗೆ ಸ್ತನ ಮತ್ತು ಗರ್ಭಕಂಠದ ಕ್ಯಾನ್ಸರ್ ಹೆಚ್ಚಾಗಿ ಬರುತ್ತಿರುವದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಇಂಡಿಯನ್ ಕ್ಯಾನ್ಸರ್ ಸೊಸೈಟಿ ನಡೆಸುತ್ತಿರುವ ಉಚಿತ ತಪಾಸಣಾ ಶಿಬಿರಗಳಲ್ಲಿ ಭಾಗವಹಿಸಿ ಪರೀಕ್ಷೆ ಮಾಡಿಸಿಕೊಳ್ಳಬೇಕು. 30 ವರ್ಷ ಮೇಲ್ಪಟ್ಟ ಎಲ್ಲಾ ವಿವಾಹಿತ ಮಹಿಳೆಯರು ಕಡ್ಡಾಯವಾಗಿ ಪ್ಯಾಪ್ಸಿ ಯರ್ ಪರೀಕ್ಷೆಯನ್ನು ಮಾಡಿಸಿಕೊಳ್ಳಬೇಕೆಂದು ತಿಳಿಸಿದರು.

ಕಲಬುರಗಿ ಇಂಡಿಯನ್ ಕ್ಯಾನ್ಸರ್ ಸೊಸೈಟಿ ವತಿಯಿಂದ ಪ್ರಾದೇಶಿಕ ವ್ಯವಸ್ಥಾಪಕರು ಗುರುರಾಜ್ ಕುಲಕರ್ಣೀ ಅವರು ಮಾತನಾಡಿ, ಆಶಾ ಕಾರ್ಯಕತೆ–ಯರು ಮತ್ತು ಅಂಗನವಾಡಿ ಸಹಾಯಕಿಯರಿಗೆ ಬಾಯಿ, ಸ್ತನ ಮತ್ತು ಗರ್ಭಕಂಠದ ಕ್ಯಾನ್ಸರ್ ಕುರಿತು ಸವಿಸ್ತಾರವಾಗಿ ಉಪನ್ಯಾಸ ನೀಡಿದರು. ಒರಾಕಲ್ ಸಂಸ್ಥೆಯ ಸಹಾಯದೊಂದಿಗೆ ಬಾಯಿ ಸ್ತನ ಮತ್ತು ಗರ್ಭಕಂಠ ಕ್ಯಾನ್ಸರ್ ಜಾಗೃತಿ ಮತ್ತು ತಡೆಯುವಿಕೆ ಕೈಪಿಡಿ, ಕ್ಯಾನ್ಸರ್ ಎಂದರೇನು ಕ್ಯಾನ್ಸರ್ ಬರಲು ಕಾರಣಗಳು ಚಿಹ್ನೆಗಳು, ಲಕ್ಷಣಗಳು, ಅಪಾಯಕಾರಿ ಅಂಶಗಳು ಸ್ವಯಂ ತಪಾಸಣಾ ಕ್ರಮಗಳು ತಡೆಗಟ್ಟಲು ಅನುಸರಿಸಬೇಕಾದ ಕ್ರಮಗಳು ಕುರಿತಂತೆ ಚಿತ್ರದೊಂದಿಗೆ ಸಂಪೂರ್ಣ ಮಾಹಿತಿವುಳ್ಳ ಕೈಪಿಡಿಗಳನ್ನು ಆಶಾ ಕಾರ್ಯಕರ್ತೆಯರಿಗೆ ನೀಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಡಿಪಿಡಿಒ ಅಧಿಕಾರಿಗಳಾದ ಡಾ.ಮುದಾಸ್ಸಿರ್ ಅಹ್ಮದ್ ಸಾಜಿದ್, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ.ಜ್ಯೋತಿ ಕಟ್ಟಿಮನಿ, ಜಿಲ್ಲಾ ಆರೋಗ್ಯ ಶಿಕ್ಷಣ ಅಧಿಕಾರಿಗಳಾದ ಶ್ರೀಮತಿ ಲಕ್ಷ್ಮಿ □□ೀ.ಬಿ ಮುಂಡಾಸ್ ಕಾರ್ಯಕ್ರಮ ನಿರೂಪಿಸಿದರು. ಡಾ.ರಶೀದ್, ತುಳಸಿರಾಮ ವಂದನಾರ್ಪಣೆ ನೆರವೇರಿಸಿದರು. ಕಲಬುರಗಿ ಇಂಡಿಯನ್ ಕ್ಯಾನ್ಸರ್ ಸೊಸೈಟಿ ಆರೋಗ್ಯ ಇಲಾಖೆ ಯಪ್ರಾದೇಶಿಕ ಸಂಯೋಜಿಕರು ಅಧಿಕಾರಿ ಶ್ರೀನಿದಿ ನಾಯ್ಕಲ್ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಕ್ಲಸ್ಟರ್ ತರಬೇತಿ ಕಾರ್ಯಕ್ರಮ.

- **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**



ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ,. ಬೆಂಗಳೂರು. ಹಾಗೂ ಯಾದಗಿರಿ ಜಿಲ್ಲಾ ಸಹಕಾರ ಒಕ್ಕೂಟ ನಿ. ಯಾದಗಿರಿ ಹಾಗೂ ಸಹಕಾರ ಇಲಾಖೆ ಯಾದಗಿರಿ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಹುಣಸಗಿ ಇವರುಗಳ ಸಂಯುಕ್ತಾಕ್ಷರದಲ್ಲಿ ಕ್ಲಸ್ಟರ್ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು ಸಹಕಾರ ಸಂಘಗಳು ಅಬಲ ವರ್ಗದ ಜನರ ಆರ್ಥಿಕ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಹಾಗೂ ಸಹಕಾರ ಸಂಘ ಸಂಸ್ಥೆಗಳು ಇಂದು ಜೀವನದ ಎಲ್ಲಾ ಆಯಾಮಗಳನ್ನು ಆವರಿಸಿಕೊಂಡಿದೆ ಇಂತಹ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುವ ಸಂಘ ಸಂಸ್ಥೆಗಳ ಸದಸ್ಯರಿಗೆ ಕೌಶಲ್ಯ ತರಬೇತಿ ಹೆಚ್ಚಿಸುವ ಜೊತೆಗೆ ಹೊಸದಾಗಿ ಬಂದ ನಿರ್ದೇಶಕರಿಗೂ ಹಾಗೂ ಸಂಘದ ಸದಸ್ಯರಿಗೂ ಸಹಕಾರಿ ವ್ಯವಸ್ಥೆಯ ಕುರಿತು ತರಬೇತಿ ನೀಡುವ ಮೂಲಕ ಗುಣಮಟ್ಟದ ವ್ಯವಸ್ಥೆ ಯಾಗಬೇಕು ಎಂದು ಸಸಿಗೆ ನೀರು ಎರೆಯುವುದರ ಮುಖಾಂತರ ಬಸವರಾಜ ಬಳಿ ಮಾಜಿ ಸಂಘದ ಕಾರ್ಯದರ್ಶಿ ಉದ್ಘಾಟನಾ ಭಾಷಣವನ್ನು ನೆರವೇರಿಸಿದರು ಹಾಗೂ ಸಂಘದ ಅಧ್ಯಕ್ಷತೆಯನ್ನು ಶ್ರೀ ರಾಚಪ್ಪ ರುದ್ರಪ್ಪ ಪಟ್ಟಣಶೆಟ್ಟಿ ಇವರು ವಹಿಸಿದ್ದರು ಮಹಿಳಾ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳಾದ ಉದ್ಯೋಗಿನಿ ಕಿರು ಸಾಲ ಅಲ್ಪಸಂಖ್ಯಾತರ ಪುನರ್ ವಸತಿ ಯೋಜನೆ ಧನಶ್ರೀ ಯೋಜನೆ ಚೇತನ ಯೋಜನೆ

ಮಹಿಳಾ ಮತ್ತು ಮಕ್ಕಳ ಇಲಾಖೆಯಿಂದ ವಿವಿಧ ಯೋಜನೆಗಳ ಮಹಿಳೆಯರಿಗೆ ಸಿಗುವ ಸಾಲ ಸೌಲಭ್ಯಗಳ ಕುರಿತು ಹಾಗೂ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಸದಸ್ಯರಿಗೆ ಇಲಾಖೆಯಿಂದ ಸಿಗುವ ಯೋಜನೆಗಳ ಕುರಿತು ವಿಸ್ತಾರವಾಗಿ ಜಿಲ್ಲಾ ಅಭಿವೃದ್ಧಿ ನಿರೀಕ್ಷಕರು ಶ್ರೀಮತಿ ಶಿವಮಂಗಳ ಎಂ ಪ್ರಸನ್ನ ವಿಶೇಷವಾಗಿ ಉಪನ್ಯಾಸ ನೀಡಿದರು, ಹಾಗೂ ಸಹಕಾರ ಚಳುವಳಿ ಹಾಗೂ ಡಿಸಿಎಂ ತರಬೇತಿಯ ಕುರಿತು ಪ್ರಾಸ್ತಾವಿಕವಾಗಿ ಹಾಗೂ ಕಾರ್ಯಕ್ರಮದ ನಿರೂಪಣೆ ಶ್ರೀಮತಿ ಸುಜಾತ ಮಠ ಜಿಲ್ಲಾ ಸಹಕಾರ ಶಿಕ್ಷಕರು ಯಾದಗಿರಿ ಇವರು ನೆರವೇರಿಸಿದರು, ವಂದನಾರ್ಪಣೆಯನ್ನು ಸಂಘದ ಕಾರ್ಯದರ್ಶಿ ವೀರೇಶ್ ಬಳಿ ನೆರವೇರಿಸಿದರು. ವಂದನಾರ್ಪಣೆಯನ್ನು ವೀರಪ್ಪಣ್ಣ ವ್ಯವಸ್ಥಾಪಕರು ಜಿಲ್ಲಾ ಸಹಕಾರ ಒಕ್ಕೂಟ ನಿ,.ಯಾದಗಿರಿ ಇವರು ನೆರವೇರಿಸಿದರು ಮುಖ್ಯ ಅತಿಥಿಗಳಾಗಿ ಬಸನಗೌಡ ಪೊಲೀಸ್ ಪಾಟೀಲ್ ಉಪಸ್ಥಿತರಿದ್ದರು ಹಾಗೂ ಸಂಘದ ಸಿಬ್ಬಂದಿಗಳಾದ ಮಂಜುನಾಥ ಹಾಗೂ ಸಂಘದ ಸರ್ವ ಸದಸ್ಯರು ಮಹಿಳೆಯರು ಉಪಸ್ಥಿತರಿದ್ದರು.

## ಜ.23 ರಿಂದ ಜಗದ್ಗುರು ನಿರಂಜನ ಸಂಸ್ಥಾನ ಮಠದ ಪಟ್ಟಾಭಿಷೇಕ ಮಹೋತ್ಸವ

ವರದಿ – ಪರಶುರಾಮ. ಕರಣಂ

- **ಮಲ್ಲಮ್ಮ ನುಡಿ ವಾರ್ತೆ,ಭಾಲ್ಕಿ:**

ತಾಲೂಕಿನ ಭಾತಂಬ್ರಾ ಗ್ರಾಮದಲ್ಲಿ ಜ.23 ರಿಂದ 25ರ ವರೆಗೆ ನಿರಂಜನ ಜಗದ್ಗುರು ಪಟ್ಟಾಭಿಷೇಕ ಮಹೋತ್ಸವ ಜರುಗಲಿದೆ ಎಂದು ಜಗದ್ಗುರು ನಿರಂಜನ ಸಂಸ್ಥಾನ ಮಠದ ಜಗದ್ಗುರು ಶಿವಯೋಗೀಶ್ವರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಭಾತಂಬ್ರಾ ಗ್ರಾಮದ ಜಗದ್ಗುರು ನಿರಂಜನ ಸಂಸ್ಥಾನ ಮಠದಲ್ಲಿ ಭಾನುವಾರ ಕರೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಜ.23ರಂದು ಬೆಳಿಗ್ಗೆ 9 ಗಂಟೆಗೆ ಷಟಸ್ಥಲ ನಡೆಸುವುದರ ಮೂಲಕ ಪಟ್ಟಾಭಿಷೇಕ ಮಹೋತ್ಸವ ಸಮಾರಂಭಕ್ಕೆ ಮಹಾರಾಜರು, ಹಾವಗಿಲಿಂಗೇಶ್ವರ ಶಿವಾಚಾರ್ಯ, ರೋಣ ಕ್ಷೇತ್ರದ ಶಾಸಕ ಜೆ.ಎಸ್.ಪಾಟೀಲ್, ಸಂಸದ ಸಾಗರ ಖಂಡ್ರೆ, ಬಸವರಾಜ ಧನ್ನೂರು ಸೇರಿದಂತೆ ಮುಂತಾದವರು ಭಾಗವಹಿಸಲಿದ್ದಾರೆ.

ಜ.25 ರಂದು ಬಾಹ್ಮಿ ಮೂಹರ್ತದಲ್ಲಿ ಷಟಸ್ಥಲ ಬ್ರಹ್ಮೋಪದೇಶ ನಡೆಯಲಿದೆ. ಬೆಳಿಗ್ಗೆ 10 ಗಂ–ಟೆಗೆ ಶೂನ್ಯತತ್ವ ಪೀಠಾರೋಹಣ ನಡೆಯಲಿದ್ದು ಡಾ.ಮಲ್ಲಿಕಾರ್ಜುನ ಮಿರುಘರಾಜೇಂದ್ರ ಸ್ವಾಮೀಜಿ, ಡಾ.ಶಿವಾನಂದ ರಾಜಯೋಗೇಂದ್ರ ಸ್ವಾಮೀಜಿ ಸೇರಿ ಹಲವು ಪೂಜ್ಯರು ಭಾಗವಹಿಸಲಿದ್ದಾರೆ.

ಮಧ್ಯಾಹ್ನ 3 ಗಂಟೆಗೆ ನೂತನ ಜಗದ್ಗುರುಗಳ ಭವ್ಯ ಮೆರವಣಿಗೆಯೊಂದಿಗೆ ಎಲ್ಲ ಕಾರ್ಯಕ್ರಮಗಳಿಗೆ ತೆರೆ ಬೀಳಲಿವೆ ಎಂದು ತಿಳಿಸಿದರು.



ಚಾಲನೆ ಸಿಗಲಿದೆ. ಬೆಳಿಗ್ಗೆ 9.30ಗಂಟೆಗೆ ಲಿಂಗದೀಕ್ಷೆ, ಅಯ್ಯಾಚಾರ ನಡೆಯಲಿದೆ.

ಸಾಯಂಕಾಲ 6ಗಂಟೆಗೆ ಬಸವ ದರ್ಶನ ಪ್ರವಚನ ಮಂಗಲ, ಜಗದ್ಗುರಗಳ 82ನೆಯ ಗುರುವಂದನೆ ಕಾರ್ಯಕ್ರಮ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಉದ್ಘಾಟಿಸಲಿದ್ದಾರೆ. ಹುಬ್ಬಳ್ಳಿ ಮೂರು ಸಾವಿರ ಮಠದ ಜಗದ್ಗುರು ಡಾ.ಗುರುಸಿದ್ಧರಾಜಯೋಗೀಂದ್ರಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು ಮುಂತಾದ ಮಠಾಧೀಶರು ಭಾಗವಹಿಸಲಿದ್ದಾರೆ.

ಜ.24ರಂದು ಬೆಳಿಗ್ಗೆ 10.30ಗಂಟೆಗೆ ಮಹಿಳಾ ಗೋಷ್ಠಿ ನಡೆಯಲಿದೆ. ಕೂಡಲ ಸಂಗಮ ಬಸವ ಧರ್ಮ ಪೀಠಾಧ್ಯಕ್ಷೆ ಡಾ.ಮಾತೆ ಗಂಗಾದೇವಿ ತಾಯಿ ದಿವ್ಯ ಸಾನ್ನಿಧ್ಯ ವಹಿಸುವರು. ಹಲಬರ್ಗಾ ಶರಣಗಿರಿ ಮಹಾಮಠದ ಮಾತೆ ಬಸವಾಂಜಲಿ ತಾಯಿ ನೇತೃತ್ವ ವಹಿಸಲಿದ್ದಾರೆ. ಬಸವಕಲ್ಯಾಣ ಹರಳಯ್ಯ ಗವಿಮಠದ ಅಧ್ಯಕ್ಷೆ ಡಾ.ಗಂಗಾಂಬಿಕಾ ಅಕ್ಕ ಅವರು ಗೋಷ್ಠಿ ಉದ್ಘಾಟಿಸಲಿದ್ದಾರೆ.

ಸಾಯಂಕಾಲ 6 ಗಂಟೆಗೆ ಶರಣ ಸಂಸ್ಕೃತಿ ಚಿಂತನ ಗೋಷ್ಠಿ ನಡೆಯಲಿದ್ದು ತೋಂಟದಾರ್ಯ ಸಂಸ್ಥಾನ ಮಠದ ಡಾ.ತೋಂಟದ ಸಿದ್ದರಾಮ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಡಾ.ಜಗದ್ಗುರು ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ, ಶಿವಾನಂದ ಶಿವಾಚಾರ್ಯ, ಹವಾ ಮಲ್ಲಿನಾಥ

ಡಾ.ಗುರುಬಸವ ದೇಶಿಕರು ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಜಗದ್ಗುರು ಶಿವಯೋಗೀಶ್ವರ ಸ್ವಾಮೀಜಿ ಅವರು ಆರು ದಶಕಗಳ ಕಾಲ ಬಸವತತ್ವ ಪ್ರಚಾರ ಪ್ರಸಾರದ ಜತೆಗೆ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಅದ್ಭುತ ಕಾರ್ಯಗಳನ್ನು ಮಾಡಿದ್ದಾರೆ ಅಂತಹ ಪೂಜ್ಯರು ಮುನ್ನಡೆಸುತ್ತಿರುವ ಶ್ರೀಮಠಕ್ಕೆ ನಾನು ಪೀಠಾಧಿಪತಿ ಆಗುತ್ತಿರುವುದು ನನ್ನ ಪುಣ್ಯವೆಂದು ಭಾವಿಸಿದ್ದೇನೆ ಪೂಜ್ಯರ ಮಾರ್ಗದರ್ಶನದಲ್ಲಿ ಶ್ರೀಮಠವನ್ನು ಸಮರ್ಥವಾಗಿ ಮುನ್ನಡಿಸಿಕೊಂಡು ಶ್ರೀಮಠದ ಬೆಳವಣಿಗೆ ಶ್ರಮ ವಹಿಸುತ್ತೇನೆ ಎಂದು ಭರವಸೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ಶ್ರೀಕಾಂತ ಭೋರಾಳೆ, ಶಂಕರ ಭೋರಾಳೆ, ಮಹಾದೇವ ಬೇಲೂರೆ, ಕಾಶಿನಾಥ ಲದ್ದೆ, ವೈಜಿನಾಥ ಟೋಕರೆ, ಚಂದ್ರಕಾಂತ ಗಾಮಾ, ವಿಜಯಕುಮಾರ ಭೋರಾಳೆ, ಪ್ರಭು ಪಂಚಾಕ್ಷರೆ, ರಮೇಶ ಬಿರಾದಾರ್, ಶಾಲಿವಾನ ಖರಾಬೆ, ರಾಜಶೇಖರ ಪಾಟೀಲ್, ಅಶೋಕ ಗಾಮಾ, ಬಸವರಾಜ ಬಿರಾದಾರ್, ದಯಾನಂದ ಗಾಮಾ, ಸಂತೋಷ ಬಿರಾದಾರ್, ಸುರೇಶ ಗಾಮಾ, ಪ್ರೇಮನಾಥ ಗಾಮಾ, ಸಂಗಮೇಶ ಗಾಮಾ, ಸಂಜುಕುಮಾರ ದಾನಪುರಗೆ, ಗುರುಚಂದ್ರಯ್ಯ ಸ್ವಾಮಿ, ವಿಶ್ವನಾಥ ಪಾರಣ್ಣ, ಬಸವಪ್ರಸಾದ ಭೋರಾಳೆ, ದೀಪಕ ಠಮಕೆ ಸೇರಿದಂತೆ ಹಲವರು ಇದ್ದರು.

## ಕ್ರೀಡೆಯಲ್ಲಿ ಸೋಲು– ಗೆಲುವು ಮುಖ್ಯವಲ್ಲ ಪಾಲ್ಗೊಳ್ಳುವುದು ಮುಖ್ಯ: ಭೀಮರಾವ ಪಾಟೀಲ್



- **ಮಲ್ಲಮ್ಮ ನುಡಿ ವಾರ್ತೆ,ಚಿಟಗುಪ್ಪ:**

ಕ್ರೀಡೆಯಲ್ಲಿ ಸೋಲು ಗೆಲುವು ಮುಖ್ಯವಲ್ಲ ಪಾಲ್ಗೊಳ್ಳುವುದು ಮುಖ್ಯ ಎಂದು ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ್ ಹೇಳಿದರು. ಪಟ್ಟಣದಲ್ಲಿ ಕ್ರಿಕೇಟ್ ಲೀಗ್ 6ನೇ ಅವೃತ್ತಿಯ ಕ್ರಿಕೆಟ್ ಟುರ್ನಮೆಂಟ್ ಉದ್ಘಾಟಿಸಿ ಮಾತನಾಡಿದ ಅವರು, ಕ್ರೀಡೆಗಳನ್ನು ಆಡುವುದರಿಂದ ದೈಹಿಕ ಮತ್ತು ಮಾನಸಿಕ ಸಮತೋಲನವನ್ನು ಕಾಯ್ದುಕೊಳ್ಳಬಹುದು. ಕ್ರೀಡೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವ ವ್ಯಕ್ತಿಯು ದೈಹಿಕ ಮತ್ತು ಮಾನಸಿಕ ಬೆಳವಣಿಗೆಯಲ್ಲಿ ಉತ್ತಮ ಬೆಳವಣಿಗೆಯನ್ನು ಹೊಂದಿರುತ್ತಾನೆ. ಕ್ರೀಡೆಯು ವ್ಯಕ್ತಿಯ ಆತ್ಮ ವಿಶ್ವಾಸವನ್ನು ಬೆಳೆಸುತ್ತದೆ ಮತ್ತು ಅವರ ವ್ಯಕ್ತಿತ್ವವನ್ನು ಸುಧಾರಿಸುತ್ತದೆ ಎಂದರು. ಈ ಸಂದರ್ಭದಲ್ಲಿ ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಭಿಷೇಕ್ ಆರ್ ಪಾಟೀಲ್, ಕೆಎಂಎಫ್ ನಿರ್ದೇಶಕ ರೇವಣಸಿದಪ್ಪ ವಿ ಪಾಟೀಲ್, ಶ್ರೀನಿವಾಸ ದುದಗುಂಡಿ, ವೀರೇಶ್ ತುಗಾಂವ್, ರಮೇಶ್ ಪಾರಾ, ಎಲಿಯಾ ಡಿಸೋಜಾ, ರಾಜದೀಪ್ ಜಾಬಾ, ಮೊಹಮ್ಮದ ಷರೀಫ್, ವಿಠಲರಾವ್ ಪಠಣಕರ್, ಇಮ್ಯಾನುಯೆಲ್, ವಿಜಯಕುಮಾರ ಕಲ್ಲೂರು, ಗುಂಡು ರೆಡ್ಡಿ, ದತ್ತು ಹಲಗಿ, ಅನೀಲ ಸಿಂಧೆ, ಕಿರಣ್ ಹಮಿಲಪುರಕರ್, ಮನೋಜ್ ಟಿಕೇಕರ್, ಅಕ್ಬರ್, ಮಜರ್ ಸೇರಿದಂತೆ ಕ್ರೀಡಾಪಟುಗಳು ಇದ್ದರು.

## ಲುಂಬಿನಿ ವನದಲ್ಲಿ ದೆವ್ವದ ಸುಳ್ಳು ಸುದ್ದಿ : ಕಾನೂನು ಕ್ರಮಕ್ಕೆ ಒತ್ತಾಯ

- **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**



ಯಾದಗಿರಿ ನಗರದ ಲುಂಬಿನಿ ವನದಲ್ಲಿ ಅಮವಾಸೆ ದಿನದ ಪ್ರಯುಕ್ತ ಮೂಢನಂಬಿಕೆ ವಿರುದ್ಧ ಜಾಗೃತಿ ಮೂಡಿಸಲು ಮತ್ತು ದೆವ್ವ ಭೂತ ಎಂದು ಸುಳ್ಳು ಗಾಳಿ ಹಬ್ಬಿಸಿದ್ದ ಕಿಡಿಗೇಡಿಗಳಿಂದ ಲುಂಬಿನಿ ವನಕ್ಕೆ ಅಪಮಾನ ಮಾಡಿದವರ ವಿರುದ್ಧ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳುವಂತೆ ದಲಿತ ಸಂಘಟನೆಗಳ ಸ್ವಾಭಿಮಾನಿ ಒಕ್ಕೂಟ ವತಿಯಿಂದ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು. ಈ ವೇಳೆ ಸಮಿತಿಯ ಸಲಹೆಗಾರ ಶರಣು ಎಸ್ ನಾಟೇಕರ್ ಮಾತನಾಡಿದ ಅವರು ನಗರದ ಲುಂಬಿನಿ ವನದಲ್ಲಿ ಕಳೆದ 17 ದಿನಗಳಿಂದ ಲುಂಬಿನಿ ಉದ್ಯಾನವನದಲ್ಲಿ ಭಯಾನಕ ಶಬ್ದ ಕೇಳಿಬರುತ್ತಿದೆ ಮತ್ತು ದೆವ್ವವಿದೆ ಎಂಬ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿತ್ತು. ಯಾರೋ ಕಿಡಿಗೇಡಿಗಳು ಸುಳ್ಳು ವಿಡಿಯೋ ಸೃಷ್ಟಿಸಿ ಪ್ರವಾಸಿಗರಲ್ಲಿ ಭಯಹುಟ್ಟಿಸುತ್ತಿದ್ದಾರೆ. ಸುಂದರವಾದ ಉದ್ಯಾನವನಕ್ಕೆ ಸಾರ್ವಜನಿಕರು ವೀಕ್ಷಣೆ ಮಾಡುವ ಜೊತೆಗೆ ಬೆಳಿಗ್ಗೆ ಧ್ಯಾನ ಮಾಡಲು ಜನರನ್ನು ತಡೆಯಲು ಇಂತಹ ಕೃತ್ಯ ಎಸಗಲಾಗುತ್ತಿದೆ. ಜನರು ಇಂತಹ ಮೂಢನಂಬಿಕೆಗಳಿಗೆ ಮರಳಾಗಬಾರದು ಎಂದು ಹೇಳಿದರು. ಈ ಸಂದರ್ಭದಲ್ಲಿ ಗೌರವಧ್ಯಕ್ಷರಾದ ಚಂದಪ್ಪ ಮುನಿಯಪ್ಪನೋರ್ ಅವರು ಲುಂಬಿನಿ ವನದಲ್ಲಿ ದೆವ್ವ ಭೂತಗಳಿವೆ ಎಂದು ಅಪ ಪ್ರಚಾರ ಮಾಡುತ್ತಿದ್ದು. ಜನರಿಗೆ ಭಯ ಭೀತರಾಗಿ ಮೂಡಿಸಿತ್ತಿದ್ದು, ಇದು ಕೇಲವು ಕಾಲ್ಪನಿಕ ಕಟ್ಟು ಕಥೆಯಾಗಿದೆ ಆಗಿದ್ದು ನಗರದ ತಥಾಗತ ಗೌತಮ ಬುದ್ದರ ಜನ್ಮ ಸ್ಥಳವಾದ ಲುಂಬಿನಿ ವನದ ಹೆಸರನ್ನು ಹಾಳು ಮಾಡುವ ಉದ್ದೇಶವಾಗಿದೆ ಎಂದು ಆರೋಪಿಸಿದ್ದಾರೆ. ದಲಿತ ಸಂಘಟನೆಗಳ ಸ್ವಾಭಿಮಾನಿ ಒಕ್ಕೂಟ ಅಧ್ಯಕ್ಷರಾದ ಕಾಶಿನಾಥ್ ನಾಟೇಕರ್ ಅವರು ಲುಂಬಿನಿ ವನಕ್ಕೆ ಸಾರ್ವಜನಿಕರು ಯಾವುದೇ ರೀತಿ ಭಯ ಭೀತರಾಗದಂತೆ ತಾವುಗಳು ಜನರಲ್ಲಿ ಜಾಗೃತಿ ಮೂಡಿಸಿ ಉದ್ಯನವನದಲ್ಲಿ ಸಿಸಿ ಕ್ಯಾಮೆರಾ ಅಳವಡಿಸಿ ಇಲ್ಲಿ ಪೊಲೀಸ್ ರಕ್ಷಣೆಗಾಗಿ ನಿಯೋಜಿಸಿ, ಮತ್ತು ಸಾಮಾಜಿಕ ಜಾಲ ತಾಣಗಳಲ್ಲಿ ಹರಿಬಿಟ್ಟವರ ಬಗ್ಗೆ ತನಿಖೆ ನಡೆಸಿ ಅವರ ವಿರುದ್ಧ ಕಾನೂನಿನ ಕ್ರಮಕೈಗೊಳ್ಳಲು ಮುಂದಾಗ ಬೇಕಾಗಿದೆ ಒತ್ತಾಯಿಸಿದ್ದರು. ಈ ವೇಳೆ ಜಗದೀಶ್ ಎನ್ ದಾಸನಕೇರಿ ಪ್ರಧಾನ ಕಾರ್ಯದರ್ಶಿ ಅವರು ಓದುವ ಮೂಲಕ ಮನವಿ ಪತ್ರ ನೀಡಿದರು. ಈ ವೇಳೆ ಡಾ. ಭಗವಂತ ಅನವಾರ, ಮರೆಪ್ಪ ಬುಕ್ಕಲ್, ಗುಂಡಪ್ಪ ಕಲ್ಬುರ್ಗಿ, ಸುರೇಶ್ ಬೊಮ್ಮನ್, ದೇವಿಂದ್ರಪ್ಪ, ಆನಂದ ಮ್ಯಾಗೇರಿ ಸಂ. ಕಾರ್ಯದರ್ಶಿ, ಚಂದ್ರಕಾಂತ್ ಚಲುವಾದಿ ಬೌದ್ಧ ಉಪಸಕರು, ರಾಹುಲ್ ಕೊಲ್ಲುರಕರ್ ಸಂ.ಕಾರ್ಯದರ್ಶಿ, ಶರಣಪ್ಪ ಮಮ್ಮದರ್, ಗಿರೀಶ್ ಚಟ್ಟೇರಕರ್, ಮಹಾದೇವಪ್ಪ ಗುರುಸುಣಗಿ, ಧನರಾಜ್ ಕೋಲಿವಾಡ್, ಮೌನೇಶ್, ಪರಶುರಾಮ್ ಚಲುವಾದಿ, ಇನ್ನಿತರರು ಇದ್ದರು.

## ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾಗಿ ಸಚಿವ ಈಶ್ವರ ಖಂಡ್ರೆ ಆಯ್ಕೆ.

### ಗಣ್ಯರು ಹಾಗೂ ಮಠಾಧೀಶರಿಂದ ಅಭಿನಂದನೆಗಳ ಮಹಾಪೂರ



ಭಾಲ್ಕಿ. ಅಖಿಲ ಭಾರತ ವೀರಶೈವ ಮಹಾಸಭೆಯ 24ನೇ ರಾಷ್ಟ್ರೀಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರಾದ ಈಶ್ವರ ಖಂಡ್ರೆ ಅವರಿಗೆ ಬೀದರ ಜಿಲ್ಲೆಯ ಮಠಾಧೀಶರು ಹಾಗೂ ಗಣ್ಯರು ಅಭಿನಂದನೆಗಳ ಮಹಾಪೂರ ಹರಿಸಿದ್ದಾರೆ. ಸಾಮಾಜಿಕ ನ್ಯಾಯ, ಸೇವೆ ಹಾಗೂ ಬಸವತತ್ವಾಧಾರಿತ ಚಿಂತನೆಗಳಿಗೆ ನಿಷ್ಠರಾಗಿರುವ ಈಶ್ವರ ಖಂಡ್ರೆ ಅವರ ನಾಯಕತ್ವಕ್ಕೆ ದೊರೆತ ಈ ಏಕಮತದ ಆಯ್ಕೆ, ವೀರಶೈವಲಿಂಗಾಯತ ಸಮುದಾಯದ ವಿಶ್ವಾಸ ಮತ್ತು ಏಕತೆಯನ್ನು ಪ್ರತಿಬಿಂಬಿಸುತ್ತದೆ. ಈಶ್ವರ ಖಂಡ್ರೆ ಅವರ ಅಧ್ಯಕ್ಷತೆಯಲ್ಲಿ ಮಹಾಸಭೆ ಇನ್ನಷ್ಟು ಬಲಿಷ್ಠವಾಗಿ, ಸಮುದಾಯದ ಹಿತಕ್ಕಾಗಿ ಪರಿಣಾಮಕಾರಿಯಾಗಿ ಮುಂದುವರಿಯಲಿದೆ ಎಂಬ ವಿಶ್ವಾಸ ಸಮುದಾಯಕ್ಕಿದೆ ಎಂದು ಹರ್ಷ ವ್ಯಕ್ತ ಪಡಿಸಿದ್ದಾರೆ.

- **ಹರ್ಷ ವ್ಯಕ್ತ ಪಡಿಸಿದ ಮಠಾಧೀಶರು.**

ಮೆಹಕರ್ ಕಟ್ಟಿಮನಿ ಹಿರೇಮಠ್ ಸಂಸ್ಥಾನದ ಶ್ರೀ ರಾಜೇಶ್ವರ ಶಿವಾಚ್ಯಾರರು, ಖಟಕ ಚಿಂಚೋಳಿ ಹುಗ್ಗೆಳ್ಳಿ ಹಿರೇಮಠದ ಶ್ರೀ ಬಸವಲಿಂಗ ಮಹಾಸ್ವಾಮಿಗಳು, ಹಲಬಾರ್ಗದ ಶ್ರೀ ಹಾವಗಿಲಿಂಗೇಶ್ವರ ಶಿವಾಚಾರ್ಯರು, ಹಳ್ಳಿಖೇಡ ಚಿಕ್ಕಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ, ಲಾಡಗೇರಿಯ ಶ್ರೀ ಗಂಗಾಧರ ಸ್ವಾಮೀಜಿ ಸೇರಿದಂತೆ ಜಿಲ್ಲೆಯ ಪ್ರತಿಷ್ಠಿತ ಸ್ವಾಮೀಜಿಗಳು ಅಭಿನಂದನೆ ಸಲ್ಲಿಸಿ ಹರ್ಷ ವ್ಯಕ್ತ ಪಡಿಸಿದ್ದಾರೆ.

- **ಅಭಿನಂದಿಸಿದ ಗಣ್ಯರು**

ಅಖಿಲ ಭಾರತ ವೀರಶೈವ ಮಹಾಸಭಾದ ತಾಲೂಕು ಅಧ್ಯಕ್ಷ ಮಲ್ಲಿಕಾರ್ಜುನ್ ಹಲಮಂಡಗೆ, ಚಂದ್ರಶೇಖರ ವ0ಕೆ, ಅಶೋಕ ಕುಂಬಾರ, ರಾಜೆಪ್ಪ ಪಾಟೀಲ್, ಚಂದ್ರಶೇಖರ್ ಬನ್ನಾಲೆ, ಭಗವಾನ್ ವಲಾಂಡೆ, ನಾಗಭೂಷಣ್ ಮಾಮಡಿ, ಸೋಮನಾಥ ಮುದ್ದ, ಷಡಕ್ಷರಿ ಸ್ವಾಮಿ, ಶರಣಪ್ಪ ರಾಚೋಟೆ ಸೇರಿದಂತೆ ಹಲವರು ಹರ್ಷ ವ್ಯಕ್ತ ಪಡಿಸಿದ್ದಾರೆ.

# ಮಹಾನ್ ಜನಕವಿ ಮಹಾಯೋಗಿ ವೇಮನ್ ಜಯಂತಿ ಆಚರಣೆ



• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**

ಜಿಲ್ಲೆಯ ಕುಕನೂರು ಪಟ್ಟಣದ ತಾಲೂಕ ಪಂಚಾಯತಿ ಕಚೇರಿಯಲ್ಲಿ ಮಹಾನ್ ತತ್ವಜ್ಞಾನಿ, ಸಮಾಜ ಸುಧಾರಕ ಹಾಗೂ ಜನಕವಿ ವೇಮನ್ ಅವರ ಜಯಂತಿಯನ್ನು ಸರಳ ಹಾಗೂ ಅರ್ಥಪೂರ್ಣವಾಗಿ ಸೋಮವಾರ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ತಾ.ಪಂ. ಅಕೌಂಟ್ ಅಧಿಕಾರಿ ಸದ್ದಾಮ್ ಹುಸೇನ್ ಅವರು, ವೇಮನ್ ಕೇವಲ ಕವಿ ಮಾತ್ರವಲ್ಲ; ಅಂಧಶ್ರದ್ಧೆ,ಜಾತಿಭೇದ,ಮೂಢನಂಬಿಕೆ ಹಾಗೂ ಅನ್ಯಾಯಗಳ ವಿರುದ್ಧ ಧೈರ್ಯವಾಗಿ ಪ್ರಶ್ನೆ ಎತ್ತಿದ ಮಹಾನ್ ಚಿಂತಕರಾಗಿದ್ದರು ಎಂದು ಹೇಳಿದರು.

ಸಮಾಜದಲ್ಲಿ ಎಲ್ಲರೂ ಸಮಾನರು ಎಂಬ ಸಂದೇಶವನ್ನು ಅವರು ತಮ್ಮ ಸರಳ ಹಾಗೂ ಪರಿಣಾಮಕಾರಿ ವಚನಗಳ ಮೂಲಕ ಜನಸಾಮಾನ್ಯರಿಗೆ ತಲುಪಿಸಿದ್ದಾರೆಂದು ಸ್ಮರಿಸಿದರು.

ವೇಮನ್ ಬದುಕಿದ್ದ ಕಾಲದಲ್ಲಿ ಶಿಕ್ಷಣ ಕೆಲವರಿಗೆ ಮಾತ್ರ ಸೀಮಿತವಾಗಿದ್ದ ಸಂದರ್ಭದಲ್ಲಿ, ಜನಪದ ಭಾಷೆಯಲ್ಲಿ "ಜ್ಞಾನವೇ ನಿಜವಾದ ಆಸ್ತಿ", "ಮಾನವನು ಮಾನವನಂತೆ ಬದುಕಬೇಕು" ಎಂಬ ಮೌಲ್ಯಗಳನ್ನು ಸಮಾಜಕ್ಕೆ ನೀಡಿದವರು ಅವರು. ಅವರ ವಚನಗಳು ಇಂದಿಗೂ ಅಂಧವಾಗಿ ನಂಬದೇ ವಿವೇಕದಿಂದ ಯೋಚಿಸಲು, ಜಾತಿ ಧರ್ಮ ಹಣದ ಆಧಾರದಲ್ಲಿ ಯಾರನ್ನೂ ಅಳೆಯದೆ ಎಲ್ಲರನ್ನೂ ಮಾನವನಾಗಿ ಗೌರವಿಸಲು ಪ್ರೇರೇಪಿಸುತ್ತವೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ತಾಲೂಕ ಪಂಚಾಯತಿ ಸಿಬ್ಬಂದಿಗಳಾದ ಯಲ್ಲಪ್ಪ ನಿಡಶೇಸಿ, ನರೇಗಾ ಸಿಬ್ಬಂದಿಗಳಾದ ಲಕ್ಷ್ಮಣ ಕೆರಳ್ಳಿ, ಸುರೇಶ್ ದೇಸಾಯಿ, ಎನ್‌ಆರ್‌ಎಲ್‌ಎಂ ಸಿಬ್ಬಂದಿ ಸುಧಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಅಂಗನವಾಡಿ ಅವ್ಯವಸ್ಥೆ ಸರಿಪಡಿಸುವಂತೆ ತಹಸಿಲ್ದಾರಗೆ ಮನವಿ



• **ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ:**

ಪಟ್ಟಣದ ವಾರ್ಡ್ ನಂಬರ್ 19ರ ಭೋವಿ ವಡ್ಡರ ಓಣಿಯಲ್ಲಿ ಬರುವ ಅಂಗನವಾಡಿ ಕೇಂದ್ರದ ಅವ್ಯವಸ್ಥೆಗೆ ಕಾರಣೀಭೂತರಾದ ಅಂಗನವಾಡಿ ಕೇಂದ್ರದ ಕಾರ್ಯಕರ್ತರು, ಸಹಾಯಕರು ಹಾಗೂ ಸಂಬಂಧಿಸಿದ ಅಧಿಕಾರಿಗಳನ್ನು ವಜಾಗೊಳಿಸಿ ಅವರ ಮೇಲೆ ಕಠಿಣ ಕ್ರಮ ಜರುಗಿಸಬೇಕೆಂದು ಆಗ್ರಹಿಸಿ ಪಟ್ಟಣದ ಅಂಬೇಡ್ಕರ್ ಸೇನೆ ತಾಲೂಕ ಘಟಕ ಹಾಗೂ ಬಾಬು ಜಗಜೀವನ ರಾಮ್ ಮಹಿಳಾ ಸ್ವಸಹಾಯ ಸಂಘದ ಪದಾಧಿಕಾರಿಗಳು ಇಲಾಖೆಯ ಅತ್ತಾರ ಮುನ್ನಾ ಮೂಲಕ ತಹಸಿಲ್ದಾರ್ ಗೆ ಮಂಗಳವಾರ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಅಂಬೇಡ್ಕರ್ ಸೇನೆ ಜಿಲ್ಲಾ ಉಪಾಧ್ಯಕ್ಷ ಬಸ್ಸು ಮಾದರ ಹಾಗೂ ತಾಲೂಕ ಅಧ್ಯಕ್ಷ ಗೋಪಾಲ ಕಟ್ಟಿಮನಿ ಮಾತನಾಡಿ ಸದರಿ ಅಂಗನವಾಡಿ ಕೇಂದ್ರ ಅವ್ಯವಸ್ಥೆಯ ಆಗರ ವಾಗಿದ್ದು, ಕಳೆದ 7 ತಿಂಗಳುಗಳಿಂದ ಕೇಂದ್ರ-ಕ್ಕೆ ಬರುವ ದವಸ ದಾನ್ಯಗಳನ್ನು ಮಕ್ಕಳಿಗೆ ಹಾಗೂ ಬಾಣಂತಿಯರಿಗೆ ಪೂರೈಸಿರುವುದಿಲ್ಲ, ಮಕ್ಕಳಿಗೆ ಪಾಠ ಹೇಳಿಕೊಡಲು ಒಬ್ಬ ಶಿಕ್ಷಕರೂ ಕೂಡಾ ಇಲ್ಲ. ಆಹಾರ ವಸ್ತುಗಳ ದಾಸ್ತಾನು ಮಾಡುವ ಕೋಣೆ ಇಲಿ ಹೆಗ್ಗಣಗಳ ತಾಣವಾಗಿದೆ,

ಯಾವುದೇ ರೀತಿಯ ಸ್ವಚ್ಛತೆ ಕೈಗೊಂಡಿಲ್ಲ ಈ ಎಲ್ಲ ದುರಾವಸ್ಥೆ ಕುರಿತು ಈಗಾಗಲೇ ಇಲಾಖೆಯ ಸಿಡಿಪಿಓ ಹಾಗೂ ಸೂಪರ್ವೈಸರ್ ಗೆ ಈ ಮೊದಲು ತಿಳಿಸಿದ್ದು ಅವರು ಭೇಟಿ ನೀಡಿ ಪರಿಶೀಲನೆ ಕೂಡಾ ನಡೆಸಿದ್ದಾರೆ ಆದರೆ ಇಲ್ಲಿವರೆಗೆ ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಿಲ್ಲ, ನಾವು ಈಗ ಮತ್ತೇ ತಹಸಿಲ್ದಾರ್ ಅವರಿಗೆ ಮನವಿ ಮೂಲಕ ಆಗ್ರಹಿಸುತಿದ್ದೇವೆ ಬೇಜವಾಬ್ದಾರಿ ತೋರಿದ ಎಲ್ಲರನ್ನು ಈ ಕೂಡಲೇ ಸೇವೆಯಿಂದ ವಜಗೊಳಿಸಬೇಕು ಹೀಗೆ ಮಾಡದೆ ಹೋದರೆ ಮುಂದಿನ ದಿನಗಳಲ್ಲಿ ಉಗ್ರವಾದ ಹೋರಾಟ ನಡೆಸುವುದು ಅನಿವಾರ್ಯವಾಗುತ್ತದೆ ಎಂದರು. ಈ ಸಮಯದಲ್ಲಿ ಅಂಬೇಡ್ಕರ್ ಸೇನೆ ತಾಲೂಕ ಘಟಕದ ಪದಾಧಿಕಾರಿಗಳಾದ ಭೀಮಸಿ ಕಾರಕೂರ ಪ್ರಜ್ವಲ್ ಕಟ್ಟಿಮನಿ, ಕಾಶಿನಾಥ್ ಮಾದರ, ಭೀಮಾಶಂಕರ ಸೋನಾನೆ, ಸಾಹೇಬಣ್ಣ ಧವಳಗಿ, ಭಾಗ್ಯಶ್ರೀ ಹೊಟಗಾರ,ಭಾರತಿ ಸೋನಾನೆ, ಹುಸೇನ್ ಜಕಾತಿ ಹಾಗೂ ವೃಂದಾ ಬ್ಯಾಕೋಡ್ ಇದ್ದರು.

# ಮಹಾರಾಣಾ ಪ್ರತಾಪರ ತ್ಯಾಗ ಸದಾ ಸ್ಮರಣೀಯ: ವಿಜಯಸಿಂಗ್



• **ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ:**

ಮಹಾರಾಣಾ ಪ್ರತಾಪ್ ಸಿಂಹ ಅವರು ಮಾತೃಭೂಮಿಯ ರಕ್ಷಣೆಗಾಗಿ ತನ್ನ ಸರ್ವವನ್ನೂ ತ್ಯಾಗ ಮಾಡಿದ ಮಹಾನ್ ನಾಯಕ,ಅವರ ದೇಶಪ್ರೇಮ ಹಾಗೂ ತ್ಯಾಗದ ಜೀವನ ನಮಗೆಲ್ಲರಿಗೂ ಮಾದರಿಯಾಗಿದೆ ಎಂದು ಯುವ ಮುಖಂಡ ವಿಜಯಸಿಂಗ್ ಹಜೇರಿ ಹೇಳಿದರು. ಸೋಮವಾರ ಪಟ್ಟಣದ ಮಹಾರಾಣಾ ಪ್ರತಾಪ್ ಸಿಂಹ ವೃತ್ತದಲ್ಲಿ ರಾಣಾ ಪ್ರತಾಪರ ಹುತಾತ್ಮ ಸ್ಮರಣಾರ್ಥ ರಜಪೂತ ಸಮಾಜದ ವತಿಯಿಂದ ಹಮ್ಮಿಕೊಂಡಿದ್ದ ಜ್ಯೋತಿ ಬೆಳಗಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತದ ಇತಿಹಾಸದಲ್ಲಿ ಮಹಾರಾಣಾ ಪ್ರತಾಪ ರಂಥಹ ಶೌರ್ಯ ಹಾಗೂ ಪರಾಕ್ರಮದ ಬೇರೊಬ್ಬ ಅರಸ ನಮಗೆ ಸಿಗುವುದಿಲ್ಲ. ಅವರ ಸ್ವಾಭಿಮಾನದ ಬದುಕು ಭಾರತೀಯರ ಪಾಲಿಗೆ ಸ್ಫೂರ್ತಿಯಾಗಿದೆ ಎಂದರು.ರಾಜು ರಜಪೂತ ಮಹಾರಾಣಾ ಪ್ರತಾಪ ಸಿಂಹ ಅವರ ಜೀವನ ಕುರಿತು ಪ್ರಸ್ತಾವಿಕವಾಗಿ ಮಾತನಾಡಿದರು.ಈ ಸಮಯದಲ್ಲಿ ರಜಪೂತ ಸಮಾಜದ ಅಧ್ಯಕ್ಷ ಹರಿಸಿಂಗ್ ಮೂಲಿಮನಿ,ಉಪಾಧ್ಯಕ ರತನಸಿಂಗ್ ಕೊಕಟನೂರ, ಮಾನಸಿಂಗ್ ಕೊಕಟನೂರ,ನಿವೃತ್ತ ಯೋಧ ಶ್ರೀಪಾಲ್ ಸಂಗಮಿ,ಜಿ.ಜಿ.ಮದರಕಲ್ಲ,ಎಂ.ಕೆ. ಪಟ್ಟಣಶೆಟ್ಟಿ, ಭರತಸಿಂಗ್ ವಿಜಾಪುರ, ಮುದುಕಪ್ಪ ಬಡಿಗೇರ, ರಾಘು ಚೌಹಾಣ, ಗೋವಿಂದಸಿಂಗ್ ಗೌಡಗೇರಿ, ಸುರೇಶ್ ಹಜೇರಿ, ಬಾಲಾಜಿಸಿಂಗ್ ವಿಜಾಪುರ, ಗೋವಿಂದಸಿಂಗ್ ಮೂಲಿಮನಿ, ದಿಲೀಪ ಹಜೇರಿ,ವಿಠ್ಠಲ್ ಹಜೇರಿ, ಪ್ರಹ್ಲಾದ್ ಹಜೇರಿ, ಕೇಸರಸಿಂಗ್ ದೇವಿ, ಪಿಂಟು ಹಜೇರಿ, ಸೂರಜ ಹಜೇರಿ, ಆನಂದ ಹಜೇರಿ, ಬಾಲಾಜಿ ಬಾಯ್ಸ್ ಇದ್ದರು.

# ಜಿಲ್ಲಾಧಿಕಾರಿಗೆ ಉತ್ತಮ ಜಿಲ್ಲಾ ಚುನಾವಣಾಧಿಕಾರಿ ಪ್ರಶಸ್ತಿ



• **ಮಲ್ಲಮ್ಮನುಡಿ ವಾರ್ತೆ ಕೊಪ್ಪಳ :**

2025-26ನೇ ಸಾಲಿನಲ್ಲಿ ಆಚರಿಸಲಿರುವ 16ನೇ ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಜನವರಿ 19 ರಂದು ಭಾರತ ಚುನಾವಣಾ ಆಯೋಗದಿಂದ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದ್ದು, ಕೊಪ್ಪಳ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಇವರಿಗೆ ಉತ್ತಮ ಜಿಲ್ಲಾ ಚುನಾವಣಾಧಿಕಾರಿ ಪ್ರಶಸ್ತಿಯನ್ನು ನೀಡಲಾಗಿದೆ.

ಭಾರತ ಚುನಾವಣಾ ಆಯೋಗದಿಂದ ಪ್ರತಿ ವರ್ಷ ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಚುನಾವಣಾ ಕಾರ್ಯಗಳಲ್ಲಿ ಹಾಗೂ ಮತದಾರರ ಪಟ್ಟಿಗಳ ಪರಿಷ್ಕರಣಾ ಕಾರ್ಯಗಳಲ್ಲಿ ಉತ್ತಮ ಕೆಲಸ ನಿರ್ವಹಿಸಿದ ಜಿಲ್ಲಾ ಚುನಾವಣಾಧಿಕಾರಿಗಳಿಗೆ, ಅಪರ ಜಿಲ್ಲಾ ಚುನಾವಣಾಧಿಕಾರಿಗಳಿಗೆ, ಮತದಾರರ ನೋಂದಣಾಧಿಕಾರಿಗಳಿಗೆ, ಸಹಾಯಕ ಮತದಾರರ ನೋಂದಣಾಧಿಕಾರಿಗಳಿಗೆ, ಬಿಎಲ್‌ಓ ಮೇಲ್ವಿಚಾರಕರಿಗೆ ಮತ್ತು ಬೂತ್ ಮಟ್ಟದ ಅಧಿಕಾರಿಗಳಿಗೆ ಪ್ರಶಸ್ತಿಯನ್ನು ನೀಡಲಾಗುತ್ತದೆ.

ಇದರೊಂದಿಗೆ 64-ಕೊಪ್ಪಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮತಗಟ್ಟೆ ಸಂಖ್ಯೆ:208 ರ ಬೂತ್ ಮಟ್ಟದ ಅಧಿಕಾರಿಯಾದ ಹಿರೇಬಗನಾಳ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹಾಯಕ ಶಿಕ್ಷಕರಾದ ಸತೀಶಚಂದ್ರ ಇವರಿಗೆ ಉತ್ತಮ ಬೂತ್ ಮಟ್ಟದ ಅಧಿಕಾರಿ ಪ್ರಶಸ್ತಿಯನ್ನು ನೀಡಲಾಗಿದೆ.

ಪ್ರಶಸ್ತಿಗೆ ಆಯ್ಕೆಯಾದ ಅಧಿಕಾರಿ, ಸಿಬ್ಬಂದಿಗಳಿಗೆ ಜನವರಿ 25 ರಂದು ಬೆಂಗಳೂರಿನ ಶ್ರೀ ಪುಟ್ಟಣ್ಣಚೆಟ್ಟಿ ಟೌನ್‌ಹಾಲ್‌ನಲ್ಲಿ ನಡೆಯಲಿರುವ 16ನೇ ರಾಷ್ಟ್ರೀಯ ಮತದಾರರ ದಿನಾಚರಣೆ ಸಂದರ್ಭದಲ್ಲಿ ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರು ಪ್ರಶಸ್ತಿ ಪ್ರದಾನ ಮಾಡುವರು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

# ಕುಣಿಕೇರಿಯಲ್ಲಿ ಮೇವಿನ ಬಣವೆಗೆ ಬೆಂಕಿ: ಲಕ್ಷಾಂತರ ರೂಪಾಯಿ ನಷ್ಟ



• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**

ತಾಲ್ಲೂಕಿನ ಕುಣಿಕೇರಿ ಗ್ರಾಮದಲ್ಲಿ ಸೋಮವಾರ ಬೆಳಗ್ಗೆ ಸುಮಾರು 10 ಗಂಟೆ ಸುಮಾರಿಗೆ ರುದ್ರಪ್ಪ ಏಣಿಗಿ ಹಾಗೂ ಬೆಟ್ಟದಪ್ಪ ಮೂಲಿಮನಿ ಅವರಿಗೆ ಸೇರಿದ ಜಾನುವಾರುಗಳ ಮೇವಿನ ಬಣವೆಗೆ ಆಕಸ್ಮಿಕವಾಗಿ ಬೆಂಕಿ ಬಿದ್ದ ಘಟನೆ ಸಂಭವಿಸಿದೆ.

ಪರಿಣಾಮವಾಗಿ ಲಕ್ಷಾಂತರ ರೂಪಾಯಿ ಮೌಲ್ಯದ ಲೋಡ್ ಜೋಳದ ಹುಲ್ಲು ಹಾಗೂ ಕಡಲೆ ಒಟ್ಟಿನ ಬಣವೆ ಸಂಪೂರ್ಣವಾಗಿ ಬೆಂಕಿಗೆ ಆಹುತಿಯಾಗಿದೆ.

ಗ್ರಾಮದ ಬಂಡಿಯ ಮೇಲೆ ಸಂಗ್ರಹಿಸಿದ್ದ ಮೇವಿನ ಬಣವೆಗೆ ಆಕಸ್ಮಿಕವಾಗಿ ಬೆಂಕಿ ಬಿದ್ದ ಕಾರಣ ಈ ಅವಘಡ ನಡೆದಿದೆ ಎಂದು ತಿಳಿದುಬಂದಿದೆ.

ಮಾಹಿತಿ ಪಡೆದ ಗ್ರಾಮ ಲೆಕ್ಕಾಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದ್ದು, ರೈತರಿಗೆ ಸರ್ಕಾರದ ನಿಯಮಾನುಸಾರ ಸೂಕ್ತ ಪರಿಹಾರ ಒದಗಿಸಲಾಗುವುದು ಎಂದು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಕುಣಿಕೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ನಿರ್ದೇಶಕ ಶಿವಕುಮಾರ ಏಣಿಗಿ, "ಬೆಂಕಿ ಅವಘಡಕ್ಕೆ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ. ಈ ಘಟನೆಯಿಂದ ಮಾನಸಿಕ ಹಾಗೂ ಆರ್ಥಿಕವಾಗಿ ಕುಂದಿರುವ ರೈತರಿಗೆ ಸರ್ಕಾರವು ತಕ್ಷಣ ಸೂಕ್ತ ಪರಿಹಾರ ಕಲ್ಪಿಸಬೇಕು" ಎಂದು ಒತ್ತಾಯಿಸಿದರು.

# ಖರೀದಿ ಕೇಂದ್ರ ಉದ್ಘಾಟನೆ



• **ಮಲ್ಲಮ್ಮ ನುಡಿ ವಾರ್ತೆ ಮುದಗಲ್ :**

ಎಪಿಎಂಸಿಯಲ್ಲಿ ಆಮದಿಹಾಳ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ತೊಗರಿ ಖರೀದಿ ಕೇಂದ್ರ ಸೋಮವಾರ ಆರಂಭವಾಗಿದೆ.2025-26ನೇ ಸಾಲಿನ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಆರಂಭವಾಗಿವೆ, ಪ್ರತಿ ಕ್ವಿಂಟಲ್ ಗೆ 8,000 ಬೆಂಬಲ ಬೆಲೆಯಲ್ಲಿ ತೊಗರಿ ಖರೀದಿಸುತ್ತಿವೆ, ರೈತರು ಆಧಾರ್ ಕಾರ್ಡ್ ಮತ್ತು ಬಯೋಮೆಟ್ರಿಕ್ ಮೂಲಕ ಹೆಸರು ನೊಂದಾಯಿಸಿ ಮಾರಾಟ ಮಾಡಿ ಯೋಜನೆಯ ಸದುಪಯೋಗಪ ಪಡೆದುಕೊಳ್ಳಬೇಕು ಮತ್ತು ಮಾರಾಟ ಮಾಡಿದ ರೈತರಿಗೆ ನೇರವಾಗಿ ರೈತರ ಖಾತೆಗೆ ತೊಗರಿ ಖರೀದಿಯ ಹಣವನ್ನು ಸರ್ಕಾರವು ಪಾವತಿಸುತ್ತಿದೆ.ಎಲ್ಲಾ ರೈತರು ಸರ್ಕಾರದ ಯೋಜನೆಗಳ ಸದುಪಯೋಗಪಡಿಸಿಕೊಳ್ಳಬೇಕು ಎಂದು ವಿ ಎಸ್ ಎಸ್ ಎನ್ ಅಧ್ಯಕ್ಷ ಹನುಮಂತ ತುರುಮರಿ ಹೇಳಿದರು.

ವಿ ಎಸ್ ಎಸ್ ಎನ್ ಉಪಾಧ್ಯಕ್ಷ.ಶರಣಪ್ಪ ತುಂಬದ್, ಕೇಶವರೆಡ್ಡಿ ಯರದಿಹಾಳ,ಯಂಕಪ್ಪ ಪೂಜಾರಿ, ಶರಣಪ್ಪ ಕಾರಲಕುಂಟಿ ಸೇರಿದಂತೆ ಇನ್ನಿತರ ಇದ್ದರು.

# ವೀರ ಲೋಕ್ ಪುಸ್ತಕ್ ಸಂತೆ ಬೀದರನಲ್ಲಿ



• **ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ:**

ಇದೇ ದಿನಾಂಕ ಜ. 24 ರಿಂದ 26. ರವರೆಗೆ ಬೀದರ ನಗರದಲ್ಲಿ ನಡೆಯಲಿರುವ ವೀರ ಲೋಕ್ ಪುಸ್ತಕ್ ಸಂತೆ ಜರುಗಲಿದ್ದು ಜಿಲ್ಲೆಯ ಪುಸ್ತಕ ಪ್ರಿಯರು ಅಭಿಮಾನಿಗಳು ಹೆಚ್ಚಿನ ಸಂಖ್ಯೆ ಯಲ್ಲಿ ಭಾಗವಹಿಸಬೇಕೆಂದು ತಾಲೂಕಿನ ಕೊಹಿನೂರ ಗ್ರಾಮದ ಯುವ ಮುಖಂಡರಾದ ರತಿ ಕಾಂತ ಜಮಾದಾರ ತಿಳಿಸಿದ್ದಾರೆ. ನಗರದ ನೆಹರು ಸ್ಟೇಡಿಯಮ್ ಸಮೀಪದ ಸಾಯಿ ಸ್ಕೂಲ್ ಆವರಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಭಾಲ್ಕಿ ಹಿರೇಮಠ ಸಂಸ್ಥಾನ ಸಹಯೋಗದಲ್ಲಿ 3 ದಿನಗಳ ಕಾಲ್ ರಾಜ್ ಮಟ್ಟದ ಪುಸ್ತಕ ಸಂತೆ ಆಯೋಜಿಸಲಾಗಿದೆ. ಎಲ್ಲರೂ ಭಾಗವಹಿಸಬೇಕು ಎಂದು ಮನವಿ ಮಾಡಿದ್ದಾರೆ. ಅಲ್ಲದೆ ಪುಸ್ತಕ ಸಂತೆಗೆ ಬಂದು ಪುಸ್ತಕ ಖರೀದಿಸಿ ಅಕ್ಷರ ಸಂಸ್ಕೃತಿ ಬೆಳೆಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾನವ ಸಮಾಜಕ್ಕೆ ಮಹಾಯೋಗಿ ವೇಮನರ ಕೊಡುಗೆ ಅಪಾರ :ಮ್ಯಾಳಿ



• **ಮಲ್ಲಮ್ಮ ನುಡಿ ವಾರ್ತೆ ಕುಕನೂರ:**

ಮಹಾಯೋಗಿ ವೇಮನ ತಮ್ಮ ಪದ್ಯಗಳ ಮೂಲಕ ಮನುಕುಲದ ಉನ್ನತಿಗೆ ಸನ್ಮಾರ್ಗದ ಉಪದೇಶ ನೀಡಿದ್ದಾರೆ ಎಂದು ಇಟಗಿಯ ಆದರ್ಶ ವಿದ್ಯಾಲಯದ ಶಿಕ್ಷಕ ವಿರೂಪಾಕ್ಷಪ್ಪ ಮ್ಯಾಳಿ ಹೇಳಿದರು.

ತಾಲೂಕಿನ ಇಟಗಿ ಗ್ರಾಮದ ಸರಕಾರಿ ಆದರ್ಶ ವಿದ್ಯಾಲಯದಲ್ಲಿ ಸೋಮವಾರ ಮಹಾಯೋಗಿ ವೇಮನ ಜಂಯಂತಿ ಆಚರಣೆಯನ್ನು ಮಾಡಿ ಮಾತನಾಡಿದ,ಹುಟ್ಟಿನಿಂದ ಎಲ್ಲರೂ ಸಮಾನರು ಎಂಬ ಸತ್ಯವನ್ನು ತಿಳಿದವರು ಸರ್ವಶ್ರೇಷ್ಠನೆಂಬ ಉನ್ನತ ಚಿಂತನೆ ವೇಮನರು ಹೊಂದಿದ್ದರು. ತ್ರಿಪದಿಗಳ ಮೂಲಕ ಜನಪ್ರಿಯರಾದ ಸರ್ವಜ್ಞರಂತೆ ಮಹಾಯೋಗಿ ವೇಮನರು ತೆಲುಗಿನಲ್ಲಿ ಪದ್ಯ ರಚಿಸಿದರು. ಅವರ ಸಮಾಜದ ಕಾಳಜಿ ಸಮಾಜದ ಬಗ್ಗೆ ಇರುವ ಚಿಂತನೆಗಳು ಬಹಳ ವಿಶೇಷವಾಗಿದ್ದವು, ಮಾನವ ಸಮಾಜಕ್ಕೆ ವೇಮನವರ ಕೊಡುಗೆ ಅಪಾರವಾಗಿದೆ, ಅವರ ಜಯಂತಿ ಆಚರಣೆ ಮಾಡುವ ಮೂಲಕ ಅವರ ತತ್ವ, ಜ್ಞಾನ, ಸಮಾನತೆ ಮತ್ತು ಸಾಮಾಜಿಕ ಸುಧಾರಣೆಯ ಸಂದೇಶಗಳನ್ನು ಸಾರಲಾಗುತ್ತದೆ, ಅವರ ಪದ್ಯಗಳನ್ನು ಸರಳ ಭಾಷೆಯಲ್ಲಿ ಜನರಿಗೆ ತಲುಪಿಸಲಾಗುತ್ತದೆ. ಕನ್ನಡಕ್ಕೆ ಸರ್ವಜ್ಞ,ತಮಿಳಿಗೆ ತಿರುವಳ್ವರ್‌ರಂತೆ ತೆಲುಗು ಭಾಷೆಗೆ ವೇಮನರೇ ಮಹಾಕವಿ ಎಂಬುದು ಇಂದಿಗೂ ಜನಜನಿತವಾಗಿದೆ ಎಂದರು.

ಈ ಸಂದರ್ಭದಲ್ಲಿ ಪ್ರಾಚಾರ್ಯರಾದ ರಾಮರಡ್ಡೆಪ್ಪ ಹಾಲಕೇರಿ, ಶಿಕ್ಷಕರಾದ ಜಯಪ್ಪ ಕನಕಮ್ಮನವರ್, ಜಗದೀಶ ಅಜ್ಜಣ್ಣನವರ್ ,ರಂಗಪ್ಪ,ಓಲೇಕಾರ್ ,ಶರಣಪ್ಪ ಬೊಮ್ಮಲೇಕರ್ , ರೋಹಿಣಿ, ಸಂತೋಷ್ ಕುಮಾರಿ , ಮಹೇಶ್ ರಾಮದುರ್ಗ, ಶ್ವೇತ ಹಳ್ಳಿ, ಶ್ರೀದೇವಿ ಬೆಳದಡಿ, ಮುರಾರಿ ಭಜಂತ್ರಿ,ರಮೇಶ್ ಕೆಟಿ, ವಿಜಯಲಕ್ಷ್ಮಿ, ಶ್ವೇತ ಬನ್ನಿಕೊಪ್ಪ, ಮಯೂರ ತಳವಾರ, ರಹಿಮನ್, ಹಾಗೂ ಬಸವರಾಜ , ಶಾಲಾ ಸಿಬ್ಬಂದಿ ವರ್ಗ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇತ್ತರರು ಇದ್ದರು.

# ನೂತನ ತಹಸಿಲ್ದಾರ್ ಬನ್ನಿ ಶಿರೋರ್ ಗೆ ಸನ್ಮಾನಿಸಿ ಸ್ವಾಗತಿಸಿದ ಪಡಿತರ ವಿತರಕರು



• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ :**

ಕುಕನೂರ ತಾಲೂಕ ನೂತನ ದಂಡಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿಕೊಂಡ ಬಸವರಾಜ ಬೆಣ್ಣೆ ಶಿರೂರು ಅವರಿಗೆ ತಾಲೂಕ ವಿತರಕರ ಸಂಘದ ವತಿಯಿಂದ ಸ್ವಾಗತಿಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲೂಕಿನ ದಂಡಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ ನೂತನ ತಹಸೀಲ್ದಾರ ಬಸವರಾಜ್ ಬೆಣ್ಣೆ ಶಿರೂರಗೆ ತಾಲೂಕ ಪಡಿತರ ವಿತರಕರಿಂದ ಕುಕನೂರು ತಾಲೂಕಿಗೆ ಸ್ವಾಗತ ಕೋರಿ ತಾಲೂಕಿನಲ್ಲಿ ಪಡಿತರ ಸಂಗ್ರಹಣ ನಿರ್ವಹಣೆಯನ್ನು ಯಲಬುರ್ಗಾ ತಾಲೂಕಿನವರೇ ನಿರ್ವಹಿಸುತ್ತಿದ್ದು ಇದರಿಂದ ಜನರಿಗೆ ಪಡಿತರ ತಲುಪಿಸುವುದು ವಿಳಂಬವಾಗುತ್ತಿದೆ ಆದ್ದರಿಂದ ಪ್ರತ್ಯೇಕ ಪಡಿತರ ಸಂಗ್ರಹಣ ಗೋಡೌನ್ ನಿರ್ವಹಣಾಕಾರರನ್ನು ನೇಮಿಸುವುದರೊಂದಿಗೆ ಪಡಿತರ ವಿಳಂಬವಾಗುವುದು ತಪ್ಪಿಸಬಹುದು ಎಂದು ಮನವಿ ಮಾಡಿದಾಗ ತಹಸೀಲ್ದಾರ ಬಸವರಾಜ ಬೆಣ್ಣೆಶಿರೂರ ಮಾತನಾಡುತ್ತಾ ನೂತನ ತಾಲೂಕ ಕೇಂದ್ರ ಆಡಳಿತ ಪ್ರಾರಂಭಿಸಿದಾಗ ಹಲವು ವರ್ಷಗಳ ಕಾಲ ಇಂತಹ ಸಮಸ್ಯೆ ಸಹಜವಾಗಿದ್ದು ಒಂದೊಂದಾಗಿ ಸಮಸ್ಯೆಯನ್ನು ಬಗೆಹರಿಸುವುದಾಗಿ ಜೊತೆಗೆ ತಾವೇನು ಹೊಸದಾಗಿ ತಾಲೂಕಿಗೆ ಆಗಮಿಸಿದ್ದು ಎಲ್ಲಾ ರೀತಿಯ ಸಮಸ್ಯೆಗಳನ್ನು ಈಡೇರಿಸಿ ಜನಪರ ಆಡಳಿತ ನೀಡಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು ಹಾಗೂ ಪಡಿತರ ಇತರಕರು ಯಾವುದೇ ಕಾರಣಕ್ಕೆ ಜನರಿಗೆ ತೊಂದರೆಯಾಗದಂತೆ ಕಾರ್ಯ ನಿರ್ವಹಿಸುವಂತೆ ಸಲಹೆ ನೀಡಿದರು.

ಈ ವೇಳೆಯಲ್ಲಿ ಪಡಿತರ ವಿತರಕರ ಸಂಘದ ಜಿಲ್ಲಾ ಉಪಾಧ್ಯಕ್ಷ ಷಣ್ಮುಖ ಗೌಡ ಸೋಂಪುರ, ತಾಲೂಕ ಅಧ್ಯಕ್ಷ ಲಿಂಗರಾಜ ಕಂದಗಲ್ಲ, ಉಪಾಧ್ಯಕ್ಷ ಕಲ್ಲಪ್ಪ ಚಿಕ್ಕೇನಕೊಪ್ಪ, ಪ್ರಮುಖರಾದ ಶಿವಬಸಯ್ಯ ಮುತ್ತಿನಪೆಂಡಿಮಠ, ವೀರಣ್ಣ ಅಂಟಿ, ಕುಬೇರಪ್ಪ, ಮಹೇಶ್ ಕಲ್ಮಠ, ಗುದ್ನೆಯ್ಯ ಗುದ್ನೆಪ್ಪನಮಠ, ನಾಗರತ್ನ ದಿವಟರ, ಅಕ್ಕಮ್ಮ ಶಾಸ್ತ್ರಿ, ನಾರಾಯಣಪ್ಪ ಜನಾದ್ರಿ, ಸಿದ್ದನಗೌಡ ಕದ್ರಳ್ಳಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

# ಶಾಲೆಯಲ್ಲಿ ಪ್ರವೇಶ ಆರಂಭ

ವಿಜಯನಗರ (ಹೊಸಪೇಟೆ) ನಗರದ ಶ್ರೀ ಚೈತನ್ಯ ಟೆಕ್ನೋ ಶಾಲೆ ಅವರಿಂದ ವಸಂತ ಪಂಚಮಿಯ ಶುಭಾಶಯಗಳು ಹಾಗೂ ಆರಂಭಿಕ ಪ್ರವೇಶದ ಮೇಲೆ ವಿಶೇಷ ರಿಯಾಯಿತಿಯನ್ನು ಪಡೆಯಿರಿ ಜನವರಿ 23 ರಂದು2026-27ನೇ ಸಾಲಿನ ಪ್ರವೇಶಾತಿ ಆರಂಭ ಸಂಪರ್ಕ ಸಂಖ್ಯೆ: 7022977452,7022640624ವಿಳಾಸ: ಶ್ರೀ ಚೈತನ್ಯ ಶಾಲೆ, ಹೋಟೆಲ್ ಹಂಪಿ ಇಂಟರ್ನ್ಯಾಷನಲ್ ಪಕ್ಕದಲ್ಲಿ, ರೈಲ್ವೆ ಸ್ಟೇಷನ್ ರಸ್ತೆ, ಹೊಸಪೇಟೆ

# ಯುವಕ ಕಾಣೆ; ಪತ್ತೆಗೆ ಮನವಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಕುಡತಿನಿ ಪೊಲೀಸ್ ಠಾಣೆ ವ್ಯಾಪ್ತಿಯ ಸಿದ್ದಮ್ಮನಹಳ್ಳಿ ಗ್ರಾಮದ ನಿವಾಸಿ ವೈ.ಜನಾರ್ಧನ ಎನ್ನುವ 23 ವರ್ಷದ ಯುವಕ 2025 ರ ಏಪ್ರಿಲ್ 09 ರಂದು ಕಾಣೆಯಾಗಿರುವ ಕುರಿತು ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕು ಎಂದು ಪೊಲೀಸ್ ಉಪನಿರೀಕ್ಷಕರು ಮನವಿ ಮಾಡಿದ್ದಾರೆ.ಯುವಕ, ಜಿಂದಾಲ್ ನಲ್ಲಿ ಸೂಪರ್ ವೈಸರ್ ಕೆಲಸ ಹಾಗೂ ಊರಲ್ಲಿ ಬೇಸಾಯ ಮಾಡಿಕೊಂಡು ಇರುತ್ತಾನೆ. ಬಳ್ಳಾರಿಯಲ್ಲಿ ಉದ್ಯೋಗ ಮೇಳ ನಡೆಯುತ್ತಿದೆ, ಬಳ್ಳಾರಿಗೆ ಹೋಗಿ ಬರುತ್ತೇನೆಂದು ಹೇಳಿ ಹೋದವನು ರಾತ್ರಿಯಾದರೂ ಮನೆಗೆ ಬಂದಿರುವುದಿಲ್ಲ ಎಂದು ಪೋಷಕರು ದೂರಿನಲ್ಲಿ ತಿಳಿಸಿದ್ದಾರೆ.ಯುವಕನ ಚಹರೆ ಗುರುತು:ಎತ್ತರ 5.9 ಅಡಿ, ಸಾಧಾರಣ ಮೈಕಟ್ಟು, ಕಪ್ಪು ಬಣ್ಣ, ಗಡ್ಡ ಬಿಟ್ಟಿರುತ್ತಾನೆ. ಕಾಣೆಯಾದ ಸಂದರ್ಭದಲ್ಲಿ ಗಿಳಿ ಬಣ್ಣದ ಶರ್ಟ್, ನೀಲಿ ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ.ಕಾಣೆಯಾದ ಯುವಕನ ಬಗ್ಗೆ ಸುಳಿವು ಸಿಕ್ಕಲ್ಲಿ ಕುಡತಿನಿ ಪೊಲೀಸ್ ಠಾಣೆ ಅಥವಾ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಬಹುದು ಎಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಹೊಲಿಗೆ : ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜಿಲ್ಲಾ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ವತಿಯಿಂದ 2024-25 ನೇ ಸಾಲಿನ ಜಿಲ್ಲಾ ಉದ್ಯಮ ಕೇಂದ್ರ ಆರ್.ಎ.ಪಿ ಯೋಜನೆಯಡಿ ಗ್ರಾಮೀಣ ಭಾಗದ ಮಹಿಳಾ ಅಭ್ಯರ್ಥಿಗಳಿಗೆ ಹೊಲಿಗೆ ತರಬೇತಿಗಾಗಿ ಸಾಮಾನ್ಯಯೋಜನೆಯಡಿ 26 ಹಾಗೂ ವಿಶೇಷ ಘಟಕ ಯೋಜನೆಯಡಿ (ಪರಿಶಿಷ್ಟ ಜಾತಿ) 04 ಸೇರಿ ಒಟ್ಟು 30 ಫಲಾನುಭವಿಗಳಿಗೆ ತರಬೇತಿ ನೀಡಲು ಉದ್ದೇಶಿಸಲಾಗಿದ್ದು, ಅರ್ಹರಿಂದ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ ವತಿಯಿಂದ 30 ದಿನಗಳ ಶಿಷ್ಯವೇತನ ರಹಿತ ಉಚಿತ ವಸತಿ ತರಬೇತಿ ನೀಡಲಾಗುತ್ತದೆ. ತರಬೇತಿ ಪಡೆದ ನಂತರ ಉಚಿತ ವಿದ್ಯುತ್ ಚಾಲಿತ ಹೊಲಿಗೆಯಂತ್ರ ನೀಡಲಾಗುತ್ತದೆ.

ತರಬೇತಿ ಪಡೆಯಲು ಆಸಕ್ತಯುಳ್ಳ ಮಹಿಳಾ ಅಭ್ಯರ್ಥಿಗಳು ಉಪನಿರ್ದೇಶಕರು(ಗ್ರಾ.ಕೈ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಪಂಚಾಯತ್, ಹೊಸಪೇಟೆ ರಸ್ತೆ, ಬಳ್ಳಾರಿ, ಕಚೇರಿಗೆ ಭೇಟಿ ನೀಡಿ ಅರ್ಜಿ ಪಡೆಯಬಹುದಾಗಿದೆ.

ಅರ್ಜಿ ಸಲ್ಲಿಸಲು ಜ.27 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂ.08392-242270 ಮತ್ತು ಕೈಗಾರಿಕಾ ವಿಸ್ತರಣಾಧಿಕಾರಿಗಳ ಮೊ.9035547140 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಉಪನಿರ್ದೇಶಕರು(ಗ್ರಾ.ಕೈ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಿಯಮಿತ ತಪಾಸಣೆ ಆರಂಭಿಕ ಚಿಕಿತ್ಸೆಯಿಂದ ಸ್ತನ ಕ್ಯಾನ್ಸರ್ ತಡೆಗಟ್ಟಬಹುದು

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ನಿಯಮಿತ ತಪಾಸಣೆ ಮತ್ತು ಆರಂಭಿಕ ಚಿಕಿತ್ಸೆಯಿಂದ ಸ್ತನ ಕ್ಯಾನ್ಸರ್ ಅನ್ನು ತಡೆಗಟ್ಟಬಹುದಾಗಿದೆ ಎಂದು ರಾಜ್ಯಸಭಾ ಸದಸ್ಯ ಡಾ.ಸೈಯದ್ ನಾಸೀರ್ ಹುಸೇನ್ ಅವರು ಹೇಳಿದರು.

ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಮಂಗಳವಾರ ಏರ್ಪಡಿಸಿದ್ದ 'ಸ್ವಸ್ಥ ಸೇತು' ಆರೋಗ್ಯ ಸೇತುವೆ ಯೋಜನೆಯಡಿ ಸ್ತನ ಕ್ಯಾನ್ಸರ್ ಜಾಗೃತಿ ಮತ್ತು ತಪಾಸಣೆಯ 2025–26 ನೇ ಸಾಲಿನ ವಾರ್ಷಿಕ ಮೌಲ್ಯಮಾಪನ ವರದಿಯ ಯೋಜನೆಯ ಹಸ್ತಾಂತರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಗ್ರಾಮೀಣ ಮತ್ತು ನಗರ ಸಮುದಾಯಗಳಲ್ಲಿನ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ನ್ನು ತಡವಾಗಿ ಪತ್ತೆಹಚ್ಚುವಿಕೆ ಹಾಗೂ ಇದರಿಂದಾಗುವ ಹಾನಿಯನ್ನು ತಡೆಗಟ್ಟಲು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೂಲಕ ಜಾಗೃತಿ ಹಾಗೂ ಆರಂಭಿಕ ತಪಾಸಣೆಗಾಗಿ ಹುಮನ ಪೀಪಲ್ ಟು ಪೀಪಲ್ ಇಂಡಿಂ–ಯಾ ಸಂಸ್ಥೆ ಮತ್ತು ಇಂಡಸ್ ಸೇತು ಸಂಸ್ಥೆ ವತಿಯಿಂದ ಬಳ್ಳಾರಿ ಜಿಲ್ಲೆಯಲ್ಲಿ 2025ರ ಫೆಬ್ರವರಿಯಿಂದ ಡಿಸೆಂಬರ್ ಅವಧಿಯಲ್ಲಿ 'ಸ್ವಸ್ಥ ಸೇತು – ಸ್ತನ ಕ್ಯಾನ್ಸರ್ ಜಾಗೃತಿ ಮತ್ತು ತಪಾಸಣೆ ಯೋಜನೆಯನ್ನು ಜಾರಿಗೆ ತರಲಾಯಿತು ಎಂದು



ಅವರು ತಿಳಿಸಿದರು.

ಈ ಯೋಜನೆಯಡಿ ಜಿಲ್ಲೆಯಲ್ಲಿ ಸುಮಾರು 537 ಆಶಾ ಕಾರ್ಯಕರ್ತೆಯರಿಗೆ ಸಮುದಾಯಗಳಲ್ಲಿ ತಪಾಸಣೆ ಕೈಗೊಳ್ಳುವ ಕುರಿತು ತರಬೇತಿ ನೀಡಲಾಗಿತ್ತು. ಅವರು ಗ್ರಾಮೀಣ ಪ್ರದೇಶಗಳಿಗೆ ತೆರಳಿ ಸುಮಾರು 1,50,000 ಮಹಿಳೆಯರನ್ನು ತಪಾಸಣೆಗೆ ಒಳಪಡಿಸಿದ್ದರು. ಅದರಲ್ಲಿ 1,20,204 ಮಹಿಳೆಯರು ಸ್ವಯಂ ಪರೀಕ್ಷೆ ಕೈಗೊಂಡಿ–ದ್ದರು. 42 ಮಹಿಳೆಯರು ಅನುಮಾನಾಸ್ಪದ ಲಕ್ಷಣಗಳೊಂದಿಗೆ ಗುರುತಿಸಲಾಗಿದೆ. ಇವರಲ್ಲಿ 35 ಮಹಿಳೆಯರಿಗೆ ಸ್ತನ ಕ್ಯಾನ್ಸರ್ ಇರುವುದು ದೃಢಪಟ್ಟಿದೆ. ಅದರಲ್ಲಿ 15 ಜನ ಮಹಿಳೆಯರಿಗೆ ಈಗಾಗಲೇ ಚಿಕಿತ್ಸೆ ನೀಡಲಾಗುತ್ತಿದೆ. ಉಳಿದ 20 ಜನ ಮಹಿಳೆಯರಿಗೂ ಚಿಕಿತ್ಸೆ ನೀಡಲಾಗುವುದು ಎಂದರು.

ದೃಢಪಟ್ಟ ಮಹಿಳೆಯರಿಗೆ ಆರಂಭಿಕವಾಗಿ ಜಿಲ್ಲಾ ಆಸ್ಪತ್ರೆ, ಬಿಎಂಸಿಆರ್ ಸಿ ಆಸ್ಪತ್ರೆಗಳಲ್ಲಿ ಆರಂಭಿಕ ಚಿಕಿತ್ಸೆ ನೀಡಲಾಗುತ್ತಿದೆ. ನಂತರ ಬೆಂಗಳೂರಿನ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಗೆ ಕಳುಹಿಸಿಕೊಡಲಾಗುವುದು ಮತ್ತು ಜಿಲ್ಲೆಗೆ ಹತ್ತಿರವಾಗುವ ಅಂತರ್ ರಾಜ್ಯದ ಹೈದ್ರಬಾದ್ ನಲ್ಲಿರುವ ಆಸ್ಪತ್ರೆಗೂ ಸಹ ಚಿಕಿತ್ಸೆಗೆ ಅನುಗುಣವಾಗಿ ಕಳುಹಿಕೊಡಲು ತೆಲಂಗಾಣದ ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಲಾಗುವುದು ಎಂದರು.

ಹಾಗಾಗಿ ಆಶಾಕಾರ್ಯಕರ್ತೆಯರು ಹೆಚ್ಚು–ಹೆಚ್ಚು ತಪಾಸಣೆ ಕಾರ್ಯ ಕೈಗೊಳ್ಳಬೇಕು. ರೋಗಿಗಳ ಚಿಕಿತ್ಸಾ ಖರ್ಚು–ವೆಚ್ಚುಗಳಿಗೆ ಸಂಬಂಧಿಸಿದಂತೆ ಅಗತ್ಯ ಸಹಕಾರ ನೀಡಲಾಗುವುದು. ಬಳ್ಳಾರಿ ಜಿಲ್ಲೆ ಮಾದರಿಯಲ್ಲಿ ಸ್ತನ ಕ್ಯಾನ್ಸರ್ ಜಾಗೃತಿ ಮತ್ತು ತಪಾಸಣೆ ಕಾರ್ಯವನ್ನು ಎಲ್ಲಾ ಜಿಲ್ಲೆಗಳಿಗೆ ಮತ್ತು ತಾಲ್ಲೂಕುಗಳಿಗೆ ವಿಸ್ತರಣೆಯ ಕುರಿತು ಮುಂಬರುವ ದಿನಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹಾಗೂ ಆರೋಗ್ಯ ಸಚಿವ ದಿನೇಶ್ ಗುಂಡುರಾವ್ ಅವರೊಂದಿಗೆ ಚರ್ಚಿಸಲಾಗುವುದು ಎಂದರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಮಾತನಾಡಿ, ಹೆಣ್ಣಿನಿಂದಲೇ ಒಂದು ಕುಟುಂಬ ನಿರ್ವಹಣೆ ಸಾಧ್ಯ. ಹೆಣ್ಣಿನ ಆರೋಗ್ಯ ನಮ್ಮ ಸರ್ಕಾರದ ಆದ್ಯತೆಯಾಗಿದೆ. ಕ್ಯಾನ್ಸರ್ ತಡೆ ಹಾಗೂ ಆರಂಭದ ಹಂತದಲ್ಲೇ ಕಾಯಿಲೆ ಪತ್ತೆ ಹಚ್ಚುವಿಕೆ ಕುರಿತಂತೆ ಅರಿವು ಹೆಚ್ಚಿಸುವುದು ಮುಖ್ಯವಾಗಿದ್ದು, ಆರಂಭದಲ್ಲೇ ಕಾಯಿಲೆ ಪತ್ತೆ ಹಚ್ಚುವ ವಿಧಾನಗಳ ಬಗ್ಗೆ ಅರಿವು ಮೂಡಿಸುವುದು ತುರ್ತು ಅಗತ್ಯವಾಗಿದೆ ಎಂದರು.

ವಾರ್ಷಿಕವಾರು ಸ್ತನ ಕ್ಯಾನ್ಸರ್ ಜಾಗೃತಿ ಮತ್ತು ತಪಾಸಣೆ ಕಾರ್ಯವು ನಮ್ಮ ಜಿಲ್ಲೆಯಲ್ಲಿ ನಡೆಯುತ್ತಿರುವುದು ಸುದೈವದ ಸಂಗತಿಯಾಗಿದ್ದು, ಈ ಯೋಜನೆಗೆ ಮಾತೃ ದೇವೋ ಭವ ಎಂದು ನಾಮಕರಣ ಮಾಡಬೇಕು ಎಂದು ಅಭಿಪ್ರಾಯಪಟ್ಟರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಮಾತನಾಡಿ, ಸ್ತನ ಕ್ಯಾನ್ಸರ್ ಜಾಗೃತಿ ಮತ್ತು ತಪಾಸಣೆ ಕಾರ್ಯವು ಜಿಲ್ಲೆಯ ಎರಡು ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಿದ್ದು, ಅದರಲ್ಲಿ 16 ಪ್ರಾಥಮಿಕ ಆರೋಗ್ಯ ಕೇಂದ್ರ, 3 ಸಮುದಾಯ ಆರೋಗ್ಯ ಮತ್ತು 5 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿದೆ. ಮುಂಬರುವ ದಿನಗಳಲ್ಲಿ ತಪಾಸಣಾ ಕಾರ್ಯವನ್ನು ಎಲ್ಲಾ ತಾಲ್ಲೂಕು ಮತ್ತು ಗ್ರಾಮಗಳಿಗೂ ವಿಸ್ತರಿಸಲಾಗುವುದು. ಮುಖ್ಯವಾಗಿ ತಪಾಸಣಾ ಕಾರ್ಯ ನಿರಂತರವಾಗಿರಬೇಕು. ಇದಕ್ಕೆ ಆಶಾಕಾರ್ಯಕರ್ತೆಯರು ಕೈಜೋಡಿಸಬೇಕು ಎಂದರು. ಸ್ತನ ಕ್ಯಾನ್ಸರ್ ಜಾಗೃತಿ ಮತ್ತು ತಪಾಸಣೆ ಕಾರ್ಯದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ವೈದ್ಯರು ಮತ್ತು ಆಶಾಕಾರ್ಯಕರ್ತೆಯರಿಗೆ ಕಾರ್ಯಕ್ರಮದಲ್ಲಿ ಅಭಿನಂದನಾ ಪ್ರಮಾಣ ಪತ್ರ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಮೇಯರ್ ಪಿ.ಗಾದೆಪ್ಪ, ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್.ಮಂಜುನಾಥ, ಬಿಎಂಸಿಆರ್ ಸಿ ನಿರ್ದೇಶಕ ಡಾ.ಗಂಗಾಧರ ಗೌಡ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಬಸರೆಡ್ಡಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ ವಿ.ಕೆ., ಜಿಲ್ಲಾ ಅಸಾಂಕ್ರಾಮಿಕ ರೋಗಗಳ ನಿಯಂತ್ರಣಾಧಿಕಾರಿ ಡಾ.ಕೆ.ಜಿ.ವೀರೇಂದ್ರ ಕುಮಾರ್, ನವದೆಹಲಿಯ ಎಚ್ ಪಿಪಿಐ ಆರೋಗ್ಯ ಕಾರ್ಯಕ್ರಮಗಳ ಸಂಯೋಜಕ ಸುಬ್ರತ್ ಮೊಹಂತಿ, ನ್ಯಾಷನಲ್ ಪ್ರೋಗ್ರಾಂ ಮ್ಯಾನೇಜರ್ ನತ್ತು ಸಿಂಗ್, ಏರೋಇನ್ಫ್ರಾಸ್ಟ್ರಾಟೆಜಿಕ್ಸ್ ಸಂಸ್ಥಾಪಕರು ಹಾಗೂ ವ್ಯವಸ್ಥಾಪಕ ಪಾಲುದಾರರಾದ ಮೆಹನಾಜ್ ಅನ್ಸಾರಿ ಸೇರಿದಂತೆ ಮಹಾನಗರ ಪಾಲಿಕೆ ಸದಸ್ಯರು, ಆಶಾಕಾರ್ಯಕರ್ತೆಯರು, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಸೌಲಭ್ಯ ಪಡೆದುಕೊಳ್ಳಿ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಸಣ್ಣ ಮತ್ತು ಅತಿ ಸಣ್ಣ ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೊಸ ಅವಕಾಶ ಬದಗಿಸುತ್ತಿದ್ದು, ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಅಥವಾ ಪಿಎಂಎಫ್ಎಂಇ ಯೋಜನೆಯ ಸೌಲಭ್ಯ ಪಡೆದುಕೊಳ್ಳಬೇಕು ಎಂದು ಜಂಟಿ ಕೃಷಿ ನಿರ್ದೇಶಕ ಸೋಮಸುಂದರ್ ಅವರು ತಿಳಿಸಿದ್ದಾರೆ.

ರಾಜ್ಯದಲ್ಲಿ ಸುಮಾರು 6,000 ಹೊಸ ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆ. ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ 15 ಲಕ್ಷದವರೆಗೆ ಸಹಾಯಧನ ಲಭ್ಯವಿದೆ.

**ಏನಿದು ಪಿಎಂಎಫ್ಎಂಇ ಯೋಜನೆ?** ಪ್ರಧಾನ ಮಂತ್ರಿಗಳ ಕಿರು ಅಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಎಂಬುದು ಕೇಂದ್ರೀಯ ಅನುದಾನಿತ ವಲಯದ ಯೋಜನೆಯಾಗಿದೆ. ಇದು ದೇಶದ ಕಿರು ಅಹಾರ ಸಂಸ್ಕರಣಾ ಘಟಕಗಳಿಗೆ ಹಣಕಾಸು, ತಾಂತ್ರಿಕ ಮತ್ತು ವ್ಯವಹಾರ ಬೆಂಬಲವನ್ನು ಒದಗಿಸುವ ಗುರಿಯನ್ನು ಹೊಂದಿದೆ. ಆಹಾರ ಸಂಸ್ಕರಣಾ ಉದ್ಯಮದ ಅಸಂಘಟಿತ ವಿಭಾಗದಲ್ಲಿ ಹೊಸ ಮತ್ತು ಅಸ್ತಿತ್ವದಲ್ಲಿರುವ ವೈಯಕ್ತಿಕ ಕಿರು ಉದ್ಯಮಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದು ಮತ್ತು ವಲಯದ ಕಾನೂನುಬದ್ಧಗೊಳಿಸುವಿಕೆಯನ್ನು ಉತ್ತೇಜಿಸುವುದು ಪಿಎಂಎಫ್ಎಂಇ ಯೋಜನೆಯ ಗುರಿಯಾಗಿದೆ. **ಉದ್ದೇಶಗಳು:** ಹಾಲಿ ಕಿರು ಆಹಾರ ಸಂಸ್ಕರಣಾ ಉದ್ಯಮಿಗಳು, ಎಫ್ ಪಿಒಗಳು, ಸ್ವಸಹಾಯ ಗುಂಪುಗಳು ಹಾಗೂ ಸಹಕಾರಿಗಳ ಸಾಲ ಸೌಲಭ್ಯಗಳನ್ನು ಹೆಚ್ಚಿಸುವುದು. ಬ್ರಾಂಡಿಂಗ್ ಹಾಗೂ ಮಾರ್ಕೆಟಿಂಗ್ ಅನ್ನು ಬಲಪಡಿಸುವ ಮೂಲಕ ಸಂಘಟಿತ ಸರಬರಾಜು ಸರಪಳಿಯೊಂದಿಗೆ ಏಕೀಕರಣಗೊಳಿಸುವುದು. ಈಗಿರುವ 2,00,000 ಉದ್ದಿಮೆಗಳನ್ನು ಔಪಚಾರಿಕ ಚೌಕಟ್ಟಿನೊಳಗೆ ಸೇರಿಸಲು ಬೆಂಬಲ ಒದಗಿಸುವುದು.

## ಕೊಟ್ಟಂ ಶಾಲೆಯಲ್ಲಿ ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ನಗರದ ಮಹಾನಂದಿ ಕೊಟ್ಟಂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪಾರ್ವತಿ ನಗರ ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬ ಕಾರ್ಯಕ್ರಮ ಮಂಗಳವಾರ ನಡೆಯಿತು. ಕ್ಲಸ್ಟರ್ ನ ಏಳು ಶಾಲೆಯ ವಿದ್ಯಾರ್ಥಿಗಳು ಭಾಗವಹಿಸುವ ಮೂಲಕ ತಮ್ಮ ಕಲಿಕೆಗಳನ್ನು ಪ್ರದರ್ಶಿಸಿ, ಬಹುಮಾನ ಪಡೆದುಕೊಂಡರು. ಕಲಿಕಾ ಹಬ್ಬಕ್ಕೆ ಶಾಲೆಯ ಮುಖ್ಯ ಶಿಕ್ಷಕಿ ಪಿ.ಎರ್ರೆಮ್ಮ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಮಕ್ಕಳ ಮುಕ್ತ ಕಲಿಕೆಯ ವಾತಾವರಣಕ್ಕೆ ಅನುಕೂಲಕರವಾಗಿ ಕಲಿಕಾ ಹಬ್ಬವನ್ನು ಸರ್ಕಾರವು ಜಾರಿಗೆ ತಂದಿದೆ. ಅದನ್ನು ಸಮರ್ಪಕವಾಗಿ ಮಕ್ಕಳೆಡೆಗೆ ತಲುಪಿಸುವ ವ್ಯವಸ್ಥೆಯನ್ನು ಸಂಭ್ರಮವಾಗಿಸುವ ಮೂಲಕ ಮಕ್ಕಳಲ್ಲಿ ಕಲಿಕೆಯ ಆಸಕ್ತಿಯನ್ನು ದ್ವಿಗುಣಗೊಳಿಸುವಲ್ಲಿ ಕಾರ್ಯಕ್ರಮ ಆಯೋಜಿಸಿರುವುದು ಶ್ಲಾಘನೀಯ ಎಂದರು.



ಕಾರ್ಯಕ್ರಮವನ್ನು ಉದ್ಘಾಟಿಸಿದ ಮಾತನಾಡಿದ, ಪ್ರಾಥಮಿಕ ಶಾಲೆ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಸಿ.ನಿಂಗಪ್ಪ ಭಾರತದಲ್ಲಿ ಇದು ಪ್ರಮುಖವಾಗಿ ಶಾಲಾ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು, ಶಿಕ್ಷಕರಿಗೆ ತರಬೇತಿ ನೀಡಲು ಮತ್ತು ಕಲಿಯುವ ಉತ್ಸಾಹವನ್ನು ಹೆಚ್ಚಿಸಲು ನಡೆಸಲಾದ ಒಂದು ಅಭಿಯಾನವಾಗಿದೆ. ಸಂಕ್ಷಿಪ್ತವಾಗಿ, ಕಲಿಕಾ ಹಬ್ಬವು ಶಿಕ್ಷಣ ಮತ್ತು ಜ್ಞಾನವನ್ನು ಪ್ರೋತ್ಸಾಹಿಸುವ ಒಂದು ಸಮುದಾಯ ಕೇಂದ್ರಿತ ಕಾರ್ಯಕ್ರಮವಾಗಿದೆ ಎಂದು ಹೇಳಿದರು.

ನಂತರದಲ್ಲಿ ಮಾತನಾಡಿದ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಡಿ.ಶಿವಮ್ಮ ಅವರು ಕಲಿಕಾ ಹಬ್ಬವು ಮಕ್ಕಳಲ್ಲಿ ಕಲಿಕೆಯ ಆಸಕ್ತಿ ಹೆಚ್ಚಿಸಿ, ಒತ್ತಡವಿಲ್ಲದೆ ಸಂತೋಷದಿಂದ ಕಲಿಯುವ ಜೊತೆಗೆ ಕಲಿಕಾ ಹಬ್ಬ ಸಂತೋಷವಾಗಿ ಮತ್ತು ಅನುಭವಾತ್ಮಕ ಮೂಲಕ ಕಲಿಯಲು ಇದು ಉತ್ತೇಜನ ನೀಡುತ್ತದೆ .ವಿಮರ್ಶಾತ್ಮಕ ಚಿಂತನೆ, ಆತ್ಮವಿಶ್ವಾಸ, ಸೃಜನಾತ್ಮಕತೆ ಮತ್ತು ನಾಯಕತ್ವ ಗುಣಗಳನ್ನು ಬೆಳೆಸುವ ಕಲಿಕೆಯನ್ನು ಹೊರೆಯಾಗಿಸದೆ, ಹಬ್ಬದಂತೆ ಆಚರಿಸುವ ಮೂಲಕ ಕಲಿಕೆಯನ್ನು ಮೋಜಿನ ಚಟುವಟಿಕೆಯಾಗಿ ಮಾರ್ಪಡಿಸುತ್ತದೆ ಎಂದರು.

ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಜಿ.ಶಿವಶಂಕರ್ , ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಬಿ.ಸುಧಾ , ಶಾಲೆಯ ಮೇಲುಸ್ತುವಾರಿ ಸಮಿತಿ ಅಧ್ಯಕ್ಷರಾದ ಉಪೇಂದ್ರ , ಹಿರಿಯ ದಲಿತ ಸಾಹಿತಿ ಎನ್ .ಡಿ.ವೆಂಕಮ್ಮ , ಸಿದ್ದಲಿಂಗಮ್ಮ.ಎಲ್ , ಪ್ರಮೀಳಾ ಬಾಯಿ ಎಂ , ಅನಿತಾ ಹೆಚ್.ವೈ , ಷಣ್ಮುಖ , ಕ್ಲಸ್ಟರ್ ನ ಎಲ್ಲಾ ಶಾಲಾ ಮುಖ್ಯ ಶಿಕ್ಷಕರು , ಸಹ ಶಿಕ್ಷಕರು , ನಗರದ ಮುಖಂಡರುಗಳು ಅಡುಗೆ ಸಹಾಯಕರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಕನ್ನಡ ಸಾಹಿತ್ಯ ಸಮ್ಮೇಳನ ಭರತ್ ರೆಡ್ಡಿ ಸ್ಪಷ್ಟನೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಇತ್ತೀಚೆಗೆ ನಡೆದ ಬಿಜೆಪಿ ಸಮಾವೇಶದ ವೇಳೆ ಮಾಜಿ ಸಚಿವರಾದ ಜನಾರ್ದನ ರೆಡ್ಡಿ ಹಾಗೂ ಬಿ. ಶ್ರೀರಾಮುಲು ಅವರ ವಿರುದ್ಧ ಕೇಳಿಬಂದ ಆರೋಪ–ಪ್ರತ್ಯಾರೋಪಗಳ ಕುರಿತು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಪ್ರತಿಕ್ರಿಯೆ ನೀಡಿದ್ದಾರೆ.

ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಶಾಸಕ ಭರತ್ ರೆಡ್ಡಿ, ರಾಜಕೀಯ ಆರೋಪಗಳ ಕುರಿತು ತಾತ್ಕಾಲಿಕವಾಗಿ ಪ್ರತಿಕ್ರಿಯೆ



ನೀಡುವುದನ್ನು ತಪ್ಪಿಸಿಕೊಂಡು, "ಈಗ ವಾಲ್ಮೀಕಿ ಅಜ್ಜನ ಕಾರ್ಯಕ್ರಮ ನಡೆಯುತ್ತಿದೆ. ಆ ಕಾರ್ಯಕ್ರಮ ಶಾಂತಿಯುತವಾಗಿ ಹಾಗೂ ಯಶಸ್ವಿಯಾಗಿ ಮುಗಿಯಲಿ. ಅದರ ನಂತರ ಕೇಳಿಬರುವ ಎಲ್ಲ ಪ್ರಶ್ನೆಗಳಿಗೆ ನಾನು ಸ್ಪಷ್ಟವಾಗಿ ಹಾಗೂ ಸಮಾಧಾನಕರವಾಗಿ ಉತ್ತರ ನೀಡುತ್ತೇನೆ" ಎಂದು ಹೇಳಿದರು.

ಬಿಜೆಪಿ ಸಮಾವೇಶದ ಹಿನ್ನೆಲೆಯಲ್ಲಿ ರಾಜಕೀಯ ವಲಯದಲ್ಲಿ ಉಂಟಾಗಿರುವ ಚರ್ಚೆಗಳ ಬಗ್ಗೆ ಪ್ರತಿಕ್ರಿಯೆ ನೀಡುವಾಗ, ಸಮಯೋಚಿತವಾಗಿ ಮಾತನಾಡುವುದು ಸೂಕ್ತ ಎಂಬ ಸಂದೇಶವನ್ನು ಅವರು ನೀಡಿದರು.

ಇದೇ ವೇಳೆ ಬಳ್ಳಾರಿಯಲ್ಲಿ ಶೀಘ್ರ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನ ಕುರಿತು ಮಾತನಾಡಿದ ಶಾಸಕ ಭರತ್ ರೆಡ್ಡಿ, "ಬಳ್ಳಾರಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಬೇಕು ಎಂಬುದು ನಮ್ಮ ಬಹುಕಾಲದ ಬೇಡಿಕೆಯಾಗಿತ್ತು. ಈ ನಿಟ್ಟಿನಲ್ಲಿ ನಾವು ಶಾಸಕರಾಗಿ ಹೋರಾಟ ಮಾಡಿದ್ದೇವೆ. ಅದರ ಫಲವಾಗಿ ಇಂದು ಕನ್ನಡ ಸಾಹಿತ್ಯ ಸಮ್ಮೇಳನ ಬಳ್ಳಾರಿಗೆ ಬಂದಿದೆ" ಎಂದು ಹೇಳಿದರು. ಬಳ್ಳಾರಿಯಂತಹ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮಹತ್ವ ಹೊಂದಿದ ಜಿಲ್ಲೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುವುದು ಹೆಮ್ಮೆಯ ವಿಚಾರವಾಗಿದ್ದು, ಇದರಿಂದ ಜಿಲ್ಲೆಯ ಸಾಂಸ್ಕೃತಿಕ ಬೆಳವಣಿಗೆಗೆ ಮತ್ತಷ್ಟು ಉತ್ತೇಜನ ಸಿಗಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕನ್ನಡ ಸಾಹಿತ್ಯ ಪರಿಷತ್ (ಕಸಾಪ) ಅಧ್ಯಕ್ಷರ ವಿರುದ್ಧ ಇರುವ ಪ್ರಕರಣಗಳು ಹಾಗೂ ಆ ಕುರಿತ ಗೊಂದಲಗಳ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, "ಕೆಲವು ಕೇಸ್‌ಗಳು ಹಾಗೂ ವಿವಾದಗಳು ಇರುವುದನ್ನು ನಾವು ಗಮನಿಸಿದ್ದೇವೆ. ಆದರೆ ಅವು ಕನ್ನಡ ಸಾಹಿತ್ಯ ಸಮ್ಮೇಳನದ ಆಯೋಜನೆಗೆ ಅಥವಾ ನಡೆಯುವಿಕೆಗೆ ಯಾವುದೇ ರೀತಿಯ ಅಡ್ಡಿಯಾಗುವುದಿಲ್ಲ" ಎಂದು ಸ್ಪಷ್ಟಪಡಿಸಿದರು. ಎಲ್ಲ ಗೊಂದಲಗಳನ್ನು ಬದಿಗೊತ್ತಿ, ಸಾಹಿತ್ಯ, ಸಂಸ್ಕೃತಿ ಮತ್ತು ಕನ್ನಡದ ಘನತೆಯನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಸಮ್ಮೇಳನ ನಡೆಯಲಿದೆ ಎಂಬ ವಿಶ್ವಾಸವನ್ನೂ ಅವರು ವ್ಯಕ್ತಪಡಿಸಿದರು.

ಶೀಘ್ರದಲ್ಲೇ ಬಳ್ಳಾರಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಭರ್ಜರಿಯಾಗಿ ನಡೆಯಲಿದೆ ಎಂದು ಹೇಳುವ ಮೂಲಕ, ಜಿಲ್ಲೆಯ ಜನತೆಗೆ ಸಕಾರಾತ್ಮಕ ಸಂದೇಶವನ್ನು ಶಾಸಕ ಭರತ್ ರೆಡ್ಡಿ ನೀಡಿದ್ದಾರೆ.

## ಈಗಿರುವ ಆಡಳಿತ ಸಮಿತಿಯನ್ನೇ ಮರುನೇಮಕ ಮಾಡಬೇಕು ಬಾಣಾಪುರ ನಾಗರಾಜ್ ಆಗ್ರಹ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ :**

ಅವಧಿ ಮುಗಿಯುತ್ತಿರುವ ಗ್ರಾಮ ಪಂಚಾಯತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸುವ ಬದಲು ಈಗಿರುವ ಆಡಳಿತ ಸಮಿತಿಯನ್ನೇ ಮರುನೇಮಕ ಮಾಡಬೇಕೆಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ಸದಸ್ಯರ ಮಹಾ ಒಕ್ಕೂಟದ ಬಳ್ಳಾರಿ ಜಿಲ್ಲಾಧ್ಯಕ್ಷರಾದ ಬಾಣಾಪುರ ನಾಗರಾಜ್ ಅವರು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಇರುವ ಪತ್ರಿಕಾ ಭವನದಲ್ಲಿ ಏರ್ಪಡಿಸಿದ್ದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ದಿನಾಂಕ 16–01–2026 ರಂದು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶದಂತೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 8(1)ಬಿ(ಬಿ) ಅಡಿಯಲ್ಲಿ ಅವಧಿ ಮುಗಿಯುತ್ತಿರುವ ಗ್ರಾಮ ಪಂಚಾಯತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸುವಂತೆ ಜಿಲ್ಲಾಧಿಕಾರಿಗಳಿಗೆ ಸರ್ಕಾರ ಅಧಿಕಾರಿಗಳಿಗೆ ಸೂಚಿಸಿದೆ,

ಆದರೆ ಪಂಚಾಯತ್ ರಾಜ್ ಅಧಿನಿಯಮದ 8(1)ಬಿ(ı) ರ ಪ್ರಕಾರ, ಚುನಾಯಿತರಾಗಲು ಅರ್ಹರಾದ ವ್ಯಕ್ತಿಗಳನ್ನೊಳಗೊಂಡ ಆಡಳಿತ ಸಮಿತಿಯನ್ನು ನೇಮಕ ಮಾಡಲು ಕಾನೂನು ಅವಕಾಶವಿದೆ. ಪ್ರಜಾಪ್ರಭುತ್ವದ ತಳಹದಿಯಾದ ಗ್ರಾಮ ಪಂಚಾಯತಿಗಳಲ್ಲಿ ಜನಪ್ರತಿನಿಧಿಗಳಿಗೆ ಅವಕಾಶ ನೀಡದೆ, ಅಧಿಕಾರಿಗಳ ಮೂಲಕ ಆಡಳಿತ ನಡೆಸುವುದು ಪ್ರಜಾಪ್ರಭುತ್ವ ವಿರೋಧಿ ನಡೆ ಎಂದು ಆರೋಪಿಸಿದ ಅವರು, ಈ ನಿರ್ಧಾರವನ್ನು ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ಸದಸ್ಯರ ಮಹಾ ಒಕ್ಕೂಟ ತೀವ್ರವಾಗಿ ವಿರೋಧಿಸುತ್ತದೆ,

2020ರಲ್ಲಿ ಕೋವಿಡ್ ಕಾರಣದಿಂದ ಗ್ರಾಮ ಪಂಚಾಯತಿ ಚುನಾವಣೆ ನಡೆಸಲು ಸಾಧ್ಯವಾಗದ ಸಂದರ್ಭದಲ್ಲೂ, ಅಂದಿನ ವಿರೋಧ ಪಕ್ಷದ ನಾಯಕರು ಹಾಗೂ ಇಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು



ಕೆಪಿಸಿಸಿ ಅಧ್ಯಕ್ಷರಾಗಿದ್ದ ಇಂದಿನ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಗ್ರಾಮ ಪಂಚಾಯತಿಗಳು ಪ್ರಜಾಪ್ರಭುತ್ವದ ತಳಪಾಯವಾಗಿದ್ದು, ಆಡಳಿತಾಧಿಕಾರಿಗಳನ್ನು ನೇಮಿಸದೆ ಆಡಳಿತ ಸಮಿತಿಯ ಅವಧಿಯನ್ನು ಆರು ತಿಂಗಳು ವಿಸ್ತರಿಸಬೇಕು ಎಂದು ಮೇ 12, 2020 ರಂದು ಜಂಟಿ ಪತ್ರಿಕಾ ಗೋಷ್ಠಿಯಲ್ಲಿ ಒತ್ತಾಯಿಸಿದ್ದರು ಎಂಬುದನ್ನು ಸರ್ಕಾರ ನೆನಪಿಸಿಕೊಳ್ಳಬೇಕು

ಅಲ್ಲದೇ, 1990ರ ದಶಕದಲ್ಲೂ ಗ್ರಾಮ ಪಂಚಾಯತಿಗಳ ಅವಧಿಯನ್ನು ವಿಸ್ತರಿಸಿರುವ ಉದಾಹರಣೆಗಳಿರುವುದನ್ನು ಸರ್ಕಾರದ ಗಮನಕ್ಕೆ ತಂದರು.

ಇದೇ ವೇಳೆ ಗ್ರಾಮ ಪಂಚಾಯತಿಗಳಲ್ಲಿ ಶಾಸಕರ ಹಾಗೂ ಕಾಂಗ್ರೆಸ್ ಕಾರ್ಯಕರ್ತರೆಂದು ಹೇಳಿಕೊಳ್ಳುವ ಕೆಲವರು, ಯಾವುದೇ ಧರಪಟ್ಟಿ ಆಹ್ವಾನಿಸದೆ, ಮಾರುಕಟ್ಟೆ ದರಕ್ಕಿಂತ ನಾಲ್ಕು ಪಟ್ಟು ಹೆಚ್ಚಿನ ದರದಲ್ಲಿ ಸಾಮಾಗ್ರಿಗಳನ್ನು ಪಂಚಾಯತಿಗಳ ಮೇಲೆ ಹೇರಿಕೆ ಮಾಡುತ್ತಿರುವುದಾಗಿ ಗಂಭೀರ ಆರೋಪ ಮಾಡಿದರು. ಸಾಮಾಗ್ರಿಗಳನ್ನು ನೇರವಾಗಿ ಪಂಚಾಯತಿ ಕಚೇರಿಗಳಿಗೆ ತಂದು ಇಳಿಸಿ, ನಂತರ ಅವುಗಳಿಗೆ ಹಣ ಪಾವತಿಸಲು ಶಾಸಕರು, ಅವರ ಪಿ.ಎ.ಗಳು ಹಾಗೂ ತಾಲೂಕು ಮತ್ತು ಜಿಲ್ಲಾ ಪಂಚಾಯತಿ ಮೇಲಾಧಿಕಾರಿಗಳ ಮುಖಾಂತರ ಒತ್ತಡ ಹಾಕಲಾಗುತ್ತಿದೆ ಎಂದರು.

ಈ ಕುರಿತು ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಳ್ಳಲಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ಅಕ್ರಮಗಳ ಕುರಿತು ಕ್ರಮ ಜರುಗಿಸದೇ ಇರುವ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವರಾದ ಪ್ರಿಯಾಂಕ ಖರ್ಗೆ ಅವರಿಗೆ ತಮ್ಮ ಒಕ್ಕೂಟದ ಮೂಲಕ ಒತ್ತಾಯಿಸುತ್ತಿರುವುದಾಗಿ ತಿಳಿಸಿದರು. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ಗ್ರಾಮ ಪಂಚಾಯತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸುವ ಪ್ರಜಾಪ್ರಭುತ್ವ ವಿರೋಧಿ ಆದೇಶವನ್ನು ರಾಜ್ಯ ಸರ್ಕಾರ ತಕ್ಷಣ ಹಿಂಪಡೆದು, ಅವಧಿ ಮುಗಿಯುತ್ತಿರುವ ಗ್ರಾಮ ಪಂಚಾಯತಿಗಳ ಈಗಿನ ಆಡಳಿತ ಸಮಿತಿಯನ್ನು ಪುನರ್ ನೇಮಕ ಮಾಡಬೇಕು ಎಂದು ಅವರು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ಸದಸ್ಯರ ಮಹಾ ಒಕ್ಕೂಟದ ಬಳ್ಳಾರಿ ಜಿಲ್ಲಾಧ್ಯಕ್ಷರಾದ ಬಾಣಾಪುರ ನಾಗರಾಜ್, ರಾಜ್ಯ ಖಜಾತಿ ಹೇಮಲತಾ ಮಂಜುನಾಥ್, ಜಿಲ್ಲಾ ಜಂಟಿ ಕಾರ್ಯದರ್ಶಿ ಯು ಗಣೇಶ್, ಅಮರಾಪುರ ಗ್ರಾಮ ಪಂಚಾಯತಿ ಸದಸ್ಯ ಲಕ್ಷ್ಮಿ ರೆಡ್ಡಿ, ಶ್ರೀಧರ್ ಸೇರಿದಂತೆ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ತರಬೇತಿ: ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಜಿಲ್ಲಾ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ವತಿಯಿಂದ 2025–26 ನೇ ಸಾಲಿನ ಜಿಲ್ಲಾ ವಲಯದ ವಿಶೇಷ ಘಟಕ ಯೋಜನೆಯಡಿ 37 ಮತ್ತು ಗಿರಿಜನ ಉಪಯೋಜನೆಯಡಿ 12 ಸೇರಿ ಒಟ್ಟು 49 ಗ್ರಾಮೀಣ ಭಾಗದ ಮಹಿಳಾ ಅಭ್ಯರ್ಥಿಗಳಿಗೆ ಹೊಲಿಗೆ ತರಬೇತಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಅಹ್ವಾನಿಸಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ–ಉದ್ಯೋಗ ತರಬೇತಿ ಸಂಸ್ಥೆ ವತಿಯಿಂದ ತರಬೇತಿ, ಶಿಷ್ಯವೇತನ ರಹಿತ, ಒಂದು ತಿಂಗಳ ಉಚಿತ ವಸತಿಯೊಂದಿಗೆ ತರಬೇತಿ ನೀಡಲಾಗುವುದು. ಯಶಸ್ವಿಯಾಗಿ ತರಬೇತಿ ಪೂರ್ಣಗೊಳಿಸಿದ ಮಹಿಳಾ ಅಭ್ಯರ್ಥಿಗಳಿಗೆ ಉಚಿತ ವಿದ್ಯುತ್‌ಚಾಲಿತ ಹೊಲಿಗೆಯಂತ್ರ ವಿತರಿಸಲಾಗುವುದು.

2025–26ನೇ ಸಾಲಿನ ವೃತ್ತಿನಿರತ ಕುಶಲ ಕರ್ಮಿಗಳಿಗೆ ಉಚಿತ ಸುಧಾರಿತ ಉಪಕರಣ ಸರಬರಾಜು ಯೋಜನೆಯಡಿ ಬಳ್ಳಾರಿ ಜಿಲ್ಲೆಯ ಗ್ರಾಮೀಣ ಭಾಗದ ವೃತ್ತಿನಿರತ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಉಚಿತವಾಗಿ 233 ವಿದ್ಯುತ್‌ಚಾಲಿತ ಹೊಲಿಗೆ ಯಂತ್ರ ವಿತರಿಸಲು ಉದ್ದೇಶಿಸಲಾಗಿದ್ದು, ಆಸಕ್ತ ಮಹಿಳಾ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಫೆ.20 ಕೊನೆಯ ದಿನ. ಅರ್ಜಿ ಸಲ್ಲಿಸಲು ಆನ್‌ಲೈನ್ ವೆಬ್‌ಸೈಟ್ ವಿಳಾಸ www.ballari.nic.in ಗೆ ಭೇಟಿ ನೀಡಬಹುದು. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಗಳು (ಬಳ್ಳಾರಿ– ಮೊ.9035547140, ಸಂಡೂರು ಮೊ.9844200579) ಅಥವಾ ದೂ.08392–242270 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಉಪನಿರ್ದೇಶಕರು(ಗ್ರಾ.ಕೈ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರೊದ್ದಂ ಜ್ಯುವೆಲ್ಸ್ ಮೇಲೆ ಇಡಿ ದಾಳಿ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಅಯ್ಯಪ್ಪ ಸ್ವಾಮಿ ದೇವಾಲಯದ ಚಿನ್ನನಾಪತ್ತೆ ಪ್ರಕರಣ ರಾಜ್ಯದಾದ್ಯಂತ ಸಂಚಲನ ಮೂಡಿಸಿರುವ ನಡುವೆಯೇ, ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರವರ್ಧನಾ ನಿರ್ದೇಶನಾಲಯ (ಇಡಿ) ತಂಡ ಬಳ್ಳಾರಿಗೆ ಆಗಮಿಸಿ ಭರ್ಜರಿ ಕಾರ್ಯಾಚರಣೆ ನಡೆಸಿದೆ.

ನಗರದ ಪ್ರಮುಖ ಜುವೆಲರಿ ಅಂಗಡಿಗಳಲ್ಲೊಂದಾದ ರೊದ್ದಂ ಜೂವೆಲರ್ ಮೇಲೆ ಇಡಿ ಅಧಿಕಾರಿಗಳು ದಾಳಿ ನಡೆಸಿದ್ದು, ಸುಮಾರು ನಾಲ್ಕು ಮತ್ತು ಅರ್ಧ ಕೆಜಿ ಚಿನ್ನ ನಾಪತ್ತೆಯಾಗಿರುವ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆಯನ್ನು ಮತ್ತಷ್ಟು ತೀವ್ರಗೊಳಿಸಿದ್ದಾರೆ.

ಚಿನ್ನದ ದ್ವಾರ ನಿರ್ಮಾಣದ ಹಿನ್ನೆಲೆ ಪ್ರಕರಣದ ಪ್ರಮುಖ ಆರೋಪಿಯಾಗಿ ಗುರುತಿಸಲಾಗಿರುವ ಜುವೆಲರ್ ಮಾಲೀಕ ಗೋವರ್ಧನ, ಅಯ್ಯಪ್ಪ ಸ್ವಾಮಿ ದೇವಾಲಯದ ಪ್ರಮುಖ ಅರ್ಚಕ ಉನ್ನಿಕೃಷ್ಣನ್ ಅವರೊಂದಿಗೆ



ಸೇರಿ ದೇವಾಲಯಕ್ಕೆ ಚಿನ್ನದ ದ್ವಾರ (ಗೋಲ್ಡ್ ಡೋರ್) ನಿರ್ಮಾಣ ಮಾಡಿದ್ದನು ಎನ್ನಲಾಗಿದೆ.

ಇದೇ ಸಂದರ್ಭದಲ್ಲಿ ಚಿನ್ನದ ಪ್ರಮಾಣದಲ್ಲಿ ವ್ಯತ್ಯಾಸ ಉಂಟಾಗಿದೆ ಎಂಬ ಆರೋಪ ಕೇಳಿಬಂದಿದ್ದು, ಇದು ಈಗ ಇಡಿ ತನಿಖೆಯ ಕೇಂದ್ರಬಿಂದುವಾಗಿದೆ. ಗೋವರ್ಧನ ಈಗಾಗಲೇ ಬಂಧನ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇರಳ ಎಸ್‌ಐಟಿ ಅಧಿಕಾರಿಗಳು ಈಗಾಗಲೇ ಗೋವರ್ಧನನನ್ನು ಬಂಧಿಸಿದ್ದು, ವಿಚಾರಣೆ ಮುಂದುವರಿದಿದೆ. ತನಿಖೆಯ ಮುಂದಿನ ಹಂತವಾಗಿ, ಹಣಕಾಸು ಅಕ್ರಮ ಹಾಗೂ ಚಿನ್ನದ ವಹಿವಾಟು ಕುರಿತು ಪರಿಶೀಲನೆ ನಡೆಸಲು ಇಡಿ ತಂಡ ಕಾರ್ಯಪ್ರವೃತ್ತವಾಗಿದೆ.

ಅಂಗಡಿಯಲ್ಲಿ ಇಂಚಿಂಚು ತಪಾಸಣೆ ಇಡಿ ಅಧಿಕಾರಿಗಳು ಗೋವರ್ಧನ ಮನೆಯವರನ್ನು ಸ್ಥಳಕ್ಕೆ ಕರೆಸಿ ಜುವೆಲರ್ ಅಂಗಡಿಯ ಬಾಗಿಲು ತೆರೆಯಿಸಿ, ಸಂಪೂರ್ಣ ಅಂಗಡಿಯನ್ನು ಇಂಚಿಂಚಾಗಿ ಪರಿಶೀಲನೆ ನಡೆಸುತ್ತಿದ್ದಾರೆ. ಅಂಗಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಎಲ್ಲಾ ಸಿಬ್ಬಂದಿಯನ್ನೂ ವಿಚಾರಣೆಗೆ ಕರೆಸಿಕೊಳ್ಳಲಾಗಿದೆ. ಸಿಆರ್‌ಪಿಎಫ್ ಭದ್ರತೆ ತನಿಖೆಯ ಗಂಭೀರತೆಯನ್ನು ಮನಗಂಡು, ಅಂಗಡಿ ಸುತ್ತಮುತ್ತ ಸಿಆರ್‌ಪಿಎಫ್ ಸಶಸ್ತ್ರ ಭದ್ರತೆ ಒದಗಿಸಲಾಗಿದೆ. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಭದ್ರತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗಿದೆ.

ಹಿಂದಿನ ದಾಳಿ ಹಿನ್ನೆಲೆ ಗಮನಾರ್ಹವೆಂದರೆ, ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಕಳೆದ ತಿಂಗಳೇ ಎಸ್‌ಐಟಿ ತಂಡ ಜುವೆಲರ್ ಅಂಗಡಿಗೆ ದಾಳಿ ನಡೆಸಿತ್ತು. ಇದೀಗ ಇಡಿ ತನಿಖೆ ಆರಂಭವಾಗಿರುವುದರಿಂದ, ಪ್ರಕರಣವು ಹಣಕಾಸು ಅಕ್ರಮ, ಅಕ್ರಮ ಚಿನ್ನದ ವಹಿವಾಟು ಹಾಗೂ ಅಂತರರಾಜ್ಯ ಜಾಲದತ್ತ ತಿರುಗುವ ಸಾಧ್ಯತೆ ಇದೆ. ಬೆಂಗಳೂರಿನಿಂದ ಬಂದ ಇಡಿ ತಂಡ ಈ ದಾಳಿಗಾಗಿ ಬೆಂಗಳೂರಿನಿಂದ ವಿಶೇಷ ಇಡಿ ಅಧಿಕಾರಿಗಳ ತಂಡ ಬಳ್ಳಾರಿಗೆ ಆಗಮಿಸಿದ್ದು, ದಾಖಲೆಗಳು, ಚಿನ್ನದ ಲೆಕ್ಕಪತ್ರಗಳು ಹಾಗೂ ಬ್ಯಾಂಕ್ ವ್ಯವಹಾರಗಳ ಪರಿಶೀಲನೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

## 26ರಂದು ವಿದ್ಯುತ್ ದೀಪಾಲಂಕಾರ ವ್ಯವಸ್ಥೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

77ನೇ ಗಣರಾಜ್ಯೋತ್ಸವದ ಅಂಗವಾಗಿ ಜಿಲ್ಲೆಯಲ್ಲಿ ಹಿಂದೂ ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಒಳಪಡುವ ಎಲ್ಲಾ ಧಾರ್ಮಿಕ ಸಂಸ್ಥೆಗಳು ಹಾಗೂ ದೇವಸ್ಥಾನಗಳಲ್ಲಿ ಜ.25 ಮತ್ತು ಜ.26ರಂದು ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಕೈಗೊಳ್ಳಬೇಕು ಹಾಗೂ ಜ.26 ರಂದು ವಿಶೇಷ ಪೂಜೆ, ಪ್ರಾರ್ಥನೆ ವ್ಯವಸ್ಥೆಯನ್ನು ಮಾಡಬೇಕು ಎಂದು ಹಿಂದೂ ಧಾರ್ಮಿಕ ದತ್ತಿಗಳ ಇಲಾಖೆಯ ಸಹಾಯಕ ಆಯುಕ್ತರು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅರ್ಹರಿಂದ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜಿಲ್ಲಾ ದೇವದಾಸಿ ಪುನರ್ವಸತಿ ಯೋಜನಾ ಕಚೇರಿಯಲ್ಲಿ 2025–26 ನೇ ಸಾಲಿನ ಖಾಲಿ ಇರುವ ಯೋಜನಾಧಿಕಾರಿ (01 ಹುದ್ದೆ) ಹುದ್ದೆಯ ಭರ್ತಿಗಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

**ಅರ್ಹತೆ:** ನಿವೃತ್ತ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಎಂ.ಎ., ಎಂ.ಎಸ್.ಡಬ್ಲ್ಯೂ, ಎಂ.ಎ ಇನ್ ಸೋಶಿಯಾಲಜಿ., ಎಂ.ಎಸ್ಸಿ ಇನ್ ಸೈಕಾಲಾಜಿ ಪದವಿ ಹೊಂದಿರಬೇಕು. ಕಡ್ಡಾಯವಾಗಿ ಕಂಪ್ಯೂಟರ್ ಜ್ಞಾನವನ್ನು ಹೊಂದಿರಬೇಕು. 65 ವರ್ಷದೊಳಗಿರುವ ನಿವೃತ್ತ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಆದ್ಯತೆ ನೀಡಲಾಗುವುದು. ಆಸಕ್ತರು ಅರ್ಜಿಗಳನ್ನು ಕಚೇರಿಯಿಂದ ಪಡೆದು ಅಗತ್ಯ ದಾಖಲೆಗಳೊಂದಿಗೆ ತಮ್ಮ ವಿದ್ಯಾರ್ಹತೆಯ ದಾಖಲಾತಿ ಹಾಗೂ ಅನುಭವದ ಮೂಲ ಪ್ರಮಾಣ ಪತ್ರಗಳೊಂದಿಗೆ ಜ.31 ರೊಳಗಾಗಿ ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸ್ತ್ರೀ ಸೇವಾನಿಕೇತನ ಆವರಣ, ಮಹಿಳಾ ಪೊಲೀಸ್ ಠಾಣೆ ಪಕ್ಕ, ಎಸ್.ಪಿ.ಸರ್ಕಲ್ ಹತ್ತಿರ, ಬಳ್ಳಾರಿ ಇಲ್ಲಿ ಸಲ್ಲಿಸಬಹುದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮರಳು ಮಾಫಿಯಾ ಭೂಗಳ್ಳರು ವಿರುದ್ಧ ಕಡಿವಾಣ ಯಾವಾಗ..?



ವರದಿ ವೀರೇಶ ಹೊಸಳ್ಳಿ

• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು;**

ರಾಯಚೂರುಜಿಲ್ಲೆಯಸಿಂಧನೂರು ತಾಲೂಕಿನ ಗೋಮರ್ಶಿ ಭಟ್ರಳ್ಳಿ (ಸಾಸಳ್ಳಿ) ಪಟ್ಟಾದ ಭೂಮಿಯಲ್ಲಿ ಹಾಗೂ ದೇವದುರ್ಗ ತಾಲೂಕಿಗೆ ಒಳ ಪಡುವ ಕೃಷ್ಣಾ ನದಿಯ ತೀರದಲ್ಲಿ ಹಗಲು ರಾತ್ರಿ ಎನ್ನದೆ ನಡೆಯುತ್ತಿದೆ ಎಂದರೆ ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಕಣ್ಣು ಮುಚ್ಚಿ ಕೊಡರಂತೆ ಕುಳಿತುಕೊಂಡಿದ್ದಾರೆ ಎಂದರೆ ಇದಕ್ಕೆ ಅಧಿಕಾರಿಗಳು ಕುಮ್ಮಕ್ಕು ನೀಡುತ್ತಿದ್ದಾರೆ

ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ ಎಂದು ವೇದಾಂತ ಜಿಲ್ಲೆಯಾದ್ಯಂತ ಜನರು ಬಾಯಲ್ಲಿ ಹರಿದಾಡುತ್ತಿದೆ

ಸಿಂಧನೂರು ತಾಲೂಕಿನ ಗೋಮರ್ಶಿ ಗ್ರಾಮದ ಬಳಿ ಬರುವ ಭಟ್ರಳ್ಳಿ (ಸಾಸಳ್ಳಿ) ಯು ಸರ್ವೇ ನಂಬರ್ 148/4/1 ಹಾಗೂ 148/4/5 ರ ಪಟ್ಟಾ ದಲ್ಲಿ. ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ ಕಾನೂನು ವಿರುದ್ಧವಾಗಿ ಮರಳು ಮಾಫಿಯಾ ದಂಧೆ ನಡೆಸುತ್ತಿದ್ದಾರೆ. ಒಂದು ಲಾರಿಗೆ ಪರ್ಮಿಟ್ (ಲಾಯಲ್ಟಿ) ತೆಗೆದುಕೊಂಡು ಅದೇ ರಾಜಧನ ಪರವಾನಗಿ ಹೆಸರಿನಲ್ಲಿ ಸುಮಾರು ಹತ್ತಾರು ಲಾರಿಗಳ ಮೂಲಕ ಅಕ್ರಮವಾಗಿ ಮರಳು ಸಾಗಣೆ ಮಾಡುತ್ತಿದ್ದಾರೆ ಎಂದು ಸಾರ್ವಜನಿಕರು ದೂರವಾಗಿದೆ

ನಿನ್ನೆ ದೇವದುರ್ಗ ತಾಲೂಕಿನಲ್ಲಿ ನಡೆದ ಘಟನೆ*. ಸರ್ಕಾರದ ರಾಜಧನ ಪರವಾನಗಿ ಪಡೆಯದೆ ಸರ್ಕಾರಕ್ಕೆ ಮೋಸ ಮಾಡಿ ಹಗಲು ರಾತ್ರಿ ಎನ್ನದೆ ಮರಳು ಮಾಫಿಯಾ ನಡೆಯುತ್ತಿದೆ ಎಂದು ಅಕ್ರಮ ಮರಳು ಸಾಗಣೆ ವಿರುದ್ಧ ಶಾಸಕಿ ಕರಿಯಮ್ಮ ಧ್ವನಿ ಎತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಮುಖಂಡರು ರವಿವಾರ ಸಂಜೆ ಮನೆಗೆ ಬಂದು ಮರಳು ಸಾಗಾಣಿಕೆ ಮಾಡಲು ನೀನು ಯಾಕೆ ಅಡ್ಡಿಪಡಿಸುತ್ತೀಯಾ ಎಂದು ದೇವದುರ್ಗ ಶಾಸಕರಾದ ಶ್ರೀಮತಿ ಕರಿಯಮ್ಮ ಮನೆ ಮುಂದೆ ಮರಳು ಮಾಫಿಯಾ ಭೂಗಳ್ಳರು ಧಮ್ಕಿ ಹಾಕುತ್ತಿರುವ ದೃಶ್ಯ ಕಂಡು ಬಂತು. ಮತ್ತು ನೂರಾರು ಟಿಪ್ಪರ್ ಗಳು ಕೃಷ್ಣಾ ನದಿಗೆ ಬರುತ್ತವೆ ತಡೆಯುವ ಶಕ್ತಿ ನಿಮಗಿದೆಯೇ ಎಂದು ಶಾಸಕರಿಗೆ ಸವಾಲು ಹಾಕುತ್ತಿರುವುದು ರಾಜಕೀಯ ಕಾರಣದ ಕೈಗಳು ಕೆಲಸ ಮಾಡುತ್ತೇವೆ ಎಂದು ಶಾಸಕಿ ಕರಿಯಮ್ಮ ಅವರು ಆಕ್ರೋಶವನ್ನು ವ್ಯಕ್ತಪಡಿಸಿದರು

ಆದರೆ ಮನೆಗಳು ಕಟ್ಟಲು ಟ್ರ್ಯಾಕ್ಟರ್ ಮೂಲಕ ಮರಳು ಸಾಗಾಣಿಕೆ ಮಾಡಲು ನನ್ನಿಂದ ಯಾವುದೇ ಕಾರಣಕ್ಕೂ ನಾನು ತೊಂದರೆ ಮಾಡುವುದಲ್ಲ. ಇಲ್ಲಿ ಬೇರೆ ಜಿಲ್ಲೆಯವರು ಟಿಪ್ಪರ್ ಮೂಲಕ ಮರಳು ಮಾಫಿಯಾ ನಡೆಸುವ ಭೂಗಳ್ಳರು ವಿರುದ್ಧ ಆಕ್ರೋಶವನ್ನು ವ್ಯಕ್ತಪಡಿಸಿದ್ದೇನೆ

ರಾತ್ರಿ ವೇಳೆಯಲ್ಲಿ ಶೌಚಗೃಹಕ್ಕೆ ಹೋಗುವ ಸಾರ್ವಜನಿಕರು ಮಹಿಳೆಯರು ಬೇಸತ್ತಿದ್ದಾರೆ*. ತಾಲೂಕಿನ ಸಾರ್ವಜನಿಕರ ಮಹಿಳೆಯರಿಗೆ ಮರಳು ಮಾಫಿಯಾ ದಂಧೆಕೋರರಿಂದ ಆಗುತ್ತಿರುವ ಸಮಸ್ಯೆಗಳು ಬಗ್ಗೆ ಧ್ವನಿ ಎತ್ತಿದಕ್ಕೇ ನನ್ನ ಮನೆಗೆ ಬಂದು ಅಕ್ರಮ ಮರಳುಗಾರಿಕೆ ವಿರುದ್ಧ ನೀನೇಕೇ ಅಡ್ಡ ಬರುತ್ತೀಯಾ ಬರಬೇಡ ಎಂದು ಅಕ್ರಮ ಗಣಿಗಾರಿಕೆ ದಂಧೆಕೋರರು ಏಕಾಏಕಿ ಮನೆಗೆ ನುಗ್ಗಿದ್ದಾರೆ. ತಾಲೂಕಿನಲ್ಲಿ ಮರಳು ಮಾಫಿಯಾ ದಂಧೆಕೋರರು ಹಾಗೂ ಶಾಸಕಿ ಕರಿಯಮ್ಮ ವಿರುದ್ದ ದೇವದುರ್ಗ ತಾಲೂಕಿನಲ್ಲಿ ಯಾವ ಸ್ವರೂಪ ಪಡೆದುಕೊಳ್ಳುತ್ತಿದೆ ಕಾದು ನೋಡಬೇಕಿದೆ.

## ಕರೆಮ್ಮ ಜಿ ನಾಯಕ ಆರೋಪ

ತಾಲೂಕಿನ ಅಕ್ರಮ ಧಂದೆಕೊರರಿಗೆ ಕಾನೂನು ಭಯ ಇಲ್ಲದಂತಾಗಿದೆ. ಏಕಾಏಕಿ ನೂರಾರು ಜನರ ಗುಂಪು ಕಟ್ಟಿಕೊಂಡು ಬಂದು ನನಗೆ ಹೊರಗೆ ಹೊಗಲು ಅವಾಕಾಶ ನೀಡದೆ ಮರಳು ಸಾಗಾಣಿಕೆಗೆ ಅವಾಕಾಶ ಕೊಡಲೇ ಬೇಕು ಇಲ್ಲದಿದ್ದಲ್ಲಿ ಪರಿಣಾಮ ಬೇರೆ-ಯಾಗುತ್ತೆ ಎನ್ನುವ ರೀತಿಯಲ್ಲಿ ಜೀವ ಬೆದರಿಕೆ ಹಾಕಿರುವುದಾಗಿ ಸೋಮವಾರ ತಮ್ಮ ಸ್ವ ಗೃಹದಲ್ಲಿ ನಡೆದ ಪತ್ರಿಕಾ ಗೊಷ್ಠಿಯಲ್ಲಿ ಹೇಳಿದರು.

ಮುಂದುವರೆದು ತಾಲೂಕಿನಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳಾದ ಮಟ್ಕಾ, ಜೂಜು, ಗಾಂಜಾ, ಮರಳುಗಾರಿಕೆಗಳ ಬಗ್ಗೆ ಪತ್ರಿಕಾ ವರಿದಿಗಳು ಹಾಗೂ ಜನಸಾಮಾನ್ಯರ ದೂರುಗಳ ಆಧಾರದ ಮೇಲೆ ಸಂಭಂದಪಟ್ಟ ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ ಆದರೆ ಕೇಲವು ಅಧಿಕಾರಿಗಳು ಆ ರೀತಿ ಯಾವುದು ನಡೆಯುತ್ತಿಲ್ಲಾ ಎನ್ನುವ ಹಾರಿಕೆ ಉತ್ತರ ನೀಡುತ್ತಿದ್ದಾರೆ. ತಹಶಿಲ್ದಾರಿರಿಗೆ ಕರೆ ಮಾಡಿ ಅಕ್ರಮವಾಗಿ ಮರಳುಗಾರಿಕೆ ನಡಿಯತ್ತಿದೆ ಯಾವ ಕ್ರಮ ಕೈ ಗೊಂಡಿದ್ದಿರಾ ಎಂದು ಕೆಳಿದರೆ ನಮ್ಮ ಕಂದಾಯ ನಿರೀಕ್ಷಕರ ಮೇಲೆ ಟಿಪ್ಪರ್ ಎರಿಸುವದಕ್ಕೆ ಮುಂದಾಗಿದ್ದಾರೆ ಎನ್ನುವ ಉತ್ತರ ಕೇಳಿ ನಿಜಕ್ಕೂ ಇದು ಅತ್ಯಂತ ಆತಂಕಕಾರಿ ಸಂಗತಿ ಎಂದು ಹೇಳಿದರು.



# ಲಯನ್ಸ್ ವಿರುದ್ಧ ರೌಜಾ ಸ್ಟಾರ್ಸ್ ಜಯ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

KBNPL 2026 ರ ಎರಡನೇ ದಿನವು ಗಂಗಾವತಿ ಲಯನ್ಸ್ ಮತ್ತು ರೌಜಾ ಸ್ಟಾರ್ಸ್ ನಡುವಿನ ರೋಚಕ ಪಂದ್ಯದೊಂದಿಗೆ ಪ್ರಾರಂಭವಾಯಿತು. ಗಂಗಾವತಿ ಲಯನ್ಸ್ ವಿರುದ್ಧ ರೌಜಾ ಸ್ಟಾರ್ಸ್ 8 ವಿಕೆಟ್‌ಗಳ ಜಯದೊಂದಿಗೆ ಪಂದ್ಯ ಕೊನೆಗೊಂಡಿತು. ಮಂಗಳವಾರ ಸಂಗತ್ರಾಶ್ವಾಡಿ ಮೈದಾನದಲ್ಲಿ KBNPL 2026 ರಲ್ಲಿ ಸ್ಟಾರ್ಸ್ ತಮ್ಮ ಮೊದಲ ವಿಜಯವನ್ನು ಗುರುತಿಸಿದ್ದಾರೆ.

ಗಂಗಾವತಿ ಲಯನ್ಸ್ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಲಯನ್ಸ್ 204/9




ಗುರಿ ನೀಡಿತು. ಗುರಿ ಬೆನ್ನಟ್ಟಿದ್ದ ರೌಜಾ ಸ್ಟಾರ್ಸ್‌ನ ಆರಂಭಿಕರಾದ ಲುವ್ನಿತ್ ಸಿಸೋಡಿಯಾ ಮತ್ತು ಎಂಡಿ ಮುನೀರ್ ಅವರ ಇನ್ನಿಂಗ್ಸ್‌ಗೆ ಅದ್ಭುತ ಆರಂಭವನ್ನು ನೀಡಿದರು.

ಅವರು ವೇಗವಾಗಿ ರನ್ ಕಲೆಹಾಕಿದರು. 4ನೇ ಓವರ್ ನಲ್ಲಿ 50 ರನ್ ಪೂರೈಸಿದರು. ಭುವನರಾಜು ಲುವ್ನಿತ್ ಸಿಸೋಡಿಯಾ ವಿಕೆಟ್ ಪಡೆಯುವ ಮೂಲಕ ಸ್ಟಾರ್ಸ್ ರನ್ ಹರಿವಿಗೆ ಬ್ರೇಕ್ ಹಾಕಿದರು. ಸಿಸೋಡಿಯಾ ತಮ್ಮ ವಿಶಾಲವಾದ 5 ಬೌಂಡರಿ ಮತ್ತು 6 ಸಿಕ್ಸರ್‌ಗಳೊಂದಿಗೆ 58 ರನ್ ಗಳಿಸಿದರು. ನಾಯಕ ಎಂಡಿ ಮುನೀರ್ ಕೂಡ ಸುಸೋಡಿಯಾ ಅವರನ್ನು ಪೆವಿಲಿಯನ್‌ಗೆ ಹಿಂಬಾಲಿಸಿದರು. ಅವರು 5 ಬೌಂಡರಿ ಸಹಿತ 23 ರನ್ ಗಳಿಸಿದರು.

ತಿಪ್ಪಾ ರೆಡ್ಡಿ ಮತ್ತು ಆದರ್ಶ್ ತಮ್ಮ ಅತ್ಯುತ್ತಮ ಜೊತೆಯಾಟದಿಂದ ಅತ್ಯುತ್ತಮವಾಗಿ ಆಡಿದರು. ಅವರು ಸತತ 117 ರನ್ ಗಳಿಸಿ ತಂಡಕ್ಕೆ ಜಯ ತಂದುಕೊಟ್ಟರು. ಔಟಾಗದೆ ಉಳಿದ ತಿಪ್ಪಾ ರೆಡ್ಡಿ 39 ಎಸೆತಗಳಲ್ಲಿ 9 ಬೌಂಡರಿ ಹಾಗೂ 3 ಸಿಕ್ಸರ್ ನೆರವಿನಿಂದ 75 ರನ್ ಗಳಿಸಿದರು. ಆದರ್ಶ್ ಎಂ 33 ಎಸೆತಗಳಲ್ಲಿ ತಲಾ 3 ಬೌಂಡರಿ ಹಾಗೂ ಸಿಕ್ಸರ್ ನೆರವಿನಿಂದ 51 ರನ್ ಗಳಿಸಿದರು. ಲಯನ್ಸ್ ತಂಡವನ್ನು ಸ್ಟಾರ್ಸ್ ಸುಲಭವಾಗಿ 8 ವಿಕೆಟ್ ಗಳಿಂದ ಸೋಲಿಸಿ ಚೊಚ್ಚಲ ಜಯ ದಾಖಲಿಸಿತು.

ಗಂಗಾವತಿ ಲಯನ್ಸ್ ತಂಡದ ಆರಂಭಿಕರಾದ ಭುವನ್ ರಾಜು ಮತ್ತು ಮಿರ್ಜಾ ವಸೀಂ ಬೇಗ್ ಉತ್ತಮ ಓಪನಿಂಗ್ ನೀಡಲು ನಿಧಾನ ಮಾಡಿದರು. ಲಯನ್ಸ್ ಮೊದಲ ಓವರ್ ನಲ್ಲಿಯೇ ಮೊದಲ ವಿಕೆಟ್ ಕಳೆದುಕೊಂಡಿತು. ಶಿವರಾಜ್ (28), ರೋಹನ್ ನವೀನ್ (42), ಎಂ ಡಿ ಕೈಫ್ (27) ಅವರ ಹಿಟ್‌ಗಳಿಂದ ಪ್ರೇಕ್ಷಕರು ಪುಳಕಗೊಂಡರು.

ಲಯನ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 204 ರನ್ ಕಲೆಹಾಕಿತು. ರೌಜಾ ಸ್ಟಾರ್ಸ್ ಪರ ಮರಿ ಬಸವ 3 ವಿಕೆಟ್ ಪಡೆದರು. ಸ್ಟಾರ್ಸ್ ತಂಡದ ತಿಪ್ಪಾ ರೆಡ್ಡಿ ಪಂದ್ಯ ಪುರುಷ ಪಡೆದರು.

## ವ್ಯಕ್ತಿ ಕಾಣೆ: ಪತ್ತೆಗೆ ಮನವಿ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರದ ಬ್ರೂಸ್‌ಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮುಕ್ತಿಯಾರ್



ಎನ್ನುವ 38 ವರ್ಷದ ವ್ಯಕ್ತಿ 2024ರ ಡಿ.04 ರಂದು ಕಾಣೆಯಾಗಿರುವ ಕುರಿತು ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕು ಎಂದು ಠಾಣಾಧಿಕಾರಿ ಮನವಿ ಮಾಡಿದ್ದಾರೆ.

ವ್ಯಕ್ತಿಯ ಚಹರೆ:

ಎತ್ತರ 5.8 ಅಡಿ, ಎಣ್ಣೆ ಗೆಂಪು ಮೈಬಣ್ಣ, ಕೋಲು ಮುಖ, ಎಡ ಕೆನ್ನೆಯ ಮೇಲೆ ಮಚ್ಚೆ ಇರುತ್ತದೆ. ಕಾಣೆಯಾದ ಸಂದರ್ಭದಲ್ಲಿ ನೀಲಿ ಬಣ್ಣದ ಟೀ ಶರ್ಟ್ ಹಾಗೂ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿರುತ್ತಾನೆ. ಕನ್ನಡ, ತೆಲುಗು, ಹಿಂದಿ ಉರ್ದು ಭಾಷೆ ಮಾತನಾಡುತ್ತಾನೆ.

ವ್ಯಕ್ತಿಯ ಸುಳಿವು ಮಾಹಿತಿ ಸಿಕ್ಕಲ್ಲಿ ಬ್ರೂಸ್‌ಪೇಟೆ ಪೊಲೀಸ್ ಠಾಣೆ ಅಥವಾ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಬಹುದು ಎಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

# ನಕಲಿ ವೈದ್ಯರ ಕುರಿತು ಜಾಗ್ರತೆ ವಹಿಸಿ: ಡಿಹೆಚ್‌ಓ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜಿಲ್ಲೆಯಲ್ಲಿ ನಕಲಿ ವೈದ್ಯರ ಹಾವಳಿ ಗಂಭೀರವಾಗಿದ್ದು, ಸಾರ್ವಜನಿಕರು ನಕಲಿ ವೈದ್ಯರ ಕುರಿತು ಜಾಗ್ರತೆ ವಹಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಹೇಳಿದ್ದಾರೆ.

ಆರೋಗ್ಯ ಇಲಾಖೆಯು ಕಾರ್ಯಾಚರಣೆ ನಡೆಸಿ ಹಲವರನ್ನು ಪತ್ತೆಹಚ್ಚಿ ಕ್ರಮ ಕೈಗೊಂಡಿದೆ. ಈ ನಕಲಿ ವೈದ್ಯರು ಕನಿಷ್ಠ ಶೈಕ್ಷಣಿಕ ಅರ್ಹತೆ ಇಲ್ಲದಿದ್ದರೂ ಕ್ಲಿನಿಕ್‌ಗಳನ್ನು ತೆರೆದು ಬಡ ಜನರ ಆರೋಗ್ಯದೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ. ಇವರನ್ನು ಮಟ್ಟಹಾಕಲು ದಂಡ ಮತ್ತು ಕಾನೂನು ಕ್ರಮಗಳನ್ನು ಕೈಗೊಳ್ಳುತ್ತಿದೆ. ಆದರೂ ಸಂಪೂರ್ಣ ತಡೆಯಲು ಸಾರ್ವಜನಿಕರ ಸಹಕಾರವೂ ಅಗತ್ಯವಾಗಿದೆ ಎಂದು ತಿಳಿಸಿದ್ದಾರೆ.

ಸರಿಯಾದ ವೈದ್ಯಕೀಯ ಪದವಿ (ಎಂಬಿಬಿಎಸ್, ಬಿಎಎಂಎಸ್, ಬಿಎಚ್‌ಎಂಎಸ್, ಬಿಡಿಎಸ್ ಮುಂತಾದವು) ಅಥವಾ ವೈದ್ಯಕೀಯ ಮಂಡಳಿಯ ನೋಂದಣಿ ಇಲ್ಲದೆ ಚಿಕಿತ್ಸೆ ನೀಡುವವರೇ ನಕಲಿ ವೈದ್ಯರಾಗಿರುತ್ತಾರೆ.

ತಪ್ಪಾದ ರೋಗನಿರ್ಣಯ ಅಥವಾ ಅಪಾಯಕಾರಿ ಔಷಧಿಗಳಿಂದ ರೋಗ ಗಂಭೀರವಾಗುವ ಸಾಧ್ಯತೆ ಮತ್ತು ಶಾಶ್ವತ ಹಾನಿ ಅಥವಾ ಮರಣಕ್ಕೂ ಕಾರಣವಾಗಬಹುದು. ಸಾರ್ವಜನಿಕರು ಕ್ಲಿನಿಕ್‌ನಲ್ಲಿ ರಿಜಿಸ್ಟ್ರೇಶನ್ ನಂಬರ್ ಪ್ರದರ್ಶಿಸಿಲ್ಲ, ಪದವಿ ಪ್ರಮಾಣಪತ್ರಗಳು ಸ್ಪಷ್ಟವಾಗಿ ಇಲ್ಲ ಎಂದಾದರೆ ಅವರು ನಕಲಿ ವೈದ್ಯರು ಎಂದು ಗಮನಿಸಬಹುದು.

ನಕಲಿ ವೈದ್ಯರು ಸಾಮಾನ್ಯವಾಗಿ ಎಲ್ಲಾ ರೋಗಕ್ಕೂ ಒಂದೇ ಔಷಧಿ ಎಂದು ಹೇಳುವುದು, ಅತೀ ಕಡಿಮೆ ಶುಲ್ಕಕ್ಕೆ ಗ್ಯಾರಂಟಿ ಚಿಕಿತ್ಸೆ ಎನ್ನುವುದು, ಇಂಜೆಕ್ಷನ್/ಡ್ರಿಪ್‌ಗಳನ್ನು ಅಗತ್ಯವಿಲ್ಲದೆ ನೀಡುವುದು ಮಾಡುವುದು ಕಂಡುಬರುತ್ತದೆ.

ಸಾರ್ವಜನಿಕರು ವೈದ್ಯರನ್ನು ಭೇಟಿಯಾಗುವ ಮೊದಲು ನೋಂದಣಿ ಸಂಖ್ಯೆ ಪರಿಶೀಲಿಸಿ. ಸರ್ಕಾರದ ಅಥವಾ ಮಾನ್ಯತೆ ಪಡೆದ ಆಸ್ಪತ್ರೆಗಳನ್ನು ಆಯ್ಕೆ ಮಾಡಬೇಕು. ಅನುಮಾನಾಸ್ಪದ ಚಿಕಿತ್ಸೆ ಕಂಡರೆ ದೂರು ನೀಡಿ, ಇತರರಿಗೆ ಜಾಗೃತಿ ಮೂಡಿಸಬೇಕು ಎಂದು ಡಿಹೆಚ್‌ಓ ಅವರು ತಿಳಿಸಿದ್ದಾರೆ.

ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಅಧಿಕೃತ ವೈದ್ಯ ಪದವಿ ಪಡೆದ ವೈದ್ಯರ ಬಳಿ ತಪಾಸಣೆ ಮಾಡಿಸುವ ಮೂಲಕ ಚಿಕಿತ್ಸೆ ಪಡೆಯುವುದರಿಂದ ಆರೋಗ್ಯದ ಮೇಲೆ ಉಂಟಾಗಬಹುದಾದ ಗಂಭೀರ ಪರಿಣಾಮಗಳನ್ನು ತಡೆಯಬಹುದಾಗಿದೆ.

ನಗರ, ಗ್ರಾಮಗಳಲ್ಲಿ ವೈದ್ಯ ವೃತ್ತಿ ಮಾಡುತ್ತಿರುವವರು ಕಂಡುಬಂದಲ್ಲಿ ದಯವಿಟ್ಟು ಅವರ ವೈದ್ಯಕೀಯ ಪದವಿಯ ಮಾಹಿತಿಯನ್ನು ಪಡೆದುಕೊಂಡು ಚಿಕಿತ್ಸೆ ಪಡೆಯಿರಿ, ಒಂದು ವೇಳೆ ನಕಲಿ ವೈದ್ಯರು ಎಂದು ಕಂಡುಬಂದರೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಾಲಯಕ್ಕೆ ದೂರು ನೀಡಿದರೆ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ 2007 ರ ಅಡಿಯಲ್ಲಿ ಕ್ರಮ ಜರುಗಿಸಬಹುದಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕೆಲವರು ನಕಲಿ ವೈದ್ಯರಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಹೆಸರು ಬಳಸಿಕೊಂಡು ಹಣವನ್ನು ವಸೂಲಿ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿರುವ ಹಿನ್ನಲೆಯಲ್ಲಿ ಸಾರ್ವಜನಿಕರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯಕ್ಕೆ ಅಥವಾ ಪೋಲೀಸ್ ಠಾಣೆಗೆ ದೂರು ನೀಡಬಹುದು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಇಂತಹ ನಕಲಿ ಕ್ಲಿನಿಕ್‌ಗಳಿಗೆ ಯಾವುದೇ ರೀತಿಯ ಬೆಂಬಲ ನೀಡುವುದಿಲ್ಲ. ಅಂತಹ ನಕಲಿ ಕ್ಲಿನಿಕ್‌ಗಳು ಕಂಡುಬಂದಲ್ಲಿ ತಕ್ಷಣವೇ ಸೀಜ್ ಮಾಡಿ ಕಾನೂನು ರೀತಿ ಕ್ರಮಕೈಗೊಳ್ಳಲಾಗುವುದು.

**ಡಾ.ಯಲ್ಲಾ ರಮೇಶ್ ಬಾಬು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ.**

# ರೆಡ್ಡಿಗಳು ದೇಶಕ್ಕೆ ಅನ್ನ ನೀಡುವರು :ರಾಜಶೇಖರ ಪಾಟೀಲ

• **ಮಲ್ಲಮ್ಮ ನುಡಿ ವಾರ್ತೆ ,ಹುಮನಾಬಾದ್:**



ರೆಡ್ಡಿ ಸಮುದಾಯವು ದೇಶದ ಕೃಷಿ ಆಧಾರಿತ ಆರ್ಥಿಕತೆ-ಗೆ ಬೆನ್ನೆಲುಬಾಗಿ ನಿಂತಿದ್ದು, "ರೆಡ್ಡಿಗಳು ದೇಶಕ್ಕೆ ಅನ್ನ ನೀಡುವವರು" ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ ಅವರು ಹೇಳಿದರು. ಮಹಾಯೊಗಿ ವೇಮನರ ಜನ್ಮೋತ್ಸವ ನಿಮಿತ್ಯ ಪತ್ರಿಕಾ ಪ್ರಕಟಣೆ ನೀಡಿದ ಅವರು, ರೆಡ್ಡಿ ಸಮುದಾಯವು ಶತಮಾನಗಳಿಂದ ಕೃಷಿ, ನೀರಾವರಿ, ಹಸಿರು ಕ್ರಾಂತಿ ಹಾಗೂ ಗ್ರಾಮೀಣ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದೆ ಎಂದು ಹೇಳಿದರು. ರೈತರ ಪರಿಶ್ರಮದ ಫಲವಾಗಿ ದೇಶದ ಕೋಟ್ಯಾಂತರ ಜನರಿಗೆ ಆಹಾರ ದೊರಕುತ್ತಿದೆ ಎಂದರು. ಇಂದಿನ ಯುವ ಪೀಳಿಗೆ ಕೃಷಿಯ ಜೊತೆಗೆ ಶಿಕ್ಷಣ, ವಿಜ್ಞಾನ, ಆಡಳಿತ ಹಾಗೂ ಉದ್ಯಮ ಕ್ಷೇತ್ರಗಳಲ್ಲಿಯೂ ಸಾಧನೆ ಮಾಡುತ್ತಿದ್ದು, ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ರಾಜಶೇಖರ ಪಾಟೀಲ ತಿಳಿಸಿದ್ದಾರೆ.

ಕೃಷಿಕರ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರಗಳು ಹೆಚ್ಚಿನ ಗಮನ ನೀಡಬೇಕು. ರೈತರಿಗೆ ನ್ಯಾಯಯುತ ಬೆಲೆ, ನೀರಾವರಿ ಸೌಲಭ್ಯ ಹಾಗೂ ಆಧುನಿಕ ಕೃಷಿ ತಂತ್ರಜ್ಞಾನ ದೊರಕುವಂತೆ ಕ್ರಮ ಕೈಗೊಳ್ಳಬೇಕೆಂದು ಅವರು ಮನವಿ ಮಾಡಿದರು. ರೆಡ್ಡಿ ಗಳು ತನ್ನ ಪ್ರಾಣವನ್ನೇ ಕೊಟ್ಟಾರೂ ಆದರೆ ಯಾರಿಗಾದರೂ ಕೊಟ್ಟ ಮಾತು ಮಾತ್ರ ಮೀರುವುದಿಲ್ಲ.

# ಬಹುರಾಷ್ಟ್ರೀಯ ಕಂಪನಿಗಳ ಜೊತೆ ಚರ್ಚೆ



- **ಕೋಕ-ಕೋಲಾದ 25,760 ಕೋಟಿ ಹೂಡಿಕೆಯ ಬಹುಪಾಲು ರಾಜ್ಯಕ್ಕೆ ಸೆಳೆಯಲು ಕೈಗಾರಿಕಾ ಸಚಿವ ಎಂ. ಬಿ. ಪಾಟೀಲ ಯತ್ನ**
- **ಪಾನೀಯ ತಯಾರಿಕೆ ಮತ್ತು ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ವಿಜಯಪುರ ಜಿಲ್ಲೆ ಹೆಚ್ಚು ಸೂಕ್ತ**
- **ರಾಜ್ಯದಲ್ಲಿ ವಹಿವಾಟು ವಿಸ್ತರಣೆಗೆ ಯುಪಿಎಲ್ ಲಿಮಿಟೆಡ್, ಎಬಿ ಇನ್‌ಬೆವ್ ಇಂಗಿತ**
- **ರಫ್ತು ಉದ್ದೇಶಕ್ಕೆ ಮೌಲ್ಯವರ್ಧಿತ ಮೆಕ್ಕೆಜೋಳ ಆಧಾರಿತ ಉತ್ಪನ್ನ ತಯಾರಿಕೆ ಹಾಗೂ ಎಥೆನಾಲ್ ಸ್ಥಾವರ ನಿರ್ಮಾಣದ ಸಾಧ್ಯತೆ ಚರ್ಚೆ**

• **ಮಲ್ಲಮ್ಮ ನುಡಿ ವಾರ್ತೆ ,ಬೆಂಗಳೂರು:**

ದೇಶದ ಆಹಾರ ಸಂಸ್ಕರಣಾ ವಲಯದಲ್ಲಿ ಕೋಕಾ ಕೋಲಾ ಹೂಡಿಕೆ ಮಾಡಲಿರುವ 25,760 ಕೋಟಿ ಬಂಡವಾಳದಲ್ಲಿ ಗಮನಾರ್ಹ ಮೊತ್ತವನ್ನು ರಾಜ್ಯಕ್ಕೆ ಆಕರ್ಷಿಸಲು ಕೈಗಾರಿಕಾ ಸಚಿವ ಎಂ. ಬಿ. ಪಾಟೀಲ ಅವರು ಕಂಪನಿಯ ಮನವೊಲಿಸಲು ಸರ್ವ ಪ್ರಯತ್ನ ಮಾಡಿದ್ದಾರೆ. ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ಸಮಾವೇಶದ ಮೊದಲ ದಿನ ಕೋಕ ಕೋಲಾ ಕಂಪನಿಯ ಜಾಗತಿಕ ನೀತಿ ಹಾಗೂ ಸುಸ್ಥಿರತೆಯ ಹಿರಿಯ ಉಪಾಧ್ಯಕ್ಷ ಮೈಕಲ್ ಗೋಲ್ಜಮನ್ ಅವರ ಜೊತೆಗಿನ ಸಭೆಯಲ್ಲಿ ಸಚಿವ ಪಾಟೀಲ ಅವರು, ಈ ಸಂಗತಿಯನ್ನು ಪ್ರಮುಖವಾಗಿ ಚರ್ಚಿಸಿದರು. ಕಂಪನಿಯು ಭಾರತದಲ್ಲಿ ಹೂಡಿಕೆ ಮಾಡಲಿರುವ ಬಂಡವಾಳದಲ್ಲಿ ಗಮನಾರ್ಹ ಮೊತ್ತವು ಕರ್ನಾಟಕಕ್ಕೆ ಹರಿದು ಬರಲು ಅಗತ್ಯವಾದ ಎಲ್ಲ ಸೌಲಭ್ಯ ಹಾಗೂ ಬೆಂಬಲ ನೀಡಲು ರಾಜ್ಯ ಸರ್ಕಾರ ಉತ್ಸುಕವಾಗಿರುವುದಾಗಿ ಭರವಸೆ ನೀಡಿದರು. ಕಂಪನಿಯ ಪಾನೀಯ ತಯಾರಿಕೆ ಮತ್ತು ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ವಿಜಯಪುರ ಜಿಲ್ಲೆಯು ಸೂಕ್ತಸ್ಥಳವಾಗಿರುವುದನ್ನು ಮನವರಿಕೆ ಮಾಡಿಕೊಡಲಾಗಿದೆ. ಈ ಪ್ರದೇಶದಲ್ಲಿ ಪಾನೀಯ ತಯಾರಿಸುವ ಕೈಗಾರಿಕೆಗಳ ಬಳಕೆಗೆ ಅಗತ್ಯವಾಗಿರುವ ನೀರು ಅಪಾರ ಪ್ರಮಾಣದಲ್ಲಿ ಸುಸ್ಥಿರ ರೀತಿಯಲ್ಲಿ ಲಭ್ಯ ಇರುವುದನ್ನು ಕಂಪನಿಯ ಮುಖ್ಯಸ್ಥರ ಗಮನಕ್ಕೆ ತರಲಾಗಿದೆ. ಬಂಡವಾಳ ಹೂಡಿಕೆ ಮಾಡುವಾಗ ಈ ಜಿಲ್ಲೆಗೆ ಆದ್ಯತೆ ನೀಡಲು ಒತ್ತಾಯಿಸಲಾಗಿದೆ ಎಂದು ಸಚಿವ ಎಂ. ಬಿ. ಪಾಟೀಲ ಅವರು ತಿಳಿಸಿದ್ದಾರೆ. ಸಚಿವರ ನೇತೃತ್ವದಲ್ಲಿನ ರಾಜ್ಯದ ಉನ್ನತ ಮಟ್ಟದ ನಿಯೋಗವು ದೇಶ-ವಿದೇಶಗಳ ಬಹುರಾಷ್ಟ್ರೀಯ ಕಂಪನಿಗಳ ದಿಗ್ಗಜರನ್ನು ಭೇಟಿಯಾಗಿ ರಾಜ್ಯದಲ್ಲಿ ಉದ್ಯಮ ಸ್ಥಾಪನೆ, ವಿಸ್ತರಣೆ ಹಾಗೂ ಬಂಡವಾಳ ಹೂಡಿಕೆ ಆಕರ್ಷಿಸಲು ರಾಜ್ಯ ಸರ್ಕಾರ ಕೊಡಮಾಡಲಿರುವ ಸಬ್ಸಿಡಿ, ಉತ್ತೇಜನಾ ಕ್ರಮಗಳನ್ನು ವಿವರಿಸಿತು.

ಮೆಂಜಿಸ್ ಏವಿಯೇಷನ್ನಿನ ಕಾರ್ಯನಿರ್ವಾಹಕ ಅಧ್ಯಕ್ಷ ಹ್ಯಾಸನ್ ಎಲ್. ಹೌರಿ , ಯುಪಿಎಲ್‌ನ ಅಧ್ಯಕ್ಷ ಜೈ ಶ್ರಾಫ್, ಎಬಿ ಇನ್‌ಬೆವ್‌ನ ಕಾರ್ಪೊರೇಟ್ ವ್ಯವಹಾರಗಳ ಅಧಿಕಾರಿ ಜಾನ್ ಬ್ಲಡ್, ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್, ನ್ಯಾಚುರಲ್ ಫೈಬರ್ ವೆಲ್ಡಿಂಗ್ (ಎನ್‌ಎಫ್‌ಡಬ್ಲ್ಯು ಅರ್ಥ್) ನ ಸುಹಾಸ್ ಉಪ್ಪಲಪತಿ ಅವರ ಜೊತೆ ಫಲಪ್ರದ ಮಾತುಕತೆ ನಡೆಸಿತು. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಗ್ರೌಂಡ್ ಹ್ಯಾಂಡ್ಲಿಂಗ್ ಉದ್ದೇಶದ ಟೆಂಡರ್ ದೊರೆತರೆ 85 ಕೋಟಿ ಹೂಡಿಕೆ ಮಾಡಲಿರುವುದನ್ನು ಮೆಂಜಿಸ್ ಏವಿಯೇಷನ್ ರಾಜ್ಯದ ನಿಯೋಗದ ಗಮನಕ್ಕೆ ತಂದಿತು. ತನ್ನ ಜಾಗತಿಕ ಕಾರ್ಯಾಚರಣೆಗಳಿಗೆ ಪೂರಕವಾಗಿ ರಾಜ್ಯದಲ್ಲಿ ಶ್ರೇಷ್ಠತಾ ಕೇಂದ್ರ ಹಾಗೂ ಜಾಗತಿಕ ಸಾಮರ್ಥ್ಯ ಕೇಂದ್ರಗಳನ್ನು ಸ್ಥಾಪಿಸುವ ಸಾಧ್ಯತೆಗಳನ್ನು ಪರಿಶೀಲಿಸುವುದಾಗಿ ನಿಯೋಗಕ್ಕೆ ತಿಳಿಸಿದೆ.

ಕೃಷಿ ರಾಸಾಯನಿಕ ಮತ್ತು ಬೆಳೆ ಸಂರಕ್ಷಣಾ ಕಂಪನಿ ಯುಪಿಎಲ್ ಲಿಮಿಟೆಡ್, ಕೃಷಿ ಪರಿಹಾರ ಮತ್ತು ನೀರಾವರಿ ತಂತ್ರಜ್ಞಾನಗಳಲ್ಲಿ ಕರ್ನಾಟಕದಲ್ಲಿ ತನ್ನ ವಹಿವಾಟು ವಿಸ್ತರಿಸಲು ಆಸಕ್ತಿ ವ್ಯಕ್ತಪಡಿಸಿದೆ. ರಫ್ತು ಮಾರುಕಟ್ಟೆಗಳಿಗೆ ಮೌಲ್ಯವರ್ಧಿತ ಮೆಕ್ಕೆಜೋಳ ಆಧಾರಿತ ಉತ್ಪನ್ನಗಳನ್ನು ತಯಾರಿಸುವ ಸಾಧ್ಯತೆಗಳನ್ನು ಕಂಪನಿಯು ಪ್ರಸ್ತಾಪಿಸಿದೆ. ಎಥೆನಾಲ್ ರಫ್ತು ಸಾಧ್ಯತೆ ಸೇರಿದಂತೆ ಎಥೆನಾಲ್ ಸ್ಥಾವರ ನಿರ್ಮಾಣದ ಬಗ್ಗೆ ಚರ್ಚಿಸಲಾಗಿದೆ.

ಪ್ರವರ್ಧಮಾನಕ್ಕೆ ಬರುತ್ತಿರುವ ತಂತ್ರಜ್ಞಾನ ಕ್ಷೇತ್ರಗಳಲ್ಲಿನ ವಿಶ್ವ ಆರ್ಥಿಕ ವೇದಿಕೆಯ ಕಾರ್ಯಕ್ರಮಗಳ ಪ್ರಾಯೋಗಿಕ ಪರೀಕ್ಷೆಗೆ ಕರ್ನಾಟಕವು ಸೂಕ್ತ ತಾಣವಾಗಿರುವುದನ್ನು ಡಬ್ಲ್ಯುಇಎಫ್ ನಿಯೋಗದ ಗಮನಕ್ಕೆ ತರಲಾಗಿದೆ. ರಾಜ್ಯದಲ್ಲಿನ ಟಾಟಾ ಸನ್ಸ್‌ನ ಭವಿಷ್ಯದ ಯೋಜನೆಗಳ ಬಗ್ಗೆ ಮಾಹಿತಿ ವಿನಿಮಯ ಮಾಡಿಕೊಳ್ಳಲಾಗಿದೆ. ಎಬಿ ಇನ್‌ಬೆವ್ ರಾಜ್ಯದಲ್ಲಿ ತನ್ನ ಕಾರ್ಯಾಚರಣೆಗಳನ್ನು ಮತ್ತಷ್ಟು ವಿಸ್ತರಿಸುವ ಬಗ್ಗೆ ಸ್ಪಷ್ಟ ಇಂಗಿತ ವ್ಯಕ್ತಪಡಿಸಿದೆ. ರಾಜ್ಯದಲ್ಲಿ ತನ್ನ ವಹಿವಾಟಿನ ಬಗ್ಗೆ ರಾಜ್ಯ ಸರ್ಕಾರದ ಜೊತೆ ಯೋಜನಾ ಪ್ರಸ್ತಾವ ಹಂಚಿಕೊಳ್ಳುವುದಾಗಿ ನ್ಯಾಚುರಲ್ ಫೈಬರ್ ವೆಲ್ಡಿಂಗ್ನ (ಎನ್‌ಎಫ್‌ಡಬ್ಲ್ಯು ಅರ್ಥ್) ಉನ್ನತಾಧಿಕಾರಿಗಳ ತಂಡವು ರಾಜ್ಯದ ನಿಯೋಗಕ್ಕೆ ಭರವಸೆ ನೀಡಿದೆ ಎಂದು ಸಚಿವ ಪಾಟೀಲ ಅವರು ತಿಳಿಸಿದ್ದಾರೆ.

ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ, ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಬಿಡಿಎ ಆಯುಕ್ತ ಮಣಿವಣ್ಣನ್, ಕೈಗಾರಿಕಾ ಇಲಾಖೆ ಆಯುಕ್ತೆ ಗುಂಜನ್ ಕೃಷ್ಣ, ಕೈಗಾರಿಕಾ ಉದ್ಯೋಗ ಮಿತ್ರದ ವ್ಯವಸ್ಥಾಪಕ ನಿರ್ದೇಶಕ ದೊಡ್ಡ ಬಸವರಾಜು ಅವರು ರಾಜ್ಯದ ನಿಯೋಗದಲ್ಲಿ ಇದ್ದಾರೆ.

# ವೈದ್ಯವೃತ್ತಿ ಶ್ರೇಷ್ಠ ವೃತ್ತಿ ಸಚಿವ ಲಾಡ್

• **ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ :**

ನಿತ್ಯದಲ್ಲಿ ರೋಗಿಗಳೊಂದಿಗೆ ತಮ್ಮ ನೋವನ್ನು ಮರೆಯುವ ವೈದ್ಯರು ನಿಜವಾದ ತ್ಯಾಗಿಗಳು ಎಂದು ಜಿಲ್ಲಾ ಉಸ್ತುವಾರಿ ಕಾರ್ಮಿಕ ಸಚಿವ ಸಂತೋಷ ಲಾಡ್ ಮಾತನಾಡಿದರು.

ಅವರು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ ವೈದ್ಯರೊಂದಿಗೆ ಹಾಗೂ ರೋಗಿಗಳೊಂದಿಗೆ ಮಾತನಾಡುತ್ತ ಸಾರ್ವಜನಿಕರು ವೈದ್ಯರೊಂದಿಗೆ ಸಹಕರಿಸಿದರೆ ವೈದ್ಯರಿಂದ ಇನ್ನು ಹೆಚ್ಚಿನ ಸೇವೆಯನ್ನು ನೀರಿಕ್ಷಿಸಬಹುದು ವೈದ್ಯರು ಕೂಡ ಆಸ್ಪತ್ರೆಗ ಚಿಕಿತ್ಸೆಗಾಗಿ ಬಂದ ರೋಗಿಗಳನ್ನು ಉತ್ತಮ ಚಿಕಿತ್ಸೆ ನೀಡಿರಿ ಎಂದರು ಅಲ್ಲದೆ ಆಸ್ಪತ್ರ ಆವರಣದಲ್ಲಿ ಹಾಗೂ ಸುತ್ತಮುತ್ತಲು ಸ್ವಚ್ಚತೆ ಭಗ್ಗೆ ಗಮನಹರಿಸ ಬೇಕು ಹಣಕಾಸಿನ ನೆರವಾಗಲಿ ಸಿಬ್ಬಂದಿಗಳ ಕೊರತೆ ಇದ್ದಲ್ಲಿ ನಮ್ಮ ಗಮನಕ್ಕೆ ತಂದರೆ ತಕ್ಷಣ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಇ ಸಂಧರ್ಬದಲ್ಲಿ ಡಿ.ಎಚ್ ಓ ಡಾ ಮುದಿಗೌಡ್ರ, ಟಿ.ಎಚ್ ಓ ಡಾ ಕರ್ಲವಾಡ ಡಾ ಬಸವರಾಜ ಬಾಸೂರ ಡಾ ಮಧಸೂದನ, ಡಾ ಕಟ್ಟಿಮನಿ, ಉಪ ವಿಭಾಗಾಧಿಕಾರಿ ಜುಬೇದ ಹುಸೇನ್ ತಾ.ಪಂ ಇ ಓ ಪಿ.ವಾಯ್ ಸಾವಂತ, ಪ.ಪಂ ಮುಖ್ಯಾಧಿಕಾರಿ ಚಂದ್ರಶೇಖರ, ಆಸ್ಪತ್ರೆ ಸಿಬ್ಬಂದಿಗಳು ಹರಿಶಂಕರ ಮಠದ ಪಂಚ ಗ್ಯಾರಂಟಿ ಯೋಜನೆಯ ಜಿಲ್ಲಾಧ್ಯಕ್ಷ ಎಸ್.ಆರ್ ಪಾಟೀಲ, ಬ್ಲಾಕ್ ಕಾಂಗ್ರೆಸ ಅಧ್ಯಕ್ಷ ಮಂಜುನಾಥ ಮುರಳ್ಳಿ ,ಬಾಬು ಅಂಚಟಗೇರಿ ,ಕುಮಾರ ಖಂಡೆಕರ ,ಅಜಮತ್ ಜಾಗಿರದಾರ, ಬಾಳು ಖಾನಾಪೂರ, ಸೋಮಶೇಖರ ಬೆನ್ನೂರ, ಯಲ್ಲಪ್ಪ ಸುಣಗಾರ, ಇದ್ದರು.



**ಕಾರ್ಮಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ತಾಲೂಕಾ ಆಸ್ಪತ್ರೆ ಆವರಣದಲ್ಲಿ ವೈದ್ಯರು ಹಾಗೂ ಸಿಬ್ಬಂದಿಗಳೊಂದಿಗೆ ಬೆರೆಯುವ ಮೂಲಕ ವೈದ್ಯರನ್ನು ಅಭಿನಂದಿಸಿದರು.**

## ಗ್ರಾಮವನ್ನು ಒಗ್ಗೂಡಿಸುವ ಹಬ್ಬ



"ಅಖಂಡ ಹರಿನಾಮ ಸಪ್ತಾಹ ಮತ್ತು ಜ್ಞಾನೇಶ್ವರಿ ಪಾರಾಯಣ ಧಾರ್ಮಿಕ ಕಾರ್ಯ ನಿಮಿತ್ಯ ನಮ್ಮ ತೋರಣಾ ಗ್ರಾಮವನ್ನು ಒಗ್ಗೂಡಿಸುವ ಹಬ್ಬದ ವಾತಾವರಣ ಸೃಷ್ಟಿ ಮಾಡಿದೆ, ಸುತ್ತ ಮುತ್ತಲಿನ ಹಳ್ಳಿಯ ಜನ ಹಾಗೂ ನಮ್ಮೂರಿನ ಬಂದು ಬಳಗದವರು, ಗ್ರಾಮಸ್ಥರು ಎಲ್ಲರೂ ಸೇರುವ ಸಂಭ್ರಮವಾಗಿದೆ.

ಮನುಷ್ಯನಿಗೆ ನಿರಂತರ ಹರಿನಾಮ ಜಪವು ಜೀವನದಲ್ಲಿ ಸಕಾರಾತ್ಮಕತೆಯನ್ನು ಪ್ರೇರೇಪಿಸಿ, ವ್ಯಕ್ತಿಯ ಜೀವನವನ್ನು ಉಜ್ವಲಗೊಳಿಸುತ್ತದೆ.

ಭಕ್ತಿ ಮಾರ್ಗದ ನೀಡುತ್ತದೆ ಪುರಂದರದಾಸರಂತಹ ಹರಿದಾಸರ ಸಂಪ್ರದಾಯದಂತೆ, ಭಜನೆ ಮತ್ತು ಕೀರ್ತನೆಗಳ ಮೂಲಕ ಶ್ರೀಮನ್ನಾರಾಯಣನ ಭಕ್ತಿಯನ್ನು ಜನಸಾಮಾನ್ಯರಿಗೆ ತಲುಪಿಸಲು ಇದು ಒಂದು ಉತ್ತಮ ಕಾರ್ಯಕ್ರಮವಾಗಿದೆ.

ಇಂದಿನ ಸಮಾಜದಲ್ಲಿ ಕೋಮು, ಪ್ರಾಂತ್ಯ, ಭಾಷೆ ಹೀಗೆ ಅನೇಕ ವಿಶೇಷಗಳ ಬಗ್ಗೆ ಒಳ ಜಗಳ ಸರ್ವೆ ಸಾಮಾನ್ಯ ಹಾಗಾಗಿ ಇಂತಹ ಸಾಮಾಜಿಕ ಏಕತೆ ಸಾರುವ ಸಪ್ತಾಹದ ಸಂದರ್ಭದಲ್ಲಿ ಸಾವಿರಾರು ಭಕ್ತರು ಜಾತಿ-ಮತ ಭೇದವಿಲ್ಲದೆ ಒಂದೆಡೆ ಸೇರುವುದರಿಂದ ಸಮಾಜದಲ್ಲಿ ಏಕತೆ ಮತ್ತು ಸೌಹಾರ್ದತೆ ಮೂಡುತ್ತದೆ ಮತ್ತು ಗ್ರಾಮದಲ್ಲಿ ಹಬ್ಬದ ವಾತಾವರಣ ಮೂಡುತ್ತದೆ. ಮುಂಬರುವ ದಿನಗಳಲ್ಲಿ ಇಂತಹ ಕಾರ್ಯಕ್ರಮವೂ ಇನ್ನಷ್ಟು ದೊಡ್ಡ ಮಟ್ಟದಲ್ಲಿ ಮಾಡಲು ಪ್ರೇರಣೆ ನೀಡಿದೆ ಎಂದು ಯುವ ಮುಖಂಡ, ಸುನಿಲ ಶಿಗರೆ ಅಧ್ಯಕ್ಷರು ಗ್ರಾಮ ಪಂಚಾಯತ ತೋರಣಾ ಅವರು ಪ್ರಕಟಣೆ ಮೂಲಕ ತಿಳಿಸಿದ್ದರು.

# ನಿಸ್ವಾರ್ಥ ಸೇವೆಯ ದೃಢ ನಿಶ್ಚಯದ ಜನನಾಯಕ



•ರಮೇಶ್ ಕುಲಕರ್ಣಿ ಬೀದರ್



ಅಭಿನಂದನಾ ಸಂದೇಶ

ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾಗಿ ಏಕಮತದಿಂದ ಆಯ್ಕೆಯಾದ ನಮ್ಮ ರಾಜ್ಯದ ಗೌರವಾನ್ವಿತ ಅರಣ್ಯ ಸಚಿವರು, ನಿಸ್ವಾರ್ಥ ಸೇವೆಯ ಪ್ರತೀಕ, ಚುರುಕು ಹಾಗೂ ದೃಢನಿಶ್ಚಯದ ಜನನಾಯಕ ಶ್ರೀ ಈಶ್ವರ ಖಂಡ್ರೆಜಿ ಅವರಿಗೆ ಹೃದಯಪೂರ್ವಕ ಅಭಿನಂದನೆಗಳು ಹಾಗೂ ಹಾರ್ೈಕೆಗಳು.

ಶ್ರೀ ಈಶ್ವರ ಖಂಡ್ರೆಜಿ ಅವರು ಕೇವಲ ರಾಜಕೀಯ ನಾಯಕನಷ್ಟೇ ಅಲ್ಲ, ದೇಶಪ್ರೇಮವನ್ನು ಉಸಿರಾಡುವ ರಾಷ್ಟ್ರಭಕ್ತ ನಾಯಕರು. ರಾಷ್ಟ್ರದ ಏಕತೆ, ಸಂವಿಧಾನದ ಮೌಲ್ಯಗಳು, ಸಾಮಾಜಿಕ ಸೌಹಾರ್ದ ಮತ್ತು ಸಾರ್ವಜನಿಕ ಹಿತಾಸಕ್ತಿಯನ್ನು ಸದಾ ಮೊದಲಿಗೆಯಲ್ಲಿ ಇಡುವ ಅವರ ಚಿಂತನೆಗಳು ಜನಮನವನ್ನು ಸ್ಪರ್ಶಿಸುತ್ತವೆ. ದೇಶದ ಪ್ರಗತಿಯೇ ತಮ್ಮ ಸೇವೆಯ ಗುರಿ ಎಂಬ ನಿಷ್ಠೆಯಿಂದ ಅವರು ಪ್ರತಿಯೊಂದು ನಿರ್ಧಾರದಲ್ಲೂ ರಾಷ್ಟ್ರ ಹಿತವನ್ನು ಪ್ರಧಾನವಾಗಿಟ್ಟಿದ್ದಾರೆ. ನಾಡಿನ ಅರಣ್ಯ ಸಂರಕ್ಷಣೆ, ಪರಿಸರ ರಕ್ಷಣೆ ಮತ್ತು ಸಾರ್ವಜನಿಕ ಸಂಪನ್ಮೂಲಗಳ ಜವಾಬ್ದಾರಿಯುತ ಬಳಕೆಯ ಮೂಲಕವೂ ಅವರ ದೇಶಪ್ರೇಮ ಸ್ಪಷ್ಟವಾಗಿ ಕಾಣಿಸುತ್ತದೆ.

ವೀರಶೈವ ಸಮಾಜದ ಒಗ್ಗಟ್ಟು, ಸಂಘಟನೆ, ಶಿಕ್ಷಣ, ಸಂಸ್ಕಾರ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ಅವರು ನಡೆಸುತ್ತಿರುವ ಸೇವೆ ರಾಷ್ಟ್ರದ ಶಕ್ತಿಕರಣಕ್ಕೆ ದಿಟ್ಟ ಕೊಡುಗೆ-ಯಾಗಿದೆ. ಎಲ್ಲರನ್ನು ಜೊತೆಯಾಗಿಕರೆದು-ಕೊಂಡುಹೋಗುವ, ಭಿನ್ನತೆಯಲ್ಲಿಯೂ ಏಕತೆಯನ್ನು ಕಟ್ಟುವ ಅವರ ನಾಯಕತ್ವವೇ ದೇಶಪ್ರೇಮದ ನಿಜವಾದ ರೂಪವಾಗಿದೆ.

ಅವರು ತಮ್ಮ ತಂದೆಯಾದ ಸ್ವರ್ಗೀಯ ಶ್ರೀ ಭೀಮಣ್ಣ ಖಂಡ್ರೆಜಿ ಅವರ ಮಹಾನ್ ಆದರ್ಶಗಳು, ತ್ಯಾಗಮಯ ಜೀವನ ಹಾಗೂ ದೇಶ-ಸಮಾಜ ಸೇವೆಯ ಪರಂಪರೆಯನ್ನು ಹೃದಯದಲ್ಲಿ ಹೊತ್ತು ಮುಂದುವರಿಸುತ್ತಿರುವುದು ನಮ್ಮೆಲ್ಲರಿಗೂ ಅಪಾರ ಹೆಮ್ಮೆಯ ವಿಷಯ. ಸ್ವರ್ಗೀಯ ಶ್ರೀ ಭೀಮಣ್ಣ ಖಂಡ್ರೆಜಿ ಅವರು ಸಮಾಜದ ಏಕತೆ, ರಾಷ್ಟ್ರಭಕ್ತಿ ಮತ್ತು ಮಾನವೀಯ ಮೌಲ್ಯಗಳನ್ನು ಜೀವನದ ಧ್ಯೇಯವನ್ನಾಗಿಸಿಕೊಂಡ ಮಹಾನ್ ಲೋಕನಾಯಕರು. ಅವರ ಪ್ರತಿಯೊಂದು ಹೆಜ್ಜೆಯೂ ದೇಶದ ಒಳಿತಿಗಾಗಿ, ಪ್ರತಿಯೊಂದು ಉಸಿರೂ ಜನಸೇವೆಯಿಗಾಗಿ ಅರ್ಪಿತವಾಗಿತ್ತು. ಅವರ ದೇಶಪ್ರೇಮದ ಚಿಂತನಧಾರೆ ಇಂದಿಗೂ ಅನೇಕ ನಾಯಕರಿಗೆ ದಾರಿದೀಪವಾಗಿದೆ.

ಅದೇ ರಾಷ್ಟ್ರಭಕ್ತಿ ಮತ್ತು ಸಮಾಜಮುಖಿ ಆದರ್ಶಗಳು ಇಂದು ಶ್ರೀ ಈಶ್ವರ ಖಂಡ್ರೆಜಿ ಅವರ ನಾಯಕತ್ವದಲ್ಲಿ ಹೊಸ ಶಕ್ತಿಯೊಂದಿಗೆ ಮುಂದುವರಿಯುತ್ತಿವೆ. ಅವರ ಅಧ್ಯಕ್ಷತ್ವದಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆ ಒಗ್ಗಟ್ಟು-ಅಭಿವೃದ್ಧಿ-ದೇಶಪ್ರೇಮ ಎಂಬ ಮೌಲ್ಯಗಳೊಂದಿಗೆ ಇನ್ನಷ್ಟು ಬಲಿಷ್ಠವಾಗಿ, ರಾಷ್ಟ್ರಮಟ್ಟದಲ್ಲಿ ಸಮಾಜಕ್ಕೆ ಹೊಸ ಆಶಾಭಾವನೆ ಮತ್ತು ಆತ್ಮವಿಶ್ವಾಸ ನೀಡಲಿದೆ ಎಂಬ ದೃಢ ನಂಬಿಕೆ ನಮಗಿದೆ.

ಭಗವಂತರು ಅವರಿಗೆ ಉತ್ತಮ ಆರೋಗ್ಯ, ದೀರ್ಘಾಯುಷ್ಯ ಹಾಗೂ ನಿರಂತರ ಸೇವಾಶಕ್ತಿಯನ್ನು ನೀಡಲಿ. ಅವರ ನಾಯಕತ್ವ ದೇಶಕ್ಕೂ, ಸಮಾಜಕ್ಕೂ ಸದಾ ಹೆಮ್ಮೆಯಾಗಲಿ. ಮತ್ತೊಮ್ಮೆ ಹೃದಯಪೂರ್ವಕ ಅಭಿನಂದನೆಗಳು. ನಿಮ್ಮ ಸೇವೆ ಮತ್ತು ದೇಶಪ್ರೇಮ ಸದಾ ಪ್ರಕಾಶಿಸಲಿ.

# ಚನ್ನಬಸವೇಶ್ವರ ಗುರುಕುಲದಲ್ಲಿ 4ನೇ ಹಂತದ ಸ್ಕಾಲರ್‌ಶಿಪ್ ಪ್ರವೇಶ ಪರೀಕ್ಷೆ

• ಪರಶುರಾಮ ಕರಣಂ, ಭಾಲ್ಕಿ



ತಾಲೂಕಿನ ಕರಡ್ಯಾಳ ಚನ್ನಬಸವೇಶ್ವರ ಗುರುಕುಲದಲ್ಲಿ ನಡೆದ ಸ್ಕಾಲರ್‌ಶಿಪ್ ಪ್ರವೇಶಪರೀಕ್ಷೆಯಲ್ಲಿ 2425 ವಿದ್ಯಾರ್ಥಿಗಳು ಪರೀಕ್ಷೆ ಬರೆದರು.

ಚನ್ನಬಸವೇಶ್ವರ ಗುರುಕುಲದಲ್ಲಿ ಭಾನುವಾರ 4ನೇ ಹಂತದ ಗುರುಕುಲ ಗೋಲ್ಡನ್ ಸ್ಕಾಲರ್‌ಶಿಪ್ ಪ್ರವೇಶ ಪರೀಕ್ಷೆ ನಡೆದವು. ರಾಜ್ಯದ 25ಕ್ಕೂ ಹೆಚ್ಚು ಜಿಲ್ಲೆ ಸೇರಿ ನೆರೆಯ ತೆಲಂಗಾಣ, ಮಹಾರಾಷ್ಟ್ರ ರಾಜ್ಯದ ವಿವಿಧ ಭಾಗದಲ್ಲಿ ಪ್ರಸ್ತುತ ಎಸ್ಸೆಸ್ಸೆಲ್ಸಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

4ನೇ ಹಂತದ ಪರೀಕ್ಷೆಯಲ್ಲಿ ಬೆಂಗಳೂರು ಸೇರಿ ಸುತ್ತಮುತ್ತಲಿನ ಭಾಗದ ಮತ್ತು ಮಹಾರಾಷ್ಟ್ರ ರಾಜ್ಯದ ವಿವಿಧ ಜಿಲ್ಲೆಗಳ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾಗಿದ್ದು ವಿಶೇಷವೆನಸಿತು. ಸ್ಕಾಲರ್‌ಶಿಪ್ ಪ್ರವೇಶ ಪರೀಕ್ಷೆಯಲ್ಲಿ ಮೊದಲ 100 ರ್‍ಯಾಂಕ್ ಪಡೆಯುವ ವಿದ್ಯಾರ್ಥಿಗಳಿಗೆ ಎರಡು ವರ್ಷ ಉಚಿತ ಪಿಯುಸಿ ವಿಜ್ಞಾನ ಶಿಕ್ಷಣ, ಕೋಚಿಂಗ್ ಮತ್ತು ಫೀನಲ್ಲಿ ರಿಯಾಯಿತಿ ಸಿಗಲಿದೆ.

ಮೊದಲ 25 ರ್‍ಯಾಂಕ್ ಪಡೆಯುವ ವಿದ್ಯಾರ್ಥಿಗಳು ಎರಡು ವರ್ಷ ಉಚಿತ ಪಿಯುಸಿ ಶಿಕ್ಷಣ ಮತ್ತು ಕೋಚಿಂಗ್, ವಸತಿ ಸೌಲಭ್ಯ ಪಡೆಯಲಿದ್ದಾರೆ ಎಂದು ಪ್ರಾಚಾರ್ಯ ಬಸವರಾಜ ಮೊಳಕೀರೆ ತಿಳಿಸಿದರು.

**ಮಕ್ಕಳಿಗೆ ಪೂಜ್ಯರ ವಿಶ್:** ವಿವಿಧ ಪರೀಕ್ಷೆ ಕೇಂದ್ರಗಳಿಗೆ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಗುರುಬಸವ ಪಟ್ಟದ್ದೇವರು, ಶಿವಾನಂದ ಸ್ವಾಮೀಜಿ ಭೇಟಿ ಪರೀ-ಕ್ಷೆಗೆ ಹಾಜರಾದ ವಿದ್ಯಾರ್ಥಿಗಳಿಗೆ ಆಶೀರ್ವದಿಸಿ ಶುಭ ಕೋರಿದರು. ಸಂಸ್ಥೆಯ ಆಡಳಿತಾಧಿಕಾರಿ ಮೋಹನ ರೆಡ್ಡಿ, ಪ್ರಾಚಾರ್ಯ ಬಸವರಾಜ ಮೊಳಕೀರೆ ಸೇರಿದಂತೆ ಹಲವರು ಇದ್ದರು.

ಗ್ರಾಮೀಣ ಭಾಗದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಕಲ್ಪಿಸುವ ಧ್ಯೇಯದೊಂದಿಗೆ ಡಾ.ಬಸವಲಿಂಗಪಟ್ಟದ್ದೇವರು ಗುರುಕುಲ ಸ್ಕಾಲರ್ ಶಿಪ್ ಪ್ರವೇಶ ಪರೀಕ್ಷೆ ಯೋಜನೆ ರೂಪಿಸಿದ್ದಾರೆ. ಈ ಪರೀಕ್ಷೆಗೆ ಪಾಲಕರು, ವಿದ್ಯಾರ್ಥಿಗಳಿಂದ ನಿರೀಕ್ಷೆಗೂ ಮೀರಿ ಉತ್ತಮ ಸ್ಪಂದನೆ ದೊರಕುತ್ತಿದೆ.



-ಬಸವರಾಜ ಮೊಳಕೀರೆ,
ಪ್ರಾಚಾರ್ಯರು ಚನ್ನಬಸವೇಶ್ವರ ಗುರುಕುಲ ಕರಡ್ಯಾಳ

# ಅಖಂಡ ತೋರಣಾ ಗ್ರಾಮವನ್ನು ಒಗ್ಗೂಡಿಸಿದ ಹರಿನಾಮ ಸಪ್ತಾಹ



• ವಿಶೇಷ ವರದಿ: ಪರಮೇಶ ರಾಂಪುರೆ



ಬೀದರಜಿಲ್ಲೆಯ ಕಮಲನಗರ ತಾಲೂಕಿನ ಸುಕ್ಷೇತ್ರ ತೆ-ೋರಣಾ ಗ್ರಾಮದಲ್ಲಿ ಏಳು ದಿನಗಳ ಕಾಲ ಇಡಿ ಊರಿಗೆ ಊರು ಒಗ್ಗೂಡಿ ಧಾರ್ಮಿಕ ಆಚರಣೆ, ಧರ್ಮದ ರಕ್ಷಣೆ, ಆಧ್ಯಾತ್ಮಿಕ ಶಾಂತಿ, ಸಾವಿರಾರು ಭಕ್ತರು ಜಾತಿ-ಮತಭೇದವಿಲ್ಲದೆ ಸಾಮಾಜಿಕ ಏಕತೆಯಿಂದ ಭಜನೆ, ಹರಿಕೀರ್ತನೆ, ಹರಿಪಥ, ಪೂಜೆ ಪುನಸ್ಕಾರ, ದಾಸೋಹ ಹೀಗೆ ಎಲ್ಲರೂ ಹನುಮಾನ ದೇವರ ಮುಂದೆ ಅದ್ದೂರಿಯಾಗಿ ಹಾಕಿದ ಒಂದೇ ಮಂಟಪದ ಕೆಳಗೆ ಸೇರುವಂತೆ ಮಾಡಿರುವುದೇ ಈ ಅಖಂಡ ಹರಿನಾಮ ಸಪ್ತಾಹ ಮತ್ತು ಜ್ಞಾನೇಶ್ವರಿ ಪಾರಾಯಣ ಕಾರ್ಯಕ್ರಮ.

**ಏನಿದು ಅಖಂಡ ಹರಿನಾಮ ಸಪ್ತಾಹ ಮತ್ತು ಜ್ಞಾನೇಶ್ವರಿ ಪಾರಾಯಣ:** ಹರಿನಾಮ ಸಪ್ತಾಹ ಎಂದರೆ ಹರಿನಾಮ: ಹರಿ+ನಾಮ, ಹರಿ ಎಂದರೆ ಭಗವಂತ ಮತ್ತು ನಾಮ ಎಂದರೆ ಹೆಸರು, "ಸಪ್ತಾಹ" ಏಳು ದಿನಗಳ ಕಾಲ (ಸಪ್ತಾಹ) ಭಗವಂತನ ನಾಮಸ್ಮರಣೆ, ಕೀರ್ತನೆ ಮತ್ತು ಕಾಕಡ ಆರತಿ, ಹರಿಪಥ, ಹರಿಕೀರ್ತನೆ, ಹರಿಜಾಗರಣೆ, ಭಜನೆ, ಮತ್ತು ಮಹಾಪ್ರಸಾದ ಮುಂತಾದವು

ಧಾರ್ಮಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುವ ಒಂದು ಭಕ್ತಿಪರವಾದ ಸಾಂಸ್ಕೃತಿಕ ಆಚರಣೆಯ ಪರಂಪರೆಯಾಗಿದೆ.

ಮತ್ತು ಸಂತ ಜ್ಞಾನೇಶ್ವರ ಅವರು ರಚಿಸಿದ "ಜ್ಞಾನೇಶ್ವರಿ" ಎಂಬ ಭಗವದ್ಗೀತೆ ಟೀಕೆಯ ಗ್ರಂಥವನ್ನು ನಿರಂತರವಾಗಿ ಪಠಿಸುವುದು. ಜ್ಞಾನೇಶ್ವರಿ ಪಾರಾಯಣ ಎನ್ನುವರು.

**ಸಪ್ತಾಹ ಕಾರ್ಯಕ್ರಮದ ಉದ್ದೇಶ:** ಸಪ್ತಾಹ ಕಾರ್ಯಕ್ರಮದ ಮೂಲ ಉದ್ದೇಶ ಇಡಿ ಸಮುದಾಯ ಅಥವಾ ಗ್ರಾಮವನ್ನು ಒಗ್ಗೂಡಿಸುವುದು, ಅವರಿಗೆ ಆಧ್ಯಾತ್ಮಿಕ ಏಳಿಗೆ, ಪಾರಂಪರಿಕ ಮೌಲ್ಯಗಳ ಪುನರುಜ್ಜೀವನ, ಮತ್ತು ಸಮುದಾಯದ ಭಕ್ತಿ ಭಾವವನ್ನು ಹೆಗೆ ಹೆಚ್ಚಿಸಬೇಕೆಂದು ಹಾಗೂ ಲೋಕಕಲ್ಯಾಣ, ಶಾಂತಿ ಹಾಗೂ ನೆಮ್ಮದಿಯ ಬದುಕಿನ ದಾರಿ ತೋರಿಸುವ ಹಾಗೂ ಭಕ್ತಿ ಮತ್ತು ಆಧ್ಯಾತ್ಮಿಕತೆಯನ್ನು ಹೆಚ್ಚಿಸಲು ಇಂತಹ ಅದ್ಭುತ ಕಾರ್ಯಕ್ರಮ ಆಯೋಜಿಸಲಾಗುತ್ತದೆ.

**ಅಖಂಡ ಹರಿನಾಮ ಸಪ್ತಾಹದ ಮಹತ್ವ:** ಈ ಕಾರ್ಯಕ್ರಮದಲ್ಲಿ ಸನಾತನ ಧರ್ಮದ ರಕ್ಷಣೆವೂ ಆಧುನಿಕತೆಯ ಅಬ್ಬರದಲ್ಲಿ ಮರೆಯಾಗುತ್ತಿರುವ ನಮ್ಮ ಸನಾತನ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ, ಮುಂದಿನ ಪೀಳಿಗೆಗೆ ಹಸ್ತಾಂತರಿಸಲು ಈ ಸಪ್ತಾಹಗಳು ನೆರವಾಗುತ್ತವೆ. ಹರಿನಾಮ ಸ್ಮರಣೆಯಿಂದ ಆಧ್ಯಾತ್ಮಿಕ ಶಾಂತಿ ಮತ್ತು ಸಪ್ತಾಹದ ಕಾರ್ಯಕ್ರಮಗಳು ಮನಸ್ಸಿಗೆ ಸುಖ, ಶಾಂತಿ ಮತ್ತು ನೆಮ್ಮದಿಯನ್ನು ನೀಡುತ್ತವೆ. ಇಂತಹ ಸಾಮಾಜಿಕ ಏಕತೆ ಸಾರುವ ಸಪ್ತಾಹದ ಸಂದರ್ಭದಲ್ಲಿ ಸಾವಿರಾರು ಭಕ್ತರು ಜಾತಿ-ಮತ ಭೇದವಿಲ್ಲದೆ ಒಂದೆಡೆ ಸೇರುವುದರಿಂದ ಸಮಾಜದಲ್ಲಿ ಏಕತೆ ಮತ್ತು ಸೌಹಾರ್ದತೆ ಮೂಡುತ್ತದೆ ಮತ್ತು ಗ್ರಾಮದಲ್ಲಿ ಹಬ್ಬದ ವಾತಾವರಣ ಮೂಡುತ್ತದೆ.

**ಲಕ್ಷ್ಮಣ ಶಕ್ತಿ ಎಂಬ ವಿಶೇಷ ಕಾರ್ಯಕ್ರಮ:** ಲಕ್ಷ್ಮಣ ಶಕ್ತಿ ಎಂಬುದು ರಾಮಾಯಣದ ಯುದ್ಧಕಾಂಡದ ಒಂದು ಪ್ರಮುಖ ಘಟನೆಯನ್ನು ಸೂಚಿಸುತ್ತದೆ. ಲಂಕಾ ಯುದ್ಧದ ಸಮಯದಲ್ಲಿ ರಾವಣನ ಮಗನಾದ ಇಂದ್ರಜಿತ್ ಅಥವಾ ಕೆಲವು ಆವೃತ್ತಿಗಳ ಪ್ರಕಾರ ರಾವಣನು ಪ್ರಯೋಗಿಸಿದ ಅಮೋಘವಾದ "ಶಕ್ತಿ" ಎಂಬ ಅಸ್ತ್ರದಿಂದ ಲಕ್ಷ್ಮಣನು ಮೂರ್ಛೆ ಹೋದ ಪ್ರಸಂಗವಿದು.

ಲಕ್ಷ್ಮಣನು ಆದಿಶೇಷನ ಅವತಾರವೆಂದು ನಂಬಲಾಗಿದೆ. ಈ ಘಟನೆಯು ಭಕ್ತ ಮತ್ತು ಭಗವಂತನ ನಡುವಿನ ಸಂಬಂಧ ಹಾಗೂ ಹನುಮಂತನ ಅಪ್ರತಿಮ ಭಕ್ತಿಯನ್ನು ಸಾರುತ್ತದೆ.



ಕಮಲನಗರ: ತೋರಣಾ ಗ್ರಾಮದಲ್ಲಿ ನಡೆಯುತ್ತಿರುವ ಅಖಂಡ ಕಂಡ ಹರಿನಾಥ ಸಪ್ತಹ ಹಾಗೂ ಜ್ಞಾನೇಶ್ವರಿ ಪಾರಾಯಣ ಕಾರ್ಯಕ್ರಮದಲ್ಲಿ ಖ್ಯಾತ ಕೀರ್ತನಗಾತಿ ಸಾಕ್ಷಿದೀದಿ ಆಳಂದಕ್ಕರ ಅವರಿಂದ ಕೀರ್ತನೆ ಕಾರ್ಯಕ್ರಮ.



ಕಮಲನಗರ: ತೋರಣಾ ಗ್ರಾಮದಲ್ಲಿ ನಡೆಯುತ್ತಿರುವ ಅಖಂಡ ಕಂಡ ಹರಿನಾಥ ಸಪ್ತಹ ಹಾಗೂ ಜ್ಞಾನೇಶ್ವರಿ ಪಾರಾಯಣ ಕಾರ್ಯಕ್ರಮ ನಿಮಿತ್ಯ ನಡೆದ ಮೆರವಣಿಗೆ ಕಾರ್ಯಕ್ರಮದಲ್ಲಿ ಭಕ್ತರು ಪಾಲ್ಗೊಂಡಿರುವುದು.



ಕಮಲನಗರ: ತೋರಣಾ ಗ್ರಾಮದಲ್ಲಿ ನಡೆಯುತ್ತಿರುವ ಅಖಂಡ ಕಂಡ ಹರಿನಾಥ ಸಪ್ತಹ ಹಾಗೂ ಜ್ಞಾನೇಶ್ವರಿ ಪಾರಾಯಣ ಕಾರ್ಯಕ್ರಮದಲ್ಲಿ ಖ್ಯಾತ ಪ್ರವಚನಕಾರ ಅವರಿಂದ ನಡೆದ ಪ್ರವಚನ ಕಾರ್ಯಕ್ರಮದಲ್ಲಿ ಜನ ಶಾಂತವಾಗಿ ಕೇಳುತ್ತಿರುವುದು.




Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)